* ಭಾರತದ ನಂತರದ ಸ್ಥಾನದಲ್ಲಿ ಕ್ರಮೇಣವಾಗಿ ನೈಜೀರಿಯ, ಪಾಕಿಸ್ತಾನ, ಕಂಗೊ, ಇಥಿಯೋಪಿಯ, ಬಾಂಗ್ಲಾದೇಶ ಮತ್ತು ಚೀನಾ ದೇಶಗಳಿವೆ.
* ಈ ವರದಿಯು ಅತ್ಯಂತ ಕಡು ಬಡವರಿಗೆ ವೈದ್ಯಕೀಯ ಸೌಲಭ್ಯ ಸಿಗುವಂತೆ ಮಾಡಬೇಕು ಎಂದು ಈ ವರದಿಯು ಅಭಿಪ್ರಾಯಪಟ್ಟಿದೆ.

KPSC vaani




## 12 May 2023

### ಮೇ 12 - ಅಂತರರಾಷ್ಟ್ರೀಯ ದಾದಿಯರ ದಿನ(International Nurses Day)




* ಆಧುನಿಕ ಶುಶ್ರೂಷೆಯ ಸಂಸ್ಥಾಪಕ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನವನ್ನು 1965 ರಲ್ಲಿ, ಇಂಟರ್ನ್ಯಾಷನಲ್ ಕೌನ್ಸಿಲ್ ಆಫ್ ನರ್ಸ್ ಮೇ 12 ಅಂತರಾಷ್ಟ್ರೀಯ ದಾದಿಯರ ದಿನವಾಗಿ ಆಚರಿಸಲು ಪ್ರಾರಂಭಿಸಿತು

* ಅಂತರಾಷ್ಟ್ರೀಯ ದಾದಿಯರ ದಿನ 2023ರ ಥೀಮ್, "ನಮ್ಮ ದಾದಿಯರು. ನಮ್ಮ ಭವಿಷ್ಯ", ಎಂಬ ಧ್ಯೇಯ ವಾಕ್ಯದಡಿ ಅಂತರಾಷ್ಟ್ರೀಯ ದಾದಿಯರ ದಿನವನ್ನು ಆಚರಿಸಲಾಯಿತು.

* ಅಂತರರಾಷ್ಟ್ರೀಯ ದಾದಿಯರ ದಿನವು ಪ್ರಪಂಚದಾದ್ಯಂತದ ದಾದಿಯರ ಅಮೂಲ್ಯ ಕೊಡುಗೆಗಳನ್ನು ಗೌರವಿಸುವ ಮತ್ತು ಗುರುತಿಸುವ ಪ್ರಮುಖ ದಿನವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ದಾದಿಯರು ಪ್ರಮುಖ ಪಾತ್ರ ವಹಿಸುತ್ತಾರೆ ಮತ್ತು ರೋಗಿಗಳ ಯೋಗಕ್ಷೇಮ, ಸುರಕ್ಷತೆ ಮತ್ತು ಚೇತರಿಕೆಗೆ ಜವಾಬ್ದಾರರಾಗಿರುತ್ತಾರೆ.

### ರೈಲ್ವೆ ನೇಮಕಾತಿ : ಅಗ್ನಿ ವೀರರಿಗೆ ಶೇ 15 ಮೀಸಲಾತಿ



* ರೈಲ್ವೆಯ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಗ್ನಿವೀರರಿಗೆ ಶೇ 15ರಷ್ಟು ಒಟ್ಟು ಮೀಸಲಾತಿ, ವಯೋಮಿತಿಯಲ್ಲಿ ಸಡಿಲಿಕೆ ಹಾಗೂ ದೈಹಿಕ ಪರೀಕ್ಷೆಯಿಂದ ವಿನಾಯಿತಿ ನೀಡಲಿದೆ ಎಂದು ತಿಳಿಸಿದೆ.

* ರೈಲ್ವೆ ವಲಯಗಳ ಪ್ರಧಾನ ವ್ಯವಸ್ಥಾಪಕರಿಗೆ ಈ ಸಂಬಂಧ ಕ್ರಮ ಕೈಗೊಳ್ಳುವಂತೆ ರೈಲ್ವೆ ಮಂಡಳಿ ಪತ್ರ ಬರೆದಿದೆ.

* ಮೊದಲ ಬ್ಯಾಚ್‌ನ ಅಗ್ನಿವೀರರಿಗೆ ವಯೋಮಿತಿಯಲ್ಲಿ ಐದು ವರ್ಷ ಹಾಗೂ ನಂತರದ ಬ್ಯಾಚ್‌ಗಳು ಅಗ್ನಿವೀರರಿಗೆ ಮೂರು ವರ್ಷಗಳಷ್ಟು ಸಡಿಲಿಕೆ ನೀಡಲಾಗುವುದು. ರೈಲ್ವೆಯ ವಿವಿಧ ವಿಭಾಗಗಳಲ್ಲಿನ ಹಂತ-1 ಹಾಗೂ ಹಂತ-2 ಹಾಗೂ ಅದಕ್ಕೂ ಮೇಲ್ಪಟ್ಟ ಹುದ್ದೆಗಳಿಗೆ ಈ ಸೌಲಭ್ಯ ನೀಡಲಾಗುತ್ತದೆ ಎಂದು ತಿಳಿದು ಬಂದಿದೆ.

### ಜೂನ್.22 ರಂದು ಪ್ರಧಾನಿ ಮೋದಿ ಅಮೆರಿಕ ಪ್ರವಾಸ



* 2023ರ ಜೂನ್ 22ರಂದು ಅಮೆರಿಕ ಪ್ರವಾಸ ಕೈಗೊಳ್ಳುತ್ತಿರುವ ಪ್ರಧಾನಿ ಮೋದಿ ಅವರಿಗೆ ಅಮೆರಿಕ ಅಧ್ಯಕ್ಷ ಜೋ ಬಿಡನ್ ಮತ್ತು ಪ್ರಥಮ ಮಹಿಳೆ ಜಿಲ್ ಬಿಡೆನ್ ಆತಿಥ್ಯ ನೀಡಲಿದ್ದಾರೆ.

* ಶಿಕ್ಷಣದಿಂದ ಹಿಡಿದು ಹವಾಮಾನ ಬದಲಾವಣೆ ಸಮಸ್ಯೆಗಳ ಕುರಿತು ಮೋದಿ-ಬಿಡೆನ್ ನಡುವೆ ಚರ್ಚೆ, ಈ ಭೇಟಿಯು ಮುಕ್ತ, ಸಮೃದ್ಧ ಮತ್ತು ಸುರಕ್ಷಿತ ಇಂಡೋ-ಪೆಸಿಫಿಕ್ ಪ್ರದೇಶಕ್ಕೆ ಉಭಯ ದೇಶಗಳ ಹಂಚಿಕೆಯ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಶ್ವೇತಭವನ ಹೊರಡಿಸಿದ ಅಧಿಕೃತ ಹೇಳಿಕೆ ತಿಳಿಸಿದೆ.

* ರಕ್ಷಣೆ, ಶುದ್ಧ ಇಂಧನ ಮತ್ತು ಬಾಹ್ಯಾಕಾಶ ಸೇರಿದಂತೆ ನಮ್ಮ ಕಾರ್ಯತಂತ್ರದ ತಂತ್ರಜ್ಞಾನ ಪಾಲುದಾರಿಕೆಯನ್ನು ಹೆಚ್ಚಿಸುವ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ.

### ಭುವನೇಶ್ವರ: ಇಂಟರ್ ಕಾಂಟಿನೆಂಟಲ್ ಫುಟ್‌ಬಾಲ್ ಕ್ರೀಡಾಕೂಟ -2023



* ನಾಲ್ಕು ತಂಡಗಳು ಭಾಗವಹಿಸುವ ಇಂಟರ್ ಕಾಂಟಿನೆಂಟಲ್ ಫುಟ್ ಬಾಲ್ ಕ್ರೀಡಾಕೂಟವನ್ನು ಜೂನ್ 9 ರಿಂದ 18ರ ವರೆಗೆ ಒಡಿಶಾ ರಾಜಧಾನಿ ಭುವನೇಶ್ವರದಲ್ಲಿ ಆಯೋಜಿಸಲಾಗುತ್ತಿದೆ.
* ಪ್ರಸ್ತುತ ಇದು ಮೂರನೇ ಆವೃತ್ತಿಯಾಗಿದ್ದು ಈ ಹಿಂದೆ ಕ್ರೀಡಾಕೂಟದ ಎರಡು ಆವೃತ್ತಿಗಳನ್ನು ಮುಂಬೈ ಮತ್ತು ಅಹಮದಾಬಾದ್‌ನಲ್ಲಿ ಆಯೋಜಿಸಲಾಗಿತ್ತು. ಈ ಕ್ರೀಡಾಕೂಟದಲ್ಲಿ ಭಾರತ, ಲೆಬನಾನ್, ಮಂಗೋಲಿಯ ಮತ್ತು ವನೌಟೋ ರಾಷ್ಟ್ರಗಳು ಭಾಗವಹಿಸಲಿವೆ.

## ಜೈಪುರದಲ್ಲಿ ನಿರ್ಮಾಣವಾಗಲಿರುವ ವಿಶ್ವದ ಮೂರನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣ



* ರಾಜಸ್ಥಾನದ ಜೈಪುರದಲ್ಲಿ ವಿಶ್ವದ ಮೂರನೇ ಅತಿ ದೊಡ್ಡ ಹಾಗೂ ಭಾರತದ ಎರಡನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸಲು ರಾಜಸ್ಥಾನ ಕ್ರಿಕೆಟ್ ಅಸೋಸಿಯೇಷನ್ ವೇದಾಂತ್ ಹಿಂದೂಸ್ತಾನ್ ಜಿಂಕ್ ಲಿಮಿಟೆಡ್ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.
* ಜೈಪುರದ 'ಚೋಂಪ್' ಗ್ರಾಮದಲ್ಲಿ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣವಾಗಲಿದ್ದು,ಈ ಕ್ರೀಡಾಂಗಣಕ್ಕೆ ಅನಿಲ್ ಅಗರ್ವಾಲ್ ಅವರ ಹೆಸರನ್ನು ಇಡಲು ನಿರ್ಧರಿಸಲಾಗಿದೆ. ಇದು 75,000 ಆಸನ ಸಾಮರ್ಥ್ಯವಿರುವ ಕ್ರೀಡಾಂಗಣವಾಗಿ ಅಭಿವೃದ್ಧಿಪಡಿಸಲಾಗುತ್ತದೆ ಎಂದು ರಾಜಸ್ಥಾನದ ಕ್ರಿಕೆಟ್ ಅಸೋಸಿಯೇಷನ್ ಘೋಷಿಸಿದೆ.

## ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿಗೆ(NIIFL) ರಾಜೀವ್ ಧರ್ CEO ಮತ್ತು MD ಆಗಿ ನೇಮಕ



* ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಕರ್ಯ ನಿಧಿ ಲಿಮಿಟೆಡ್ (NIIFL) ಅಂತರ್ ರಾಷ್ಟ್ರೀಯ ಮತ್ತು ಭಾರತೀಯ ಹೂಡಿಕೆದಾರರಿಗೆ ಸಹಕಾರಿ ಹೂಡಿಕೆ ವೇದಿಕೆಯಾಗಿದ್ದು.ಮಂಧ್ಯಂತರ ಆಧಾರದಮೇಲೆ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಕಾರ್ಯನಿರ್ವಹಣಾಧಿಕಾರಿ ಯಾಗಿ ರಾಜೀವ್ ಧರ್ ಅವರನ್ನು ನೇಮಕ ಮಾಡಿದೆ.
* 2016 ರಲ್ಲಿ ಪ್ರಾರಂಭವಾದಾಗಿನಿಂದ NIIFL ನ MD ಮತ್ತು CEO ಆಗಿ ಸೇವೆ ಸಲ್ಲಿಸುತ್ತಿರುವ ಸುಜೋಯ್ ಬೋಸ್ ಅವರ ನಂತರ ರಾಜೀವ್ ಧರ್ ಅವರು ತಮ್ಮ ಅಧಿಕಾರ ವಹಿಸಿಕೊಂಡರು.

## ದೆಹಲಿ ಸರ್ಕಾರಕ್ಕೇ ಅಧಿಕಾರ: ಸುಪ್ರೀಂಕೋರ್ಟ್‌ನಲ್ಲಿ ಕೇಂದ್ರದ ವಿರುದ್ಧ ಎಎಪಿಗೆ ಜಯ



* ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿರುವ ಲೆಫ್ಟಿನೆಂಟ್ ಗವರ್ನರ್ ಜತೆ ಸದಾ ಕಿತ್ತಾಟ ನಡೆಸುತ್ತಿರುವ ದಿಲ್ಲಿಯಲ್ಲಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ಎಎಪಿ ಸರ್ಕಾರಕ್ಕೆ ದೊಡ್ಡ ಗೆಲುವು ಸಿಕ್ಕಿದೆ. ರಾಷ್ಟ್ರ ರಾಜಧಾನಿಯಲ್ಲಿನ ಸೇವೆಗಳ ಮೇಲಿನ ನಿಯಂತ್ರಣ ದಿಲ್ಲಿಯಲ್ಲಿನ ಚುನಾಯಿತ ಸರ್ಕಾರಕ್ಕೇ ಸೇರಿರುತ್ತದೆ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ.
* ಸೇವೆಗಳ ಮೇಲೆ ದಿಲ್ಲಿ ಸರ್ಕಾರ ನಿಜವಾದ ನಿಯಂತ್ರಣ ಹೊಂದಿರಬೇಕು ಹಾಗೂ ಲೆಫ್ಟಿನೆಂಟ್ ಗವರ್ನರ್, ಸರ್ಕಾರದ ನಿರ್ಧಾರಗಳಿಗೆ ಬದ್ಧರಾಗಿರಬೇಕು ಎಂದು ಸುಪ್ರೀಂಕೋರ್ಟ್‌ನ ಸಿಜೆಐ ಡಿವೈ ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ತೀರ್ಪು ನೀಡಿದ್ದಾರೆ.
* ದೆಹಲಿ ಸರಕಾರದ ಅಧಿಕಾರ :
1 ದೆಹಲಿ ಸರ್ಕಾರಕ್ಕೆ ನಾಗರಿಕ ಸೇವಾ ಅಧಿಕಾರಿಗಳ ಮೇಲೆ ಸಂಪೂರ್ಣ ನಿಯಂತ್ರಣವಿರಲಿದೆ. ಅದು ಆ ಸರ್ಕಾರಕ್ಕೆ ದತ್ತವಾದ ಸಂವಿಧಾನಾತ್ಮಕ ಹಕ್ಕು.
2 ಪ್ರಜಾಪ್ರಭುತ್ವದ ಮಾರ್ಗದಲ್ಲಿ ಚುನಾಯಿತಗೊಂಡಿರುವ ಸರ್ಕಾರ ತನ್ನ ಆಡಳಿತದ ಮೇಲೆ ನಿಯಂತ್ರಣ ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡಿರುತ್ತದೆ ಸೇವೆಗಾಗಿ ನಿಯುಕ್ತಿಗೊಂಡಿರುವ ಹಲವಾರು.
3 ದೆಹಲಿ ಸರ್ಕಾರ ಅಧಿಕಾರಿಗಳ ನೇಮಕಾತಿಯಲ್ಲಿ ಸಕ್ರಿಯವಾಗಿರದೆ ಇದ್ದರೂ ಅವರ ಮೇಲೆ ಅದಕ್ಕೆ ನಿಯಂತ್ರಣ ಇರುತ್ತದೆ. ಜನರಿಂದ ಆಯ್ಕೆಯಾದ ಸರ್ಕಾರಕ್ಕೆ ಅವರ ವ್ಯಾಪ್ತಿಯಲ್ಲಿನ ಅಧಿಕಾರಿಗಳನ್ನು ನಿಯಂತ್ರಿಸುವ ಅಧಿಕಾರ ನೀಡದಿದ್ದರೆ ಸಾಮೂಹಿಕ ಹೊಣೆಗಾರಿಕೆ ಸಿದ್ಧಾಂತ ಅರ್ಥ ಕಳೆದುಕೊಳ್ಳಲಿದೆ.

# 13 May 2023

## ವಾರಸಿಗುಡದಲ್ಲಿ ಪ್ರಧಾನಮಂತ್ರಿ ಜನೌಷಧಿ ಕೇಂದ್ರ ಉದ್ಘಾಟನೆ




* ಕೇಂದ್ರ ಪ್ರವಾಸೋದ್ಯಮ ಸಚಿವ ಜಿ ಕಿಶನ್ ರೆಡ್ಡಿ ಸಿಕಂದರಾಬಾದ್ ನ ವಾರಸಿಗುಡಾದಲ್ಲಿ ಪ್ರಧಾನಮಂತ್ರಿ ಜನೌಷಧಿ ಕೇಂದ್ರವನ್ನು ಉದ್ಘಾಟಿಸಿದರು .
* ಗುಣಮಟ್ಟದ ಜೆನರಿಕ್ ಔಷಧಗಳನ್ನು ಕಡಿಮೆ ದರದಲ್ಲಿ ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಯೋಜನೆ ಆರಂಭಿಸಲಾಗಿದೆ.
* ಉದ್ಘಾಟನೆಯ ಸಮಯದಲ್ಲಿ, ಶ್ರೀ ರೆಡ್ಡಿ ಅವರು ಕೈಗೆಟುಕುವ ಆರೋಗ್ಯ ಸೇವೆಯನ್ನು ಒದಗಿಸುವಲ್ಲಿ ಮತ್ತು ಯುವಕರಿಗೆ ಸ್ವಯಂ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಲ್ಲಿ ಈ ಜನೌಷಧಿ ಕೇಂದ್ರಗಳ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದರು.

KPSC Vaani

## 26 ರೈಲು ನಿಲ್ದಾಣಗಳಲ್ಲಿ 'ಒಂದು ನಿಲ್ದಾಣ ಒಂದು ಉತ್ಪನ್ನ'ಯೋಜನೆ ಆರಂಭ



ಸ್ಥಳೀಯ/ದೇಸಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಿ ಕರಕುಶಲಕರ್ಮಿಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ರೈಲ್ವೆ ಇಲಾಖೆಯು ಕರ್ನಾಟಕ 26 ರೈಲು ನಿಲ್ದಾಣಗಳಲ್ಲಿ 'ಒಂದು ನಿಲ್ದಾಣ-ಒಂದು ಉತ್ಪನ್ನ' ಯೋಜನೆಯನ್ನು ಆರಂಭಿಸಿದೆ. 21 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳ 728 ನಿಲ್ದಾಣಗಳಲ್ಲಿ ಈ ಯೋಜನೆಯು ಆರಂಭವಾಗಿದೆ. ಈ ಯೋಜನೆಯಡಿ ರೈಲ್ವೆ ನಿಲ್ದಾಣಗಳಲ್ಲಿ ಮಳಿಗೆಗಳನ್ನು ತೆರೆಯಲಾಗುತ್ತದೆ. ಸ್ಥಳೀಯ ಉತ್ಪನ್ನಗಳ ಮಾರಾಟ ಹಾಗೂ ಪ್ರದರ್ಶನ ಮಾಡಲಾಗುತ್ತದೆ. ಆಯಾ ಪ್ರದೇಶದ ನಿರ್ದಿಷ್ಟ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡಲಾಗುತ್ತದೆ.ಸ್ಥಳೀಯ ನೇಕಾರರ ಕೈಮಗ್ಗಗಳು, ಸ್ಥಳೀಯ ಬುಡಕಟ್ಟು ಸಮುದಾಯದವರು ಮಾಡಿದ ಕಲಾಕೃತಿಗಳು, ಕರಕುಶಲ ವಸ್ತುಗಳು, ಮಸಾಲೆ ಚಹಾ, ಕಾಫಿ, ಸಂಸ್ಕರಿತ ಆಹಾರ ಪದಾರ್ಥಗಳು/ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

## ಶನಿ ಗ್ರಹದ ಉಪಗ್ರ "ಎನ್‌ಸೆಲಡಸ್" ಅಧ್ಯಯನಕ್ಕೆ ಉರಗರೂಪದ ರೊಬೋಟ್ ಕಳುಹಿಸಿದ ನಾಸಾ!



- ಅಮೇರಿಕದ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಪ್ರಯೋಗವೊಂದಕ್ಕೆ ಈಗ ನಾಸಾ ಮುಂದಾಗಿದೆ. ಶನಿ ಗ್ರಹದ ಉಪಗ್ರಹವಾದ "ಎನ್ ಸೆಲಡಸ್'ನ ಅಂಗಳದಲ್ಲಿ ಅಧ್ಯಯನ ನಡೆಸಲು ಹಾವಿನ ಆಕಾರದ ರೊಬೋಟ್‌ವೊಂದನ್ನು ನಾಸಾವು ಅಭಿವೃದ್ಧಿಪಡಿಸುತ್ತಿದೆ.
- ಎನ್‌ಸೆಲಡಸ್‌ನಲ್ಲಿನ ಭೌಗೋಳಿಕ ರಚನೆಯನ್ನು ಅಭ್ಯಸಿಸಿ, ಅದು ವಾಸಯೋಗ್ಯವೇ, ಅಲ್ಲಿ ಜೀವಸಂಕುಲದ ಕುರುಹೇನಾದರೂ ಇದೆಯೇ ಎಂಬ ಬಗ್ಗೆ ಈ ರೊಬೋಟ್ ಅಧ್ಯಯನವನ್ನು ಮಾಡಲಿದೆ.
- ಈ ಅಧ್ಯಯನಕ್ಕೆಂದೇ ಎಕೊಬಯಾಲಜಿ ಎಕ್ಸ್‌ಟೆಂಟ್ ಲೈಫ್ ಸರ್ವೇಯರ್(ಈಲ್ಸ್) ಎಂಬ ಸಂಚಾರಿ ಸಾಧನವನ್ನು ನಾಸಾ ಅಭಿವೃದ್ಧಿಪಡಿಸುತ್ತಿದೆ. ಈ ಸಾಧನವು ನೋಡಲು ಹಾವಿನಂತಿರಲಿದೆ. ಉಬ್ಬು, ತಗ್ಗು ಸೇರಿದಂತೆ ಎಲ್ಲ ರೀತಿಯ ಭೂ ಪ್ರದೇಶದಲ್ಲೂ ಸರಳವಾಗಿ ಸಂಚರಿಸಲು ಆಗಬೇಕು ಎಂಬ ಕಾರಣದಿಂದಲೇ ಇದಕ್ಕೆ ಹಾವಿನ ಆಕಾರವನ್ನು ನೀಡಲಾಗುತ್ತಿದೆ.

## ಜಗತ್ತಿನ ಪ್ರಪ್ರಥಮ ರೊಬಾಟಿಕ್ ಚೆಕ್-ಇನ್ ಸಹಾಯಕಿ ಸಾರಾ



* ಇದು ಮಾನವ ಸಹಾಯಕಿ ಅಲ್ಲ; ಬದಲಿಗೆ ರೋಬಾಟಿಕ್ ಸಹಾಯಕಿ. ಇದಕ್ಕೆ 'ಸಾರಾ' ಎಂದು ನಾಮಕರಣ ಮಾಡಲಾಗಿದೆ.
* ಈ ಹೊಸ ಆವಿಷ್ಕಾರಕ ಸೇರ್ಪಡೆಯೊಂದಿಗೆ ಗ್ರಾಹಕರ ಅನುಭವವನ್ನು ಸುಧಾರಿಸಲು ಹಾಗೂ ಚೆಕ್-ಇನ್ ಪ್ರಕ್ರಿಯೆಯನ್ನು ಸುಗಮ ಗೊಳಿಸಲು ಎಮಿರೇಟ್ಸ್ ಏರ್‌ಲೈನ್ಸ್ ಉದ್ದೇಶಿಸಿದೆ.
* * ಚೆಕ್-ಇನ್ ಪ್ರಕ್ರಿಯೆಗೆ ಅನುಕೂಲ

- ದುಬೈ ಹಣಕಾಸು ಜಿಲ್ಲೆಯಲ್ಲಿ ಎಮಿರೇಟ್ಸ್ ಹೊಂದಿರುವ ಹೊಸ ಸಿಟಿ ಚೆಕ್-ಇನ್ ಮತ್ತು ಟ್ರಾವೆಲ್ ಸ್ಟೋರ್‌ನಲ್ಲಿ ಚೆಕ್-ಇನ್ ಪ್ರಕ್ರಿಯೆಯ ಅನುಕೂಲಕ್ಕಾಗಿ ರೊಬೊಟಿಕ್ ಸಹಾಯಕಿಯನ್ನು ವಿನ್ಯಾಸಗೊಳಿಸಲಾಗಿದೆ.
- ಮುಖ ನೋಡಿ ಗುರುತಿಸುವ (ಫೇಷಿಯಲ್ ರೆಕಗ್ನಿಶನ್) ತಂತ್ರಜ್ಞಾನವನ್ನು ಅಳವಡಿಸಲಾಗಿರುವ 'ಸಾರಾ', ಸ್ಕ್ಯಾನ್ ಮಾಡಲಾದ ಪಾಸ್‌ಪೋರ್ಟ್‌ಗಳೊಂದಿಗೆ ಮುಖವನ್ನು ಹೋಲಿಕೆ ಮಾಡಿ ಪ್ರಯಾಣಿಕರನ್ನು ಒಳಗೆ ಬಿಡುತ್ತದೆ ಹಾಗೂ ಲಗೇಜ್ ಇಡುವ ಸ್ಥಳಕ್ಕೆ ಮಾರ್ಗ ದರ್ಶನ ನೀಡುತ್ತದೆ.
- ಬೋರ್ಡಿಂಗ್ ಪಾಸ್‌ಗಳನ್ನು ಕೂಡ ಮುದ್ರಿಸುವ ಕ್ಷಮತೆ ಹೊಂದಿರುವ ರೊಬೊಟ್, ಚೆಕ್-ಇನ್ ಪ್ರಕ್ರಿಯೆಯನ್ನು ಹೆಚ್ಚು ದಕ್ಷಗೊಳಿಸಲಿದೆ.

## ಮೋಚಾ ಚಂಡಮಾರುತ : ಪಶ್ಚಿಮ ಬಂಗಾಳದಲ್ಲಿ ಮುನ್ನೆಚ್ಚರಿಕೆ



* ಮೋಚಾ ಚಂಡಮಾರುತದ ಸಂಭವನೀಯ ಹಾನಿ ತಗ್ಗಿಸಲು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಶ್ಚಿಮ ಬಂಗಾಳ ಸರಕಾರ ತೆಗೆದುಕೊಂಡಿದೆ. ಕರಾವಳಿ ತೀರದ ಮತ್ತು ತಗ್ಗುಪ್ರದೇಶಗಳ ಜನವನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.
* ಮೂರು ದಿನ ಸಮುದ್ರಕ್ಕೆ ಇಳಿಯದಂತೆ ಮೀನುಗಾರರು ಮತ್ತು ಪ್ರವಾಸಿಗರಿಗೆ ಎಚ್ಚರಿಕೆ ನೀಡಲಾಗಿದೆ.
* ಹೆಚ್ಚು ಪ್ರವಾಸಿಗರು ಭೇಟಿ ನೀಡುವ ದಿಘಾ, ಶಂಕರಾಪುರ, ಬಖ್ಖಾಳಿ ಪ್ರದೇಶಗಳಿಗೆ ಈಗಾಗಲೇ ವಿಪತ್ತು ನಿರ್ವಹಣಾ ತಂಡಗಳು, ಸ್ವಯಂ ಸೇವಕರು ತಲುಪಿದ್ದಾರೆ.
* ಮೋಚಾ ಚಂಡಮಾರುತವು ಬಾಂಗ್ಲಾದೇಶ ಮಯನ್ಮಾರ್ ಗಡಿಯನ್ನು ಅಪ್ಪಳಿಸುವ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

KPSC Vaani

## 15 May 2023

### ಮೇ 14 ವಿಶ್ವ ತಾಯಂದಿರ ದಿನ 2023




* ದೇಶದಾದ್ಯಂತ ಪ್ರತಿ ವರ್ಷ ಮೇ ತಿಂಗಳ ಎರಡನೇ ಭಾನುವಾರವನ್ನು ವಿಶ್ವ ತಾಯಂದಿರ ದಿನ ಎಂದು ಆಚರಿಸಲಾಗುತ್ತದೆ. ಈ ವರ್ಷ ಮೇ 14 ರಂದು ವಿಶ್ವ ತಾಯಂದಿರ ದಿನವನ್ನು ಆಚರಿಸಲಾಯಿತು.
* ಪ್ರಪಂಚದಾದ್ಯಂತ ವಿವಿಧ ದಿನಾಂಕಗಳಲ್ಲಿ ತಾಯಂದಿರ ದಿನವನ್ನು ಆಚರಿಸಲಾಗುತ್ತದೆ. ಆದರೆ ಯುನೈಟೆಡ್ ಸ್ಟೇಟ್ಸ್, ಭಾರತ, ನ್ಯೂಜಿಲೆಂಡ್ ಮತ್ತು ಕೆನಡಾ ಸೇರಿದಂತೆ ಸಾಕಷ್ಟು ದೇಶಗಳು ಪ್ರತಿ ವರ್ಷ ಮೇ ತಿಂಗಳ ಎರಡನೇ ಭಾನುವಾರದಂದು ತಾಯಂದಿರ ದಿನವನ್ನು ಆಚರಿಸುತ್ತದೆ.
* ಪ್ರಾಚೀನ ಗ್ರೀಕರು ಮತ್ತು ರೋಮನ್ನರು ತಾಯಂದಿರು ಮತ್ತು ಮಾತೃತ್ವವನ್ನು ಗೌರವಿಸಲು ರಿಯಾ ಮತ್ತು ಸೈಬೆಲೆ ದೇವತೆಯನ್ನು ಗೌರವಿಸಲು ಈ ದಿನವನ್ನು ಆಚರಿಸಿದರು.
* 1872 ರಲ್ಲಿ ತಾಯಂದಿರ ದಿನವನ್ನು ಪ್ರಾರಂಭಿಸಿದ ಮೊದಲ ಮಹಿಳೆ ಜೂಲಿಯಾ ವಾರ್ಡ್ ಹೋವ್. ವೆಸ್ಟ್ ವರ್ಜೀನಿಯಾದ ಕಾರ್ಯಕರ್ತೆ ಅನ್ನಾ ಜಾರ್ವಿಸ್ ಅವರು ತಾಯಂದಿರ ದಿನದ ಮಾದರಿಯೊಂದಿಗೆ ಒಂದು ಕಲ್ಪನೆಯನ್ನು ಕಂಡುಕೊಂಡಿದ್ದಾರೆ.

### ಡೇಟಾ ಆಡಳಿತ ಗುಣಮಟ್ಟ ಸೂಚ್ಯಂಕ ಸಮೀಕ್ಷೆಯ ವರದಿ ಬಿಡುಗಡೆ




* ಬಂದರುಗಳು, ಶಿಪ್ಪಿಂಗ್ ಮತ್ತು ಜಲಮಾರ್ಗಗಳ ಸಚಿವಾಲಯ ಡೇಟಾ ಆಡಳಿತ ಗುಣಮಟ್ಟ ಸೂಚ್ಯಂಕ (DGQI) ಎಂದು ಕರೆಯಲ್ಪಡುವ ಪ್ರಭಾವಶಾಲಿ ಮೌಲ್ಯಮಾಪನದಲ್ಲಿ ಎರಡನೇ ಸ್ಥಾನದಲ್ಲಿದೆ ಎಂದು ವರದಿ ತಿಳಿಸಿದೆ.
* ಡೇಟಾ ಆಡಳಿತ ಗುಣಮಟ್ಟ ಸೂಚ್ಯಂಕ ಮೌಲ್ಯಮಾಪನವು ಆರು ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿದ್ದು, ಅವುಗಳೆಂದರೆ ಡೇಟಾ ಉತ್ಪಾದನೆ, ಡೇಟಾ ಗುಣಮಟ್ಟ, ತಂತ್ರಜ್ಞಾನ ಬಳಕೆ, ಡೇಟಾ ವಿಶ್ಲೇಷಣೆ, ಬಳಕೆ ಮತ್ತು ವಿತರಣೆ, ಡೇಟಾ ಭದ್ರತೆ ಮತ್ತು ಮಾನವ ಸಂಪನ್ಮೂಲ ಸಾಮರ್ಥ್ಯ ಮತ್ತು ಕೇಸ್ ಸ್ಟಡೀಸ್ ಡೇಟಾ ಆಡಳಿತ ಗುಣಮಟ್ಟ ಸೂಚ್ಯಂಕ ಮೌಲ್ಯಮಾಪನವು ಆರು ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿದೆ.

### ಅಂತಾರಾಷ್ಟ್ರೀಯ ಕುಟುಂಬಗಳ ದಿನ - ಮೇ 15




* ಕುಟುಂಬಗಳ ಮೇಲೆ ಆಗುವ ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ಪ್ರತಿ ವರ್ಷ ಮೇ 15 ರಂದು ಅಂತಾರಾಷ್ಟ್ರೀಯ ಕುಟುಂಬಗಳ ದಿನವನ್ನಾಗಿ ಆಚರಿಸಲಾಗುತ್ತದೆ.
* ವಿಶ್ವಸಂಸ್ಥೆ 1993ರ ಸಾಮಾನ್ಯ ಸಭೆಯಲ್ಲಿ ಈ ದಿನಾಚರಣೆಯನ್ನು ಘೋಷಿಸಿತು .1995 ರಿಂದ ಈ ದಿನವನ್ನು ಪ್ರತಿ ವರ್ಷ ಆಚರಿಸಲಾಗುತ್ತದೆ.
* ಸಾಮಾಜಿಕ , ಆರ್ಥಿಕ ಜನಸಂಖ್ಯೆ ಬೆಳವಣಿಗೆಯಿಂದ ಸಮುದಾಯದ ಮೂಲ ಘಟಕವಾದ ಕುಟುಂಬಗಳ ಮೇಲೆ ಆಗುವ ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ಪ್ರತಿ ವರ್ಷ ಮೇ 15 ರಂದು ಅಂತಾರಾಷ್ಟ್ರೀಯ ಕುಟುಂಬಗಳ ದಿನವನ್ನಾಗಿ ಆಚರಿಸಲಾಗುತ್ತದೆ.

### ಕರ್ನಾಟಕ ವಿಧಾನ ಸಭೆ ಚುನಾವಣೆಯ ಅಂತಿಮ ಫಲಿತಾಂಶ



* ಕರ್ನಾಟಕ ವಿಧಾನ ಸಭೆ ಚುನಾವಣೆಯ ಅಂತಿಮ ಫಲಿತಾಂಶ ಮೇ 13 (ಶನಿವಾರ)ರಂದು 224 ಕ್ಷೇತ್ರಗಳ ಪೈಕಿ :
- ಕಾಂಗ್ರೆಸ್ ಪಕ್ಷವು 135 ಸ್ಥಾನಗಳಲ್ಲಿ,
- ಬಿಜೆಪಿ ಪಕ್ಷವು 66 ಸ್ಥಾನ ಗಳಿಸಿದ್ದು,
- ಜೆಡಿಎಸ್ ಪಕ್ಷವು 19 ಸ್ಥಾನ ಗಳಿಸಿದೆ.
* ಕರ್ನಾಟಕ ವಿಧಾನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 1,67,89,082 ಮತಗಳಿಂದ ಜಯ ಗಳಿಸಿದ್ದು, ಬಿಜೆಪಿ ಪಕ್ಷವು 1,40,96,029 ಮತಗಳಿಂದ ಗಳಿಸಿದ್ದು, ಮತ್ತು ಜೆಡಿಎಸ್ ಪಕ್ಷವು 52,05,478 ಮತಗಳನ್ನು ಗಳಿಸಿದೆ.

### ಸಿಬಿಐ ನಿರ್ದೇಶಕರಾಗಿ ಡಿಜಿಪಿ ಪ್ರವೀಣ್ ಸೂದ್ ರವರ ನೇಮಕ



* ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ರನ್ನಾಗಿ ಕರ್ನಾಟಕ ಕೇಡರ್ ನ 1986ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಪ್ರವೀಣ್ ಸೂದ್ ಅವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಕೇಂದ್ರೀಯ ತನಿಖಾ ದಳದ (ಸಿಬಿಐ) ನಿರ್ದೇಶಕರಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ.

KPSC vaani

* ಪ್ರಧಾನಿ ನರೇಂದ್ರ ಮೋದಿ, ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಅವರನ್ನು ಒಳಗೊಂಡ ತ್ರಿಸದಸ್ಯ ನೇಮಕಾತಿ ಸಮಿತಿಯಲ್ಲಿ (ಶನಿವಾರ)ರಂದು ಪ್ರವೀಣ್ ಸೂದ್ ರವರ ಹೆಸರನ್ನು ಅಂತಿಮಗೊಲಿಸಲಾಗಿದೆ.

## ಭಾರತೀಯ ಜಾಗತಿಕ ರಾಯಭಾರಿಯಾಗಿ ಆಲಿಯಾ ಭಟ್ ನೇಮಕ



* ಆಲಿಯಾ ಭಟ್ ಗುಸ್ಸಿಯ ಮೊದಲ ಭಾರತೀಯ ಜಾಗತಿಕ ರಾಯಭಾರಿಯಾಗಿದ್ದಾರೆ.ವರದಿಯ ಪ್ರಕಾರ ಮುಂದಿನ ವಾರ ಸಿಯೋಲ್‌ನಲ್ಲಿ ನಡೆಯಲ್ಲಿರುವ ಗುಸ್ಸಿ ಕ್ರೂಸ್ 2024 ಪ್ರದರ್ಶನದಲ್ಲಿ ಆಲಿಯಾ ಬ್ರ್ಯಾಂಡ್‌ನ ರಾಯಭಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ.
* ಸಿಯೋಲ್‌ನಲ್ಲಿ ನಡೆಯಲಿರುವ ಗುಸ್ಸಿ ಕ್ರೂಸ್ 2024 ರನ್‌ವೇ ಪ್ರದರ್ಶನದಲ್ಲಿ ನಟ, ನಿರ್ಮಾಪಕ ಮತ್ತು ವಾಣಿಜ್ಯೋದ್ಯಮಿ ಐಷಾರಾಮಿ ಫ್ಯಾಶನ್ ಹೌಸ್‌ನ ಮುಖವಾಗಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲಿದ್ದು, ಇದು ನಗರದ ಜಿಯೊಂಗ್‌ಬೊಕ್‌ಗುಂಗ್ ಅರಮನೆಯಲ್ಲಿ ನಡೆಯಲಿದೆ.
* ಆಲಿಯಾ ಭಟ್ ರವರು 'ಇನ್ ಹಾನರ್ ಆಫ್ ಕಾರ್ಲ್' ಥೀಮ್‌ಗೆ ಅನುಗುಣವಾಗಿ ಗೌನ್ ಧರಿಸಲಾಗಿದ್ದು, ಅವರು ಉದ್ದವಾದ ರೈಲು ಮತ್ತು ಸುಮಾರು 1 ಲಕ್ಷ ಮುತ್ತುಗಳು ಮತ್ತು ಹರಳಿನ ಅಲಂಕಾರಗಳನ್ನು ಒಳಗೊಂಡಿರುವ ಬಿಳಿ ವಧುವಿನ ಗೌನ್ ಧರಿಸಿದ್ದರು.






## ಫೈನಾನ್ಸ್ ಕಾರ್ಪೊರೇಷನ್ ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಪರ್ಮಿಂದರ್ ಚೋಪ್ರಾ ನೇಮಕ



* ನಿವ್ವಳ ಮೌಲ್ಯದ ಮೂಲಕ ಭಾರತದ ಅತಿದೊಡ್ಡ ಬ್ಯಾಂಕಿಂಗ್ ಅಲ್ಲದ ಹಣಕಾಸು ಕಂಪನಿ (NBFC) ಪವರ್ ಫೈನಾನ್ಸ್ ಕಾರ್ಪೊರೇಷನ್ ನ ಮುಂದಿನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಪಬ್ಲಿಕ್ ಎಂಟರ್‌ಪ್ರೈಸ್ ಸೆಲೆಕ್ಷನ್ ಬೋರ್ಡ್ (PESB) ಪರ್ಮಿಂದರ್ ಚೋಪ್ರಾ ಅವರನ್ನು ಶಿಫಾರಸು ಮಾಡಿದೆ.
* 2022-23ರ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ, ಪವರ್ ಫೈನಾನ್ಸ್ ಕಾರ್ಪೊರೇಷನ್ ನ ತನ್ನ ಏಕೀಕೃತ ನಿವ್ವಳ ಲಾಭದಲ್ಲಿ ವರ್ಷದಿಂದ ವರ್ಷಕ್ಕೆ 7% ಬೆಳವಣಿಗೆಯನ್ನು ಅನುಭವಿಸಿದೆ, ಅದು ₹5,241.10 ಕೋಟಿಗೆ ತಲುಪಿದ್ದು, ಕಂಪನಿಯ ಒಟ್ಟು ಆದಾಯವು ತ್ರೈಮಾಸಿಕದಲ್ಲಿ ₹19,662.65 ಕೋಟಿಗೆ ಏರಿಕೆಯಾಗಿದೆ.

# 16 May 2023

## ಭಾರತದ ರಕ್ಷಣಾ ಸಚಿವಾಲಯವು 928 ವಸ್ತುಗಳ ಆಮದು ನಿಷೇಧ



* "ರಕ್ಷಣಾದಲ್ಲಿ 'ಆತ್ಮನಿರ್ಭರ್ತರ್'ವನ್ನು ಉತ್ತೇಜಿಸಲು ಮತ್ತು ರಕ್ಷಣಾ ಸಾರ್ವಜನಿಕ ವಲಯದ ಸಂಸ್ಥೆಗಳಿಂದ ಆಮದುಗಳನ್ನು ಕಡಿಮೆ ಮಾಡಲು, ರಕ್ಷಣಾ ಸಚಿವಾಲಯವು 928 ಕಾರ್ಯತಂತ್ರವಾಗಿ ಮುಖ್ಯವಾದ ಲೈನ್ ರಿಪ್ಲೇಸ್‌ಮೆಂಟ್ ಯುನಿಟ್‌ಗಳು/ಉಪ-ವ್ಯವಸ್ಥೆಗಳು/ಸ್ಪೇರ್‌ಗಳು ಮತ್ತು ಘಟಕಗಳ ನಾಲ್ಕನೇ ಧನಾತ್ಮಕ ಸ್ವದೇಶೀಕರಣ ಪಟ್ಟಿಯನ್ನು ಅನುಮೋದಿಸಿದೆ.
* ರಕ್ಷಣಾ ಸಚಿವಾಲಯವು ಈವರೆಗೆ ಸುಮಾರು 12,38 ವಸ್ತುಗಳ ಆಮದನ್ನು ನಿಷೇದಿಸಲಾಗಿದ್ದು, ನಿಷೇಧಿಸಲಾಗಿರುವ ಎಲ್ಲಾ ವಸ್ತುಗಳನ್ನು ಭಾರತದಲ್ಲೇ ತಯಾರಿಸಲು ರಕ್ಷಣಾ ಸಚಿವಾಲಯವು ಕ್ರಮ ಕೈಗೊಂಡಿದೆ.

## ಕೇಂದ್ರ ಸರ್ಕಾರದಿಂದ 'ಮೇರಿ ಲೈಫ್' ಮೊಬೈಲ್ ಆಯಪ್ ಅನಾವರಣ




* ಕೇಂದ್ರ ಸರ್ಕಾರವು ಸೋಮವಾರ 'ಮೇರಿ ಲೈಫ್' (ನನ್ನ ಬದುಕು) ಮೊಬೈಲ್ ಆಯಪ್ ಅನಾವರಣಗೊಳಿಸಿದೆ.

* ಪ್ರಧಾನಿ ನರೇಂದ್ರ ಮೋದಿಯವರ 'ಮಿಷನ್ ಲೈಫ್' ಆಯಪ್‌ನಿಂದ ಪ್ರೇರಣೆಗೊಂಡು ಇದನ್ನು ಅಭಿವೃದ್ಧಿಪಡಿಸಲಾಗಿದೆ. ಮೇರಿ ಲೈಫ್ ನಲ್ಲಿನ 'ಲೈಫ್' ಎಂಬ ಪದವು ಪರಿಸರಕ್ಕಾಗಿ ಜೀವನಶೈಲಿ ಎಂಬ ಅರ್ಥವನ್ನು ಕೊಡುತ್ತದೆ.

* ಯುವಕರನ್ನು ಸಶಕ್ತಗೊಳಿಸುವ ಹಾಗೂ ಹವಾಮಾನ ಬದಲಾವಣೆಗೆ ಕಡಿವಾಣ ಹಾಕುವ ಕಾರ್ಯದಲ್ಲಿ ಅವರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಸೋಮವಾರ 'ಮೇರಿ ಲೈಫ್' (ನನ್ನ ಬದುಕು) ಮೊಬೈಲ್ ಆಯಪ್ ಅನಾವರಣಗೊಳಿಸಿದೆ.

## 26 ಬಾರಿ ಮೌಂಟ್ ಎವರೆಸ್ಟ್ ಏರಿ ದಾಖಲೆ ಬರೆದ ನೇಪಾಳದ ಶೆರ್ಪಾ



* ನೇಪಾಳದ ಶೆರ್ಪಾ ಮಾರ್ಗದರ್ಶಿಯಾದ 46 ವಯಸ್ಸಿನ ಪಸಂಗ್ ದವಾ ಅವರು ಬರೋಬ್ಬರಿ 26 ಬಾರಿ ಮೌಂಟ್ ಎವರೆಸ್ಟ್ ಏರುವ ಮೂಲಕ ದಾಖಲೆ ನಿರ್ಮಿಸಲಾಗಿದ್ದು, ಈ ಮೂಲಕ ಮೇ 14 ರಂದು ಮೌಂಟ್ ಎವರೆಸ್ಟ್ ನ 29,032 ಅಡಿ ಎತ್ತರವನ್ನು ತಲುಪುವ ಮೂಲಕ ಈ ಸಾಧನೆ ಮಾಡಿದ್ದಾರೆ.

* ಪಸಂಗ್ ದವಾ ರವರು ಹಂಗೇರಿಯ ಪರ್ವತಾರೋಹಿಯೊಂದಿಗೆ ಮೌಂಟ್ ಎವರೆಸ್ಟ್‌ನ ತುತ್ತತುದಿ ತಲುಪಿದ್ದಾರೆ ಎಂದು ಆಯೋಜಕ ಸಂಸ್ಥೆ ಇಮ್ಯಾಜಿನ್ ನೇಪಾಳ ಟ್ರೆಕ್ಸ್ ಸಂಸ್ಥೆಯು ತಿಳಿಸಿದೆ.

* 1998ರಲ್ಲಿ ಇವರು ಮೊದಲ ಬಾರಿಗೆ ಎವರೆಸ್ಟ್ ಏರಿದ್ದರು. 1953ರಲ್ಲಿ ಮೊದಲ ಬಾರಿಗೆ ನ್ಯೂಜಿಲೆಂಡ್‌ನ ಪರ್ವತಾರೋಹಿ ಎಡ್ಮಂಡ್ ಹಿಲರಿ, ಮಾರ್ಗದರ್ಶಕ ತೇನ್ ಸಿಂಗ್ ನೋರ್ಗೆ ಮೌಂಟ್ಎ ವರೆಸ್ಟ್ ಏರಿದ್ದರು.

## ಕೆ.ಇ.ರಾಧಾಕೃಷ್ಣ ಅವರಿಗೆ 'ಚಾವುಂಡರಾಯ ಪ್ರಶಸ್ತಿ



* ಶ್ರವಣಬೆಳಗೊಳದ ಚಾರು ಕೀರ್ತಿಭಟ್ಟಾರಕ ಸ್ವಾಮೀಜಿರವರು ಎಸ್ ಡಿಜಿಎಂಎ ಮ್ಯಾನೇಜ್ ಮೆಂಟ್ ಸಮಿತಿಯ ಪರವಾಗಿ ದತ್ತಿನಿಧಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಲಾದ 2022 ನೇ ಸಾಲಿನ ಚಾವುಂಡರಾಯ ಪ್ರಶಸ್ತಿಗೆ ಲೇಖಕ ಮತ್ತು ನಿವೃತ್ತ ಪ್ರಾಧ್ಯಾಪಕರಾದ ಕೆ.ಇ.ರಾಧಾಕೃಷ್ಣ ರವರು 'ಚಾವುಂಡರಾಯ ಪ್ರಶಸ್ತಿ' ಗೆ ಭಾಜನರಾಗಿದ್ದಾರೆ.

* ಈ ಚಾವುಂಡರಾಯ ಪ್ರಶಸ್ತಿಯು 30 ಸಾವಿರ ನಗದು, ಪ್ರಶಸ್ತಿ ಫಲಕ ಮತ್ತು ತಾಂಬೂಲ ಒಳಗೊಂಡಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಶ ಜೋಶಿ ರವರು ತಿಳಿಸಿದ್ದಾರೆ.

* ಜಿನಸೇನಾಚಾರ್ಯ ಮತ್ತು ಗುಣಭದ್ರಾಚಾರ್ಯ ರವರು ರಚಿಸಿದ ಸಂಸ್ಕೃತದ ಜೈನ ಮಹಾಪುರಾಣವನ್ನು ಶಾಂತಿರಾಜ ಶಾಸ್ತ್ರಿಯವರು ಕನ್ನಡಕ್ಕೆ ಅನುವಾದಿಸಲಾಗಿದ್ದು, ಜಿನಸೇನಾಚಾರ್ಯ ಮತ್ತು ಗುಣಭದ್ರಾಚಾರ್ಯ ಈ ಕೃತಿಗಳನ್ನು ರಾಧಾಕೃಷ್ಣ ರವರು ಇಂಗ್ಲಿಷ್ ಗೆ ಅನುವಾದಿಸಿದ್ದಾರೆ ಎಂದು ಈ ಕೃತಿಗೆ ಪ್ರಶಸ್ತಿ ದೊರಕಿದೆ ಎಂದು ತಿಳಿಸಿದ್ದಾರೆ.

## ಸಾರ್ಕ್ ಶೃಂಗಸಭೆ



* ಸ್ಥಳೀಯ ವಿಚಾರಗಳ ಬಗ್ಗೆ ಸಮಾಲೋಚನ ನಡೆಸಲು ಸಾರ್ಕ್ ಶೃಂಗಸಭೆ ಆಯೋಜಿಸಲು ಕ್ರಮ ಕೈಗೊಳ್ಳಿ, ಪಾಕಿಸ್ತಾನದ ಸದ್ಯದ ಸಂಕಷ್ಟ ನಿವಾರಿಸಲು ಸಾರ್ಕ್ ಶೃಂಗದಂತಹ ಸಭೆ ನಡೆಸಿದರೆ ಭಾರತ ವಿಶ್ವಗುರುವಾಗಲು ಸಹಾಯವಾಗಲಿದೆ, ಎಂದು ಮುಫ್ತಿ ಅಭಿಪ್ರಾಯಪಟ್ಟಿದ್ದಾರೆ.

* ದಕ್ಷಿಣ ಏಷ್ಯಾದ ಎಂಟು ರಾಷ್ಟ್ರಗಳು ಸೇರಿ ಸಾರ್ಕ್ ರಚಿಸಿಕೊಂಡಿರುವ ಒಂದು ಅಂತಾರಾಷ್ಟ್ರೀಯ ಪ್ರಾದೇಶಿಕ ಸಂಘಟನೆ. 1985ರಲ್ಲಿ ಇದನ್ನು ಸ್ಥಾಪಿಸಲಾಯಿತು. ನೇಪಾಳದ ಕಠ್ಮಂಡುವಿನಲ್ಲಿ ಇದರ ಪ್ರಧಾನ ಕಚೇರಿಯಿದೆ.

* **ಸದಸ್ಯ ರಾಷ್ಟ್ರಗಳು:** ಬಾಂಗ್ಲಾದೇಶ, ಭಾರತ, ಮಾಲ್ದೀವ್ಸ್, ನೇಪಾಳ, ಪಾಕಿಸ್ತಾನ, ಶ್ರೀಲಂಕಾ, ಅಫ್ಘಾನಿಸ್ತಾನ, ಭೂತಾನ್ ಸಾರ್ಕ್ ನ ಸದಸ್ಯ ರಾಷ್ಟ್ರಗಳಾಗಿವೆ.

* 2009ರವರೆಗೆ ಚೀನಾ, ಜಪಾನ್, ಕೊರಿಯಾ, ಅಮೆರಿಕ, ಇರಾನ್, ಮಾರಿಷಸ್, ಆಸ್ಟ್ರೇಲಿಯಾ, ಮ್ಯಾನ್ಮಾರ್ - ಹಾಗೂ ಯೂರೋಪಿನ್ ಒಕ್ಕೂಟ ರಾಷ್ಟ್ರಗಳು ಸಾರ್ಕ್ ವೀಕ್ಷಕರಾಗಿದ್ದವು.

## ವಾಯುಪಡೆಯ ಉಪ ಮುಖ್ಯಸ್ಥರಾಗಿ ಏರ್ ಮಾರ್ಷಲ್ ಅಶುತೋಷ್ ದೀಕ್ಷಿತ್ ನೇಮಕ



* ಅಶುತೋಷ್ ದೀಕ್ಷಿತ್ ಅವರು ಅರ್ಹ ಹಾರುವ ಬೋಧಕ ಮತ್ತು ಪ್ರಾಯೋಗಿಕ ಪರೀಕ್ಷಾ ಪೈಲಟ್ ಆಗಿದ್ದು, ಏರ್ ಮಾರ್ಷಲ್ ಅಶುತೋಷ್ ದೀಕ್ಷಿತ್ ಅವರು ವಾಯುಪಡೆಯ ಉಪ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರು ಎಂದು ರಕ್ಷಣಾ ಸಚಿವರು ತಿಳಿಸಿದ್ದಾರೆ.

* ಏರ್ ಮಾರ್ಷಲ್ ಅಶುತೋಷ್ ದೀಕ್ಷಿತ್ ರವರು ಮಿರಾಜ್ 2000 ಸ್ಕ್ವಾಡ್ರನ್, ಪಾಶ್ಚಿಮಾತ್ಯ ವಲಯದಲ್ಲಿ ಮುಂಚೂಣಿಯ ಫೈಟರ್ ಬೇಸ್ ಮತ್ತು ಪ್ರಮುಖ ಯುದ್ಧವಿಮಾನ ತರಬೇತಿ ನೆಲೆಗೆ ಆದೇಶ ನೀಡಿದ್ದರು.

KPSC Vaani

## ನವದೆಹಲಿಯಲ್ಲಿ ಅಮಿತ್ ಶಾ ರವರು ಶಾಸಕಾಂಗ ಕರಡು ರಚನೆಯ ತರಬೇತಿ ಕಾರ್ಯಕ್ರಮ ಉದ್ಘಾಟನೆ



* ಗೃಹ ಸಚಿವರಾದ ಅಮಿತ್ ಶಾ ರವರು ಶಾಸಕಾಂಗ ಕರಡು ರಚನೆಯ ತರಬೇತಿ ಕಾರ್ಯಕ್ರಮವನ್ನು ಹೊಸದಿಲ್ಲಿಯಲ್ಲಿ ಉದ್ಘಾಟಿಸಲಾಗಿದ್ದು, ಸಂಸತ್ತು, ರಾಜ್ಯ ಶಾಸಕಾಂಗಗಳು, ವಿವಿಧ ಸಚಿವಾಲಯಗಳು, ಶಾಸನಬದ್ಧ ಸಂಸ್ಥೆಗಳು ಮತ್ತು ಇತರ ಸರ್ಕಾರಿ ಇಲಾಖೆಗಳ ಅಧಿಕಾರಿಗಳ ನಡುವೆ ಶಾಸಕಾಂಗ ಕರಡು ರಚನೆಯ ತತ್ವಗಳು ಮತ್ತು ಅಭ್ಯಾಸಗಳ ಬಗ್ಗೆ ಉತ್ತಮ ತಿಳುವಳಿಕೆಯನ್ನು ಮೂಡಿಸುವ ಉದ್ದೇಶವನ್ನು ಈ ಕಾರ್ಯಕ್ರಮ ಒಳಗೊಂಡಿದೆ.
* ಶಾಸಕಾಂಗ ಕರಡು ರಚನೆಯು ತರಬೇತಿ ಕಾರ್ಯಕ್ರಮದಲ್ಲಿ ಕೇವಲ ವಿಜ್ಞಾನ ಅಥವಾ ಕಲೆ ಮಾತ್ರವಲ್ಲದೆ, ಸ್ಪಷ್ಟತೆ ಮತ್ತು ಪಾರದರ್ಶಕತೆಯ ಮನೋಭಾವದಿಂದ ಕಾರ್ಯಗತಗೊಳಿಸಬೇಕಾದ ಕೌಶಲ್ಯವಾಗಿದೆ ಎಂದು ಅಮಿತ್ ಶಾ ರವರು ಪ್ರಸ್ತಾಪಿಸಿದರು.

## ಮೇ 16 ಅಂತರರಾಷ್ಟ್ರೀಯ ಬೆಳಕಿನ ದಿನ 2023




*ಪ್ರತಿ ವರ್ಷ ಮೇ 16 ರಂದು 1960 ರಲ್ಲಿ ಥಿಯೋಡರ್ ಮೈಮನ್ ಲೇಸರ್ನ ಯಶಸ್ವಿ ಕಾರ್ಯಾಚರಣೆಯನ್ನು ಸ್ಮರಿಸಲು ಅಂತರರಾಷ್ಟ್ರೀಯ ಬೆಳಕಿನ ದಿನವನ್ನು ಆಚರಿಸಲಾಗುತ್ತದೆ.
*ಅಂತರರಾಷ್ಟ್ರೀಯ ಬೆಳಕಿನ ದಿನವು ವಿಜ್ಞಾನ, ಸಂಸ್ಕೃತಿ, ಕಲೆ, ಶಿಕ್ಷಣ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಬೆಳಕಿನ ಮಹತ್ವದ ಮಹತ್ವವನ್ನು ಗುರುತಿಸುವ ವಾರ್ಷಿಕ ಕಾರ್ಯಕ್ರಮವಾಗಿದೆ ಎಂದು ಈ ಅಂತರರಾಷ್ಟ್ರೀಯ ಬೆಳಕಿನ ದಿನವನ್ನು ಆಚರಿಸಲಾಗುತ್ತದೆ.
* ಅಂತರರಾಷ್ಟ್ರೀಯ ಬೆಳಕಿನ ದಿನ 2023 ರ ಥೀಮ್ ವಾರ್ಷಿಕ ಕಾರ್ಯಕ್ರಮವನ್ನು ಸಸ್ಟೈನಬಲ್ ಡೆವಲಪ್ಮೆಂಟ್ ಮತ್ತು ಗ್ಲಾಸ್ನಾಗಿ ಮೂಲಭೂತ ವಿಜ್ಞಾನಗಳ ವಿಷಯಗಳ ಮೇಲೆ ಆಚರಿಸಲಾಗುತ್ತದೆ.
* ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (UNESCO) ಡಿಸೆಂಬರ್ 20, 2017 ರಂದು ಅಧಿಕೃತವಾಗಿ ಅಂತರರಾಷ್ಟ್ರೀಯ ಬೆಳಕಿನ ದಿನವನ್ನು ಸ್ಥಾಪಿಸಲಾಗಿದ್ದು, ಈ ಮಹತ್ವದ ದಿನವನ್ನು ಭೌತಶಾಸ್ತ್ರಜ್ಞ ಮತ್ತು ಲೇಸರ್‌ನ ಯಶಸ್ವಿ ಕಾರ್ಯಾಚರಣೆಯ ಒಂದು ಅದ್ಭುತ ವೈಜ್ಞಾನಿಕ ಸಾಧನೆಯ ವಾರ್ಷಿಕೋತ್ಸವವನ್ನು ಗುರುತಿಸಲು ರಚಿಸಲಾಗಿದೆ.

# 17 May 2023

## ಟ್ವಿಟರ್ ನ ನೂತನ ಸಿಇಒ ಆಗಿ ಲಿಂಡಾ ಯುಕಾರಿನೋ ನೇಮಕ



* ಟ್ವಿಟ್ಟರ್‌ಗೆ ಹೊಸ ಸಿಇಒ ಆಗಿ ಲಿಂಡಾ ಯಾಕರಿನೊ ಅವರು ಆಯ್ಕೆಯಾಗಿದ್ದಾರೆ. ಅವರನ್ನು ನೂತನ ಸಿಇಒ ಆಗಿ ಸ್ವಾಗತಿಸಲು ಇಷ್ಟಪಡುತ್ತೇನೆ ಎಂದು ಎಲಾನ್ ಮಸ್ಕ್ ಅವರು ಇದೀಗ ಟ್ವೀಟ್ ಮಾಡಿದ್ದಾರೆ.
* ಮಸ್ಕ್ ಅವರು ನಾನು ಪ್ರಾಡಕ್ಟ್, ಹೊಸ ತಂತ್ರಜ್ಞಾನಗಳ ಬಗ್ಗೆ ಗಮನಹರಿಸಲಿದ್ದೇನೆ. ಆ್ಯಪ್‌ಗಾಗಿ ಅವರ ಜತೆ ಕೆಲಸ ಮಾಡುವುದನ್ನು ಎದುರು ನೋಡುತ್ತಿದ್ದೇನೆ ಎಂದು ಮಸ್ಕ್ ಟ್ವೀಟ್ ಮಾಡಿದ್ದಾರೆ.
* ಆದಾಯ ತರಲು ವಿವಿಧ ಪ್ರಯತ್ನ ಮಾಡುತ್ತಿರುವ ಮಸ್ಕ್, ಬ್ಲೂ ಟಿಕ್ ಮಾರ್ಕ್‌ಗೆ ಸಬ್‌ಸ್ಕ್ರಿಪ್ಷನ್ ಶುಲ್ಕ ನಿಗದಿ ಮಾಡುವುದು ಸೇರಿದಂತೆ ಹಲವು ಕ್ರಮ ಕೈಗೊಂಡಿದ್ದಾರೆ.

## ಮೇ 17 ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸೊಸೈಟಿ ದಿನ 2023



* ಪ್ರತಿ ವರ್ಷ ಮೇ 17 2023 ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸೊಸೈಟಿ ದಿನವನ್ನು ಆಚರಿಸಲಾಗುತ್ತದೆ.
* ವಿಶ್ವ ದೂರಸಂಪರ್ಕ ದಿನವನ್ನು ಈಗ ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸಮಾಜ ದಿನ ಎಂದು ಕರೆಯಲಾಗುತ್ತದೆ, ಇದನ್ನು ಇಂಟರ್ನ್ಯಾಷನಲ್ ಟೆಲಿಕಮ್ಯುನಿಕೇಶನ್ ಯೂನಿಯನ್ (ITU) ಆಶ್ರಯದಲ್ಲಿ ಆಚರಿಸಲಾಗುತ್ತದೆ.
* ವಿಶ್ವ ದೂರಸಂಪರ್ಕ ದಿನ 2023 ಥೀಮ್:
- "ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಮೂಲಕ ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಸಕ್ರಿಯಗೊಳಿಸುವುದು".
* ವಿಶ್ವ ದೂರಸಂಪರ್ಕ ದಿನವು ನಮ್ಮ ಸಮಾಜದಲ್ಲಿ ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನಗಳ ಪಾತ್ರ ಮತ್ತು ಪ್ರಭಾವದ ಬಗ್ಗೆ ಜಾಗೃತಿ ಮೂಡಿಸಲು ಜಾಗತಿಕ ವೇದಿಕೆಯಾಗಿ ಕಾರ್ಯನಿರ್ವಹಿಸುವುದರಿಂದ ಮಹತ್ವದ ಪ್ರಾಮುಖ್ಯತೆಯನ್ನು ಹೊಂದಿದೆ.
* ಆರ್ಥಿಕತೆಗಳು, ಸಮಾಜಗಳು ಮತ್ತು ವೈಯಕ್ತಿಕ ಜೀವನವನ್ನು ರೂಪಿಸುವಲ್ಲಿ ಇಂಟರ್ನೆಟ್, ಮೊಬೈಲ್ ನೆಟ್‌ವರ್ಕ್‌ಗಳು ಮತ್ತು ಇತರ ಡಿಜಿಟಲ್ ತಂತ್ರಜ್ಞಾನಗಳಂತಹ ಸಂವಹನ ಸಾಧನಗಳ ಪರಿವರ್ತಕ ಶಕ್ತಿಯನ್ನು ದಿನವು ಎತ್ತಿ ತೋರಿಸುತ್ತದೆ.

KPSC Vaani

## ದೂರಸಂಪರ್ಕ ಇಲಾಖೆಯ 'ಸಂಚಾರ್ ಸಾಥಿ' ಎಂಬ ಪೋರ್ಟಲ್ ಆರಂಭ




* ದೂರಸಂಪರ್ಕ ಇಲಾಖೆಯ 'ಸಂಚಾರ್ ಸಾಥಿ' ಎಂಬ ಪೋರ್ಟಲ್ ನಿಂದ ಗ್ರಾಹಕರು ಮೊಬೈಲ್ ಫೋನ್ ಎಲ್ಲಿದೆ ಎಂದು ಪತ್ತೆಮಾಡಲು, ಮೊಬೈಲ್ ಬ್ಲಾಕ್ ಮಾಡುವ ಅವಕಾಶವನ್ನು ಮತ್ತು ಬಳಸಿದ ಫೋನ್ ಖರೀದಿಸುವ ಮೊದಲು ಅಸಲಿತನ ಪರೀಕ್ಷಿಸಬಹುದು ಎಂದು ದೂರಸಂಪರ್ಕ ಇಲಾಖೆಯು 'ಸಂಚಾರ್ ಸಾಥಿ' ಎಂಬ ಪೋರ್ಟಲ್ ಆರಂಭಿಸಿದೆ ಎಂದು ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ರವರು ತಿಳಿಸಿದ್ದಾರೆ.
* 'ಸಂಚಾರ್ ಸಾಥಿ' ಎಂಬ ಪೋರ್ಟಲ್ ನಲ್ಲಿ ಇರುವ' ನೋ ಯುವರ್ ಮೊಬೈಲ್ ಸೌಲಭ್ಯವನ್ನು ಬಳಸಿ ಗ್ರಾಹಕರು ಖರೀದಿಸುವ ಸೆಕೆಂಡ್ ಹ್ಯಾಂಡ್ ಫೋನ್, ಕಳ್ಳತನದ ಮೂಲಕ ಮೊಬೈಲ್ ಫೋನ್ ಕೈಸೇರುತ್ತವೆ ಎಂದು ತಿಳಿಸಿದ್ದಾರೆ.

## 'ಗೌರಿ' ಸಾಕ್ಷ್ಯಚಿತ್ರಕ್ಕೆ ಅತ್ಯುತ್ತಮ ದೀರ್ಘ ಸಾಕ್ಷ್ಯಚಿತ್ರ ಪ್ರಶಸ್ತಿ



* ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ ನಿರ್ದೇಶಕಿಯಾದ ಕವಿತಾ ಲಂಕೇಶ್ ರವರಿಗೆ 'ಗೌರಿ' ಸಾಕ್ಷ್ಯಚಿತ್ರವು 2023ರ ಮಾಂಟ್ರಿಯಲ್‌ನಲ್ಲಿ ನಡೆಯುವ ದಕ್ಷಿಣ ಏಷ್ಯಾ ಚಲನಚಿತ್ರೋತ್ಸವದಲ್ಲಿ 'ಅತ್ಯುತ್ತಮ ದೀರ್ಘ ಸಾಕ್ಷ್ಯಚಿತ್ರ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.
* ಗೌರಿ ಲಂಕೇಶ್‌ರವರ ಕುರಿತು ಕವಿತಾ ಲಂಕೇಶ್ ಅವರು ದಿಟ್ಟ ಪತ್ರಕರ್ತೆ, ಹೋರಾಟಗಾರ್ತಿ ಎಂದು 'ಗೌರಿ' ಸಾಕ್ಷ್ಯಚಿತ್ರವನ್ನು ನಿರ್ದೇಶಿಸಲಾಗಿದ್ದು, ಸಾಕ್ಷ್ಯಚಿತ್ರವು 2017ರಲ್ಲಿ ರಾಜಕೀಯ ಹತ್ಯೆಗೊಳಗಾದ ಪತ್ರಕರ್ತೆ ಗೌರಿ ಲಂಕೇಶ್ ಅವರ ಕುರಿತು ಬೆಳಕು ಚೆಲ್ಲುತ್ತದೆ.

## ಸ್ಲೋವಾಕಿಯಾದ ನೂತನ ಪ್ರಧಾನಿಯಾಗಿ ಲುಡೋವಿಟ್ ಒಡರ್ ನೇಮಕ



* ಸ್ಲೋವಾಕಿಯಾದ ನ್ಯಾಷನಲ್ ಬ್ಯಾಂಕ್‌ನ ಮಾಜಿ ವೈಸ್-ಗವರ್ನರ್ ಲುಡೋವಿಟ್ ಒಡರ್ ಅವರನ್ನು ಸ್ಲೋವಾಕಿಯಾದ ಹೊಸ ಉಸ್ತುವಾರಿ ಪ್ರಧಾನ ಮಂತ್ರಿಯಾಗಿ ನೇಮಿಸಲಾಗಿದ್ದು, ಮೇ 7 ರಂದು ಮಾಜಿ ಉಸ್ತುವಾರಿ ಪ್ರಧಾನ ಮಂತ್ರಿ ಎಡ್ವರ್ಡ್ ಹೆಗರ್ ರಾಜೀನಾಮೆ ನೀಡಿದ ನಂತರ ಲುಡೋವಿಟ್ ಒಡರ್ ಸ್ಲೋವಾಕಿಯಾದ ಹೊಸ ಉಸ್ತುವಾರಿ ಪ್ರಧಾನ ಮಂತ್ರಿಯಾಗಿ ನೇಮಿಸಲಾಯಿತ್ತು.
* ಸ್ಲೋವಾಕಿಯಾದ ನ್ಯಾಷನಲ್ ಬ್ಯಾಂಕ್‌ನ ಮಾಜಿ ವೈಸ್-ಗವರ್ನರ್ ಲುಡೋವಿಟ್ ಒಡರ್ ರವರು ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಕ್ಷಿಪ್ರ ಚುನಾವಣೆಗಳವರೆಗೆ ರಾಜ್ಯವು ಸರಿಯಾಗಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ತಿಳಿಸಿದೆ.

## GI ಟ್ಯಾಗ್ ಮಾಡಲಾದ ಉತ್ಪನ್ನಗಳಲ್ಲಿ ಉತ್ತರ ಪ್ರದೇಶವು 2 ನೇ ಸ್ಥಾನ



* ಭೌಗೋಳಿಕ ಸೂಚಕದಲ್ಲಿ (ಜಿಐ)-ಟ್ಯಾಗ್ ಮಾಡಲಾದ ಉತ್ಪನ್ನ ಮತ್ತು ಸರಕುಗಳನ್ನು ಹೊಂದಿರುವ ವಿಷಯದಲ್ಲಿ ಉತ್ತರ ಪ್ರದೇಶವು ದೇಶದ ಎರಡನೇ ಸ್ಥಾನವನ್ನು ಹೊಂದಿದ್ದು, ರಾಜ್ಯದಲ್ಲಿ GI ಟ್ಯಾಗ್ ಮಾಡಲಾದ ಉತ್ಪನ್ನಗಳ ಒಟ್ಟು ಸಂಖ್ಯೆಯನ್ನು 48 ಕ್ಕೆ ತೆಗೆದುಕೊಂಡಿದೆ.
* ಉತ್ತರ ಪ್ರದೇಶಕ್ಕೆ ಮೂರು ಹೊಸದಾಗಿ-ಟ್ಯಾಗ್ ಮಾಡಲಾದ ODOP ಕರಕುಶಲಗಳೆಂದರೆ ಮೈನ್‌ಪುರಿ ತಾರ್ಕಾಶಿ, ಮಹೋಬ ಗೌರಾ ಕಲ್ಲಿನ ಕರಕುಶಲ, ಮತ್ತು ಸಂಭಾಲ್ ಹಾರ್ನ್ ಕ್ರಾಫ್ಟ್ ಇವುಗಳು GI ಟ್ಯಾಗ್ ಉತ್ತರ ಪ್ರದೇಶ ರಾಜ್ಯಕ್ಕೆ ಅಮೂಲ್ಯ ಆಸ್ತಿಯಾಗಿದೆ.

## ಮೇ 16 ರಾಷ್ಟ್ರೀಯ ಡೆಂಗ್ಯೂ ದಿನ



* ಪ್ರತಿ ವರ್ಷ ಮೇ 16 ರಂದು ಸೊಳ್ಳೆಗಳಿಂದ ಹರಡುವ ರೋಗದ ಬಗ್ಗೆ ಜಾಗೃತಿ ಮೂಡಿಸಲು ರಾಷ್ಟ್ರೀಯ ಡೆಂಗ್ಯೂ ದಿನವನ್ನು ಆಚರಿಸಲಾಗಿದ್ದು, ಡೆಂಗ್ಯೂ ನಾಲ್ಕು ವಿಭಿನ್ನ ವೈರಸ್‌ಗಳಿಂದ ಉಂಟಾಗುತ್ತದೆ ಮತ್ತು ಹೆಣ್ಣು ಈಡಿಸ್ ಸೊಳ್ಳೆಗಳಿಂದ, ಹಳದಿ ಜ್ವರ, ಜಿಕಾ ವೈರಸ್‌ಗಳು ಮತ್ತು ಚಿಕೂನ್‌ಗುನ್ಯಾವನ್ನು ಸಹ ಹರಡುತ್ತದೆ.
* ಲ್ಯಾನ್ಸೆಟ್ ಅಧ್ಯಯನದ ಪ್ರಕಾರ ಮಾಹಿತಿಯು ಕಳೆದ ವರ್ಷದ ಜನವರಿ ಮತ್ತು ಅಕ್ಟೋಬರ್ ನಡುವೆ ಭಾರತದಲ್ಲಿ ಸುಮಾರು 1,10,473 ಡೆಂಗ್ಯೂ ಪ್ರಕರಣಗಳು ವರದಿಯಾಗಿವೆ ಎಂದು ಸೂಚಿಸುತ್ತದೆ.

## ಭಾರತ ಮತ್ತು ಬಾಂಗ್ಲಾದೇಶ '50 ಸ್ಟಾರ್ಟ್-ಅಪ್‌ಗಳ ವಿನಿಮಯ ಕಾರ್ಯಕ್ರಮ ಪ್ರಾರಂಭ



KPSC Vaani

* ಭಾರತ ಮತ್ತು ಬಾಂಗ್ಲಾದೇಶ ನಡುವಿನ 50 ಸ್ಟಾರ್ಟ್-ಅಪ್ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸುವ 10 ಸ್ಟಾರ್ಟ್-ಅಪ್ ಕಂಪನಿಗಳ ಆರಂಭಿಕ ಬ್ಯಾಚ್ ಮೇ 8-12 ರಿಂದ ಭಾರತಕ್ಕೆ ಯಶಸ್ವಿಯಾಗಿ ಭೇಟಿಯಾಗಿದ್ದು, ಈ ಸ್ಟಾರ್ಟ್-ಅಪ್‌ಗಳು ಇ-ಕಾಮರ್ಸ್, ಆರೋಗ್ಯ, ಸಾರಿಗೆ ಮತ್ತು ಲಾಜಿಸ್ಟಿಕ್ಸ್, ಇಂಧನ, ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತವೆ.
* ಭಾರತಕ್ಕೆ 10 ಬಾಂಗ್ಲಾದೇಶದ ಸ್ಟಾರ್ಟ್-ಅಪ್‌ಗಳ ಈ ಭೇಟಿಯು 50 ಸ್ಟಾರ್ಟ್-ಅಪ್‌ಗಳ ವಿನಿಮಯ ಕಾರ್ಯಕ್ರಮದ ಆರಂಭವನ್ನು ಸೂಚಿಸಲಾಗಿದ್ದು, ಅಧಿಕೃತ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿರುವಂತೆ ಹೊಸ ಮತ್ತು ಉದಯೋನ್ಮುಖ ಕ್ಷೇತ್ರಗಳು, ಅತ್ಯಾಧುನಿಕ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ನಾವೀನ್ಯತೆಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಕಾರ್ಯಕ್ರಮ ಹೊಂದಿದೆ.

## 18 May 2023

### ಸಿಸಿಐ ಅಧ್ಯಕ್ಷರಾಗಿ ಹಿರಿಯ ಐಎಎಸ್ ಅಧಿಕಾರಿ ರವನೀತ್ ಕೌರ್ ನೇಮಕ



* ಭಾರತೀಯ ಸ್ಪರ್ಧಾ ಆಯೋಗ(ಕಾಂಪಿಟಿಷನ್ ಕಮಿಷನ್ ಆಫ್ ಇಂಡಿಯಾ - ಸಿಸಿಐ) ಮೊದಲ ಪೂರ್ಣಾವಧಿ ಮಹಿಳಾ ಅಧ್ಯಕ್ಷರಾಗಿ ಹಿರಿಯ ಐಎಎಸ್ ಅಧಿಕಾರಿ ರವನೀತ್ ಕೌರ್ ಅವರನ್ನು ನೇಮಕ ಮಾಡಲಾಗಿದೆ.
* 2009ರಲ್ಲಿ ಸ್ಥಾಪನೆಯಾದ ಸಿಸಿಐನ ಐದನೇ ಪೂರ್ಣಾವಧಿಯ ಅಧ್ಯಕ್ಷರಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ. 59 ವರ್ಷದ ರವನೀತ್ ಕೌರ್ ನೇಮಕಕ್ಕೆ ಕೇಂದ್ರ ಸಂಪುಟ ನೇಮಕಾತಿ ಸಮಿತಿ ಅನುಮೋದನೆ ನೀಡಿದೆ.
* ಅಕ್ಟೋಬರ್ 2022 ರಲ್ಲಿ ಅಶೋಕ್ ಕುಮಾರ್ ಗುಪ್ತಾ ಅವರು ಸಿಸಿಐ ಅಧ್ಯಕ್ಷ ಹುದ್ದೆಯಿಂದ ನಿರ್ಗಮಿಸಿದ ನಂತರ ಅವರ ಸ್ಥಾನಕ್ಕೆ ಪೂರ್ಣಾವಧಿ ಅಧ್ಯಕ್ಷರನ್ನು ನೇಮಕ ಮಾಡಿರಲಿಲ್ಲ.

### Paytm ಅಧ್ಯಕ್ಷ ಮತ್ತು COO ಆಗಿ ಭವೇಶ್ ಗುಪ್ತಾ ಅವರ ನೇಮಕ




* Paytm ನ One 97 Communications Ltd, ಮೂಲ ಕಂಪನಿ, ಭವೇಶ್ ಗುಪ್ತಾ ಅವರನ್ನು ಫಿನ್‌ಟೆಕ್ ಕಂಪನಿಯ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ (COO) ನೇಮಕ ಮಾಡುವುದಾಗಿ ಘೋಷಿಸಲಾಗಿದ್ದು, ಗುಪ್ತಾ ಅವರು Paytm ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಹಾಗೂ ಸಂಸ್ಥಾಪಕರಾದ ವಿಜಯ್ ಶೇಖರ್ ಶರ್ಮಾ ಅವರಿಗೆ ನೇರವಾಗಿ ವರದಿ ನೀಡುತ್ತಾರೆ.
*Paytm ನ ಹಿರಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದ ಗುಪ್ತಾ ಅವರು ಈಗ ಪೇಟಿಎಂನಲ್ಲಿ ಸಾಲ, ವಿಮೆ, ಆನ್‌ಲೈನ್ ಮತ್ತು ಆಫ್ ಲೈನ್ ಪಾವತಿಗಳು, ಗ್ರಾಹಕರ ಪಾವತಿಗಳು ಮತ್ತು ಬಳಕೆದಾರರ ಬೆಳವಣಿಗೆ, ಕಾರ್ಯಾಚರಣೆಯ ಅಪಾಯ,ಮತ್ತು ವಂಚನೆಯ ಅಪಾಯದಂತಹ ಪ್ರಮುಖ ಉಪಕ್ರಮಗಳನ್ನು ಒಳಗೊಂಡಂತೆ ವಿವಿಧ ವರ್ಟಿಕಲ್‌ಗಳನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಹೊಂದಿದ್ದಾರೆ.

### ಮೇ 18 ವಿಶ್ವ ಏಡ್ಸ್ ಲಸಿಕೆ ದಿನ




* ಪ್ರತಿ ವರ್ಷ ಮೇ 18 ರಂದು ವಿಶ್ವ ಏಡ್ಸ್ ಲಸಿಕೆ ದಿನವನ್ನು HIV (ಹ್ಯೂಮನ್ ಇಮ್ಯುನೊ ಡಿಫಿಷಿಯನ್ಸಿ ವೈರಸ್) ಲಸಿಕೆ ಜಾಗೃತಿ ದಿನ ಎಂದೂ ಕರೆಯಲಾಗುತ್ತದೆ. ಈ ವರ್ಷ, 2021 ರಲ್ಲಿ, ವಿಶ್ವ ಏಡ್ಸ್ಲ ಸಿಕೆ ದಿನವನ್ನು ಈ ಕೆಳಗಿನ ವಿಷಯದ ಅಡಿಯಲ್ಲಿ ಆಚರಿಸಲಾಗುತ್ತದೆ.
* ಮೇ 18, 1997 ರಂದು ಮೇರಿಲ್ಯಾಂಡ್‌ನ ಮೋರ್ಗಾನ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ಮಾಜಿ ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷರಾದ ಬಿಲ್ ಕ್ಲಿಂಟನ್ ಮಾಡಿದ ಭಾಷಣದ ನಂತರ ವಿಶ್ವ ಏಡ್ಸ್ ಲಸಿಕೆ ದಿನವನ್ನು ಆಚರಣೆ ಮಾಡಲಾಯಿತು.
* ಮೇ 18 ವಿಶ್ವ ಏಡ್ಸ್ ಲಸಿಕೆ ದಿನ 2023 ರ ಥೀಮ್: ಜಾಗತಿಕ ಒಗ್ಗಟ್ಟು ಏಡ್ಸ್ ಲಸಿಕೆ ದಿನದ ಥೀಮ್ ಆಗಿದೆ.

### ಯುಪಿಎಸ್‌ಸಿ ಅಧ್ಯಕ್ಷರಾಗಿ ಮನೋಜ್ ಸೋನಿ ಅವರು ಪ್ರಮಾಣವಚನ ಸ್ವೀಕಾರ



* ಕೇಂದ್ರ ಲೋಕಸೇವಾ ನಾಗರಿಕ ಆಯೋಗದ (ಯುಪಿಎಸ್‌ಸಿ) ಅಧ್ಯಕ್ಷರಾಗಿ ಖ್ಯಾತ ಶಿಕ್ಷಣ ತಜ್ಞ ಮನೋಜ್ ಸೋನಿ ಅವರು ಮೇ16 (ಮಂಗಳವಾರ)ರಂದು ಪ್ರಮಾಣ ವಚನವನ್ನು ಸ್ವೀಕರಿಸಿದರು.
* ಮನೋಜ್ ಸೋನಿ ರವರು 2017 ರಲ್ಲಿ ಜೂನ್ 28ರಂದು ಆಯೋಗಕ್ಕೆ ಸದಸ್ಯರ ನೇಮಕಗೊಂಡಿರುವ ಸೋನಿ ಅವರು 2022ರ ಏಪ್ರಿಲ್ 5ರಿಂದ ಆಯೋಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
* ಯುಪಿಎಸ್‌ಸಿ ಆಯೋಗದ ಹಿರಿಯ ಸದಸ್ಯರಾದ ಸ್ಮಿತಾ ನಾಗರಾಜ್ ರವರು ಮನೋಜ್ ಸೋನಿ ಅವರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು ಎಂದು ಸಿಬ್ಬಂದಿ ಸಚಿವಾಲಯದ ಹೇಳಿಕೆ ತಿಳಿಸಲಾಯಿತು.

## ಕಾನೂನು ಸಚಿವರಾಗಿದ್ದ ಕಿರಣ್ ರಿಜಿಜುಗೆ ಭೂ ವಿಜ್ಞಾನ ಸಚಿವ ಸ್ಥಾನ.



* ಕೇಂದ್ರ ಕಾನೂನು ಸಚಿವರಾಗಿದ್ದಂತ ಕಿರಣ್ ರಿಜಿಜು ಅವರನ್ನು ಕಾನೂನು ಸಚಿವಾಲಯದಿಂದ ಭೂ ವಿಜ್ಞಾನ ಸಚಿವಾಲಯಕ್ಕೆ ವರ್ಗಾಯಿಸಲಾಗಿದ್ದು, ಹಾಗೂ ಕಿರಣ್ ರಿಜಿಜು ರವರ ಬಗ್ಗೆ ರಾಷ್ಟ್ರಪತಿ ಭವನದ ಮೂಲಗಳು ಖಚಿತಪಡಿಸಿವೆ.

*ಸಂಸದೀಯ ವ್ಯವಹಾರಗಳು ಮತ್ತು ಸಂಸ್ಕೃತಿ ರಾಜ್ಯ ಸಚಿವರಾಗಿರುವ ಅರ್ಜುನ್ ರಾಮ್ ಮೇಘ್ವಾಲ್ ಅವರಿಗೆ ಹೆಚ್ಚುವರಿಯಾಗಿ ಕಾನೂನು ಮತ್ತು ನ್ಯಾಯಾಂಗ ಸಚಿವ ಸ್ಥಾನವನ್ನು ನೀಡಲಾಗಿದೆ.

## ಕರ್ನಾಟಕ ರಾಜ್ಯದ ಇಂದಿನಿಂದ 3 ದಿನ ಆನೆ ಗಣತಿ ಪ್ರಾರಂಭ



* ಕರ್ಣಾಟಕ ರಾಜ್ಯದಲ್ಲಿ ನಾಗರಹೊಳೆ ಮತ್ತು ಚಾಮರಾಜನಗರದ ಬಂಡೀಪುರ ಹಾಗು ರಾಜ್ಯದ ಇತರ ಅರಣ್ಯ ಪ್ರದೇಶಗಳಲ್ಲಿ ಆನೆಗಳ ಗಣತಿ ಆರಂಭವಾಗಿದ್ದು, ದಕ್ಷಿಣ ಭಾರತದ 7 ರಾಜ್ಯಗಳ ಗಣತಿ ನೇತೃತ್ವವನ್ನು ಕರ್ನಾಟಕ ರಾಜ್ಯ ವಹಿಸಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

* ಆನೆಗಳ ಗಣತಿಯು 5 ವರ್ಷಕ್ಕೊಮ್ಮೆ ನಡೆಯಲಿರುವ ಆನೆಗಳ ಗಣತಿ - 2017 ರ ಗಣತಿಯಲ್ಲಿ ಕರ್ನಾಟಕದಲ್ಲಿ 6049 ಆನೆಗಳು - ಇಂದಿನಿಂದ ಮೂರು ದಿನಗಳ ಕಾಲ ಕರ್ನಾಟಕ ಸೇರಿದಂತೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಹಾಗೂ ಗೋವಾದಲ್ಲಿ ಆನೆಗಳ ಗಣತಿ ನಡೆಯಲಿದೆ.

## ಗ್ರಾಮೀಣ ಮಕ್ಕಳಿಗಾಗಿ ಆನ್‌ಲೈನ್ ಶಿಕ್ಷಣ ಕಾರ್ಯಕ್ರಮ 'ಪಹಲ್' ಉದ್ಘಾಟನೆ



* ಗ್ರಾಮೀಣ ಮಕ್ಕಳಿಗೆ ಆನ್‌ಲೈನ್ ಗ್ರಾಮೀಣ ಶಿಕ್ಷಣ ಉಪಕ್ರಮವಾದ 'ಪಹಲ್' ಅನ್ನು ಮುಖ್ಯ ಕಾರ್ಯದರ್ಶಿಯಾದ ದುರ್ಗಾ ಶಂಕರ್ ಮಿಶ್ರಾ ಅವರು ಸರೋಜಿನಿ ನಗರದ ಸರ್ಕಾರಿ ಯುಪಿ ಸೈನಿಕ್ ಇಂಟರ್ ಕಾಲೇಜಿನಲ್ಲಿ ಅಧಿಕೃತವಾಗಿ ಪಹಲ್ ಕಾರ್ಯಕ್ರಮವನ್ನು ಪ್ರಾರಂಭಿಸಿದರು.

* ಸೆಕೆಂಡರಿ ಶಿಕ್ಷಣ ಇಲಾಖೆ ಮತ್ತು ಐಐಟಿ ಕಾನ್ಪುರ ನಡುವಿನ ಪಾಲುದಾರಿಕೆಯ ಮೂಲಕ ಅಭಿವೃದ್ಧಿಪಡಿಸಲಾದ ಈ ಕಾರ್ಯಕ್ರಮವು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಗ್ರಾಮೀಣ ಸಮುದಾಯಗಳಿಗೆ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹೊಂದಿದ್ದು, ರಾಜ್ಯದ 10 ಸರ್ಕಾರಿ ಮಾಧ್ಯಮಿಕ ಶಾಲೆಗಳು 'ಪಹಲ್' ಉಪಕ್ರಮದ ಭಾಗವಾಗಿ ಉಚಿತ ಆನ್‌ಲೈನ್ ಶಿಕ್ಷಣವನ್ನು ನೀಡಲಾಗುತ್ತದೆ.

## 27 ಬಾರಿ ಮೌಂಟ್ ಎವರೆಸ್ಟ್ ಏರಿ ದಾಖಲೆ ಬರೆದ ನೇಪಾಳದ ಕಾಮಿ ರೀಟಾ



* ನೇಪಾಳದ ಪರ್ವತಾರೋಹಿ ಕಮಿ ರಿಟಾ ಎಂಬ ಶೆರ್ಪಾ 27ನೇ ಬಾರಿಗೆ ಮೌಂಟ್ ಎವರೆಸ್ಟ್ ಶಿಖರ ಏರುವ ಮೂಲಕ ಅತಿ ಹೆಚ್ಚು ಬಾರಿ ಎವರೆಸ್ಟ್ ಏರಿದ ದಾಖಲೆಯನ್ನು ನಿರ್ಮಿಸಲಾಗಿದ್ದು, ಹಾಗು ಪಸಾಂಗ್ ದಾವಾ ಎಂಬ ಶೆರ್ಪಾ 26ನೇ ಬಾರಿ ಎವರೆಸ್ಟ್ ಏರುವ ಮೂಲಕ ಕಮಿ ಅವರ ದಾಖಲೆಯನ್ನು ಹಿಂದಿಕ್ಕಿ, ಇದಾದ ಮೂರೇ ದಿನಕ್ಕೆ ಕಮಿ ಅವರು 27ನೇ ಸಲ ಜಗತ್ತಿನ ಅತಿ ಎತ್ತರದ ಶಿಖರ ಏರಿ ಸಾಧನೆ ಮಾಡಿದ್ದಾರೆ.

* ಕಮಿ ರಿಟಾ ರವರು ಮೇ 17 (ಬುಧವಾರ)ರಂದು ಬೆಳಗ್ಗೆ 8,849 ಮೀಟರ (29,032 ಅಡಿ) ಪರ್ವತವನ್ನು ಆರೋಹಣ ಮಾಡಿದ್ದರು ಎಂದು ಕಾಮಿ ರೀಟಾ ಶೆರ್ಪಾ ರವರ ಸಾಹಸದ ಸಂಘಟಕ ಸೆವೆನ್ ಸಮ್ಮಿಟ್ ಟ್ರೆಕ್ಸ್ ತಿಳಿಸಿದೆ.

### 19 May 2023

## ನೂತನ ಕೇಂದ್ರ ಕಾನೂನು ಸಚಿವರಾಗಿ ಅರ್ಜುನ್ ರಾಮ್ ಮೇಘವಾಲ್ ನೇಮಕ



* ನೂತನ ಕೇಂದ್ರ ಕಾನೂನು ಸಚಿವರಾಗಿ ಅರ್ಜುನ್ ರಾಮ್ ಮೇಘವಾಲ್ ನೇಮಕವಾಗಿದ್ದರೆ.

* ಕೇಂದ್ರ ಕಾನೂನು ಸಚಿವರಾಗಿದ್ದಂತ ಕಿರಣ್ ರಿಜಿಜು ಅವರ ಖಾತೆ ಬದಲಿಸಿ, ಅರ್ಜುನ್ ರಾಮ್ ಮೇಘವಾಲ್ ಅವರಿಗೆ ನೀಡಲಾಗಿದೆ. ಕಿರಣ್ ರಿಜಿಜುಗೆ ಭೂ ವಿಜ್ಞಾನ ಸಚಿವಾಲಯದ ಖಾತೆಯನ್ನು ಹಂಚಿಕೆ ಮಾಡಲಾಗಿದೆ.

* ಅಚ್ಚರಿಯ ಬೆಳವಣಿಗೆಯಲ್ಲಿ ಕಿರಣ್ ರಿಜಿಜು ಅವರನ್ನು ಕೇಂದ್ರ ಕಾನೂನು ಸಚಿವ ಸ್ಥಾನದಿಂದ ತೆಗೆದು ಅವರ ಜಾಗಕ್ಕೆ ಅರ್ಜುನ್ ರಾಮ್ ಮೇಘವಾಲ್ ಅವರನ್ನು ನೇಮಿಸಲಾಗಿದೆ.

* ಕೇಂದ್ರ ಕಾನೂನು ಸಚಿವರಾಗಿದ್ದ ಸಂದರ್ಭದಲ್ಲಿ ಕಿರಣ್ ರಿಜಿಜು ಅವರು ಸುಪ್ರೀಂಕೋರ್ಟ್ ಕೊಲಿಜಿಯಂ ಜತೆ ವಾಕ್ಸಮರ ನಡೆಸುತ್ತಾ ಬಂದಿದ್ದರು. ಬ್ರಿಟಿಷರ ಕಾಲದ ಕೊಲಿಜಿಯಂ ಪದ್ಧತಿ ಅಸಮರ್ಪಕವಾಗಿದೆ ಹಾಗೂ ಪಾರದರ್ಶಕವಾಗಿಲ್ಲ ಎಂದು ಅವರು ಹಲವು ಬಾರಿ ಹೇಳಿದ್ದರು.

KPSC Vaani

## "ಸಮಗ್ರ ಆರೋಗ್ಯ" ನೀತಿಗಾಗಿ ಆಯುಷ್ ಸಚಿವಾಲಯ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಸಹಯೋಗ



* ಆಯುಷ್ ಸಚಿವಾಲಯ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಜಂಟಿಯಾಗಿ ಸಾರ್ವಜನಿಕರ ಯೋಗಕ್ಷೇಮಕ್ಕಾಗಿ "ಸಮಗ್ರ ಆರೋಗ್ಯ" ಕ್ಕೆ ಆದ್ಯತೆ ನೀಡಲು ತಮ್ಮ ಬದ್ಧತೆಯನ್ನು ಘೋಷಿಸಲಾಯಿತು.
* ಆಯುಷ್ ಮತ್ತು ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಕೇಂದ್ರ ಸಂಪುಟ ಸಚಿವರಾದ ಶ್ರೀ ಸರ್ಬಾನಂದ ಸೋನೊವಾಲ್ ಅವರು ಎರಡು ದಿನಗಳ ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಷ್ಟ್ರೀಯ ಆಯುಷ್ ಮಿಷನ್ ಕಾನ್ಕ್ಲೇವ್‌ನಲ್ಲಿ ಈ ಘೋಷಣೆಯನ್ನು ಘೋಷಿಸಲಾಯಿತು .

## ಅಸ್ಸಾಂ ಪೊಲೀಸ್ ಇಲಾಖೆಯಲ್ಲಿ ಫಿಟ್ನೆಸ್ ಅಭಿಯಾನ ಪ್ರಾರಂಭ



* ಅಸ್ಸಾಂ ಪೊಲೀಸ್ ಇಲಾಖೆಯಲ್ಲಿ ಹೊಸ ಫಿಟ್ನೆಸ್ ಅಭಿಯಾನ ಪ್ರಾರಂಭವಾಗಿದ್ದು, ಪೊಲೀಸ್ ಇಲಾಖೆಯ ಅಧಿಕಾರಿಗಳು ಡೊಳ್ಳು ಹೊಟ್ಟೆ, ನಿದಾನ ನಡಿಗೆ, ಸೇರಿದಂತೆ ಪೊಲೀಸರು ದೈಹಿಕ ಆರೋಗ್ಯವನ್ನು ಸರಿಯಾಗಿಟ್ಟುಕೊಳ್ಳದ ಪೊಲೀಸ್ ಇಲಾಖೆಯ ಪೇದೆಗಳು ದೈಹಿಕ ಫಿಟ್ನೆಸ್ ಅನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ಪೊಲೀಸ್ ಇಲಾಖೆ ತಿಳಿಸಿದೆ.
* ಅಸ್ಸಾಂ ನ್ ಸಿ.ಎಂ ಆದೇಶದ ಅನುಸಾರವಾಗಿ ಐಪಿಎಸ್, ಎಪಿಎಸ್, ಮತ್ತು ಡಿಇಎಫ್ ,ಸೇರಿದಂತೆ ಪೊಲೀಸ್ ಸಿಬ್ಬಂದಿಗೆ ಬಿಎಂಐ (ಬಾಡಿ ಮಾಸ್ ಇಂಡೆಕ್ಸ್) ಅನ್ನು ವೃತ್ತಿಪರವಾಗಿ ದಾಖಲಿಸುತ್ತೇವೆ ಎಂದು ಅಸ್ಸಾಂ ಪೊಲೀಸ್ ಮಹಾನಿರ್ದೇಶಕರಾದ (ಡಿಜಿಪಿ) ಜಿಪಿ ಸಿಂಗ್ ರವರು ತಿಳಿಸಿದ್ದಾರೆ.

## ಕಲಬುರಗಿ ವಿಮಾನ ನಿಲ್ದಾಣದಲ್ಲಿ 'ನೈಟ್ ಲ್ಯಾಂಡಿಂಗ್'ಗೆ ಅನುಮತಿ



* ಕಲಬುರಗಿ ನಾಗರಿಕ ವಿಮಾನಯಾನ ಸಚಿವಾಲಯದಡಿಯಲ್ಲಿ ಬರುವ ವಿಮಾನ ನಿಲ್ದಾಣದಲ್ಲಿ ರಾತ್ರಿ ಸಮಯ ವಿಮಾನಗಳ ಲ್ಯಾಂಡಿಂಗ್‌ಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಅನುಮತಿ ನೀಡಲಾಗಿದ್ದು, 'ಉಡಾನ್' ಯೋಜನೆಯಡಿ 2019 ರ ನವೆಂಬರ್ 22 ರಂದು ಕಲಬುರಗಿ ವಿಮಾನ ಕಾರ್ಯಾಚರಣೆ ಆರಂಭವಾಯಿತು.
* ವಿಮಾನ ನಿಲ್ದಾಣದಲ್ಲಿ ನೈಟ್ ಲ್ಯಾಂಡಿಂಗ್'ನಿಂದ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಉತ್ತೇಜನ ಸಿಗಲಿದ್ದು, ಉದ್ಯಮಿಗಳು, ಅಧಿಕಾರಿಗಳಿಗೆ ಬೆಂಗಳೂರ, ಮುಂಬೈ, ಚನ್ನೈ, ಗೋವಾ, ದೆಹಲಿಗೆ ಪ್ರಯಾಣ ಬೆಳೆಸಿ ಅದೇ ದಿನ ರಾತ್ರಿ ಮರಳಬಹುದು ಎಂದು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿಯಾದ ಮಂಜುನಾಥ ಜೇವರ್ಗಿ ರವರು ತಿಳಿಸಿದ್ದಾರೆ.

## ಸೌತ್ ಏಷ್ಯನ್ ಯೂತ್ ಟಿಟಿ ಚಾಂಪಿಯನ್ ಶಿಪ್ ನಲ್ಲಿ 16 ಚಿನ್ನದ ಪದಕ




* ಮೇ 17 ರಂದು ಅರುಣಾಚಲ ಪ್ರದೇಶದ ಇಟಾನಗರದ ದೋರ್ಜಿ ಖಂಡು ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ದಕ್ಷಿಣ ಏಷ್ಯನ್ ಯೂತ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ 2023, ಮೂರು ದಿನಗಳ ಅಂತರರಾಷ್ಟ್ರೀಯ ಪಂದ್ಯಾವಳಿಯು ಮುಕ್ತಾಯವಾಯಿತು.
* ಭೂತಾನ್, ಬಾಂಗ್ಲಾದೇಶ, ಭಾರತ, ಮಾಲ್ಡೀವ್ಸ್, ಶ್ರೀಲಂಕಾ ಮತ್ತು ನೇಪಾಳ ಸೇರಿದಂತೆ ಆರು ದೇಶಗಳ 100 ಕ್ಕೂ ಹೆಚ್ಚು ಕ್ರೀಡಾಪಟುಗಳು ಸೌತ್ ಏಷ್ಯನ್ ಯೂತ್ ಟಿಟಿ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದ್ದರು.
* ಇಟಾನಗರದ ದೋರ್ಜಿ ಖಂಡು ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಅರುಣಾಚಲ ಪ್ರದೇಶದ ರಾಜ್ಯಪಾಲರಾದ ಲೆಫ್ಟಿನೆಂಟ್ ಜನರಲ್ ಕೆ.ಟಿ.ಪರ್ನಾಯಕ್ (ನಿವೃತ್ತ) ಮುಖ್ಯ ಅತಿಥಿಯಾಗಿ ಭಾಗವಹಿಸಲಾಗಿದ್ದು, ಆತಿಥೇಯ ರಾಷ್ಟ್ರ ಭಾರತವು ಪಂದ್ಯಾವಳಿಯಲ್ಲಿ ಎಲ್ಲಾ ಚಿನ್ನದ ಪದಕಗಳನ್ನು ಗೆಲ್ಲುವ ಮೂಲಕ ಸಾಧನೆಯನ್ನು ಮಾಡಿದೆ.

## ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಕೆವಿ ವಿಶ್ವನಾಥನ್, ಪ್ರಶಾಂತ್ ಮಿಶ್ರಾ ರವರು ಪ್ರಮಾಣ ವಚನ ಸ್ವೀಕಾರ



* ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಹಿರಿಯ ವಕೀಲ ಕೆವಿ ವಿಶ್ವನಾಥನ್ ರವರನ್ನು ವಕೀಲರ ನೇಮಕಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರ ನ್ಯಾಯಮೂರ್ತಿಗಳು ಪ್ರಮಾಣ ವಚನ ಸ್ವೀಕರಿಸಲಾಗಿದ್ದು, ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿವೈ ಚಂದ್ರಚೂಡ್ ಅವರ ನೇತೃತ್ವದಲ್ಲಿ ಸುಪ್ರೀಂ ಕೋರ್ಟ್ ಕೊಲಿಜಿಯಂ ಅವರ ಹೆಸರನ್ನು ಕೇಂದ್ರಕ್ಕೆ ಶಿಫಾರಸು ಮಾಡಲಾಯಿತ್ತು.

* ಸುಪ್ರೀಂ ಕೋರ್ಟ್ 34 ನ್ಯಾಯಾಧೀಶರ ಅನುಮೋದಿತ ಬಲವನ್ನು ಹೊಂದಿದ್ದು ಮತ್ತು ಪ್ರಸ್ತುತ 32 ಮಂದಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ ಎಂದು ಐದು ಸದಸ್ಯರ ಕೊಲಿಜಿಯಂ ತಿಳಿಸಲಾಗಿದ್ದು, ಕೊಲಿಜಿಯಂ ವಿಶ್ವನಾಥನ್ ಮತ್ತು ಮಿಶ್ರಾ ಹೆಸರನ್ನು ಶಿಫಾರಸು ಮಾಡಲಾಗಿದೆ.

## ಕರ್ನಾಟಕದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಆಯ್ಕೆ



* ಕರ್ನಾಟಕದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರನ್ನು 2 ನೇ ಅವಧಿಗೆ ಕಾಂಗ್ರೆಸ್ ಹೈಕಮಾಂಡ್ ಆಯ್ಕೆ ಮಾಡಲಾಗಿದ್ದು, ಡಿಕೆ ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ಕಾಂಗ್ರೆಸ್ ಹೈಕಮಾಂಡ್ ಮೇ 18 (ಗುರುವಾರ) ರಂದು ಅಧಿಕೃತವಾಗಿ ಘೋಷಣೆ ಮಾಡಲಾಗಿದೆ.
* 2024 ಲೋಕಸಭೆ ಚುನಾವಣೆ ವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ ಶಿವಕುಮಾರ ರವರು ಮುಂದುವರೆಯಲಿದ್ದಾರೆ ಎಂದು ತಿಳಿಸಲಾಗಿದ್ದು, ಮೇ 20 ರಂದು ನಡೆಯುವ ಸಮಾರಂಭದಲ್ಲಿ ಕೆಲವು ಶಾಸಕರು ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ವೇಣುಗೋಪಾಲ ರವರು ತಿಳಿಸಿದ್ದಾರೆ.

# 20 May 2023

## ದೇಶದಲ್ಲೇ ಸುಧಾರಣೆ ಕಂಡ ಇಂಟರ್ನೆಟ್ ವೇಗ : ಜಾಗತಿಕ ಶ್ರೇಯಾಂಕದಲ್ಲಿ ಭಾರತಕ್ಕೆ 60 ನೇಸ್ಥಾನ



* ರಿಲಯನ್ಸ್ ಜಿಯೋ ಮತ್ತು ಏರ್‌ಟೆಲ್‌ನಿಂದಾಗಿ 5G ರೋಲ್ ಔಟ್ ವೇಗವನ್ನು ಪಡೆದುಕೊಂಡಿದ್ದರಿಂದ ಸರಾಸರಿ ಮೊಬೈಲ್ ವೇಗದಲ್ಲಿ ಏಪ್ರಿಲ್‌ನಲ್ಲಿ ಭಾರತವು ನಾಲ್ಕು ಸ್ಥಾನಗಳನ್ನು ಜಿಗಿದು 60ನೇ ಸ್ಥಾನದಲ್ಲಿದೆ.
* ಇಂಟರ್ನೆಟ್ ಬಳಕೆ ಏರಿಕೆಗೆ ಗ್ರಾಮೀಣ ಭಾರತವು ಗಮನಾರ್ಹ ಕೊಡುಗೆ ನೀಡುತ್ತಿದೆ.
* ಭಾರತವು ಈಗ ತಿಂಗಳಿಗೆ ಒಮ್ಮೆಯಾದರೂ ಇಂಟರ್ನೆಟ್ ಬಳಸುವ 759 ಮಿಲಿಯನ್ (75.0 ಕೋಟಿ) 'ಸಕ್ರಿಯ' ಇಂಟರ್ನೆಟ್ ಬಳಕೆದಾರರನ್ನು ಹೊಂದಿದೆ. 2025 ರ ವೇಳೆಗೆ ಈ ಸಂಖ್ಯೆ 900 ಮಿಲಿಯನ್ (90 ಕೋಟಿ) ತಲುಪಲಿದೆ ಎಂದು ವರದಿಯೊಂದು ಈ ಹಿಂದೆ ಬಿಡುಗಡೆಯಾಗಿತ್ತು.
* ಸದ್ಯ 2022 ರಲ್ಲಿದ್ದಂತೆ ಸಕ್ರಿಯ ಇಂಟರ್ನೆಟ್ ಬಳಕೆದಾರರ ಪೈಕಿ 399 ಮಿಲಿಯನ್ ಜನ ಗ್ರಾಮೀಣ ಭಾಗದವರು ಮತ್ತು 360 ಮಿಲಿಯನ್ ಜನ ನಗರವಾಸಿಗಳು. ಅಂದರೆ ಇಂಟರ್ನೆಟ್ ಬಳಕೆ ಏರಿಕೆಗೆ ಗ್ರಾಮೀಣ ಭಾರತವು ಗಮನಾರ್ಹ ಕೊಡುಗೆ ನೀಡುತ್ತಿದೆ ಎಂಬುದು ಇದರಿಂದ ತಿಳಿದು ಬರುತ್ತದೆ ಎಂದು ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (IAMAI) ಮತ್ತು ಡೇಟಾ ಮತ್ತು ಅನಾಲಿಟಿಕ್ಸ್ ಕಂಪನಿ ಕಾಂಟರ್ ವರದಿ ಹೇಳಿದೆ.

## ಮೇ 20 ವಿಶ್ವ ಜೇನು ದುಂಬಿ ದಿನ 2023



* ದೇಶಾದ್ಯಂತ ಪ್ರತಿ ವರ್ಷ ಮೇ 20 ರಂದು ಜೇನುಸಾಕಣೆಯ ಪ್ರವರ್ತಕ ಆಂಟನ್ ಜಾನ್ಸಾ 1734 ರಲ್ಲಿ ಸ್ಲೊವೇನಿಯಾದಲ್ಲಿ ಜನಿಸಿದರು, ಆದ್ದರಿಂದ ವಿಶ್ವ ಜೇನುನೊಣ ದಿನವೆಂದು ಆಚರಿಸಲಾಗಿದ್ದು, ವಿಶ್ವಸಂಸ್ಥೆಯಿಂದ ಅನುಮೋದಿಸಲ್ಪಟ್ಟ, ಮೊದಲ ವಿಶ್ವ ಜೇನುನೊಣ ದಿನವನ್ನು ಮೇ 20, 2018 ರಂದು ಆಚರಿಸಲಾಯಿತು.
* ಮೇ 20 ವಿಶ್ವ ಜೇನು ದುಂಬಿ ದಿನ 2022 ರ ಥೀಮ್ 'ಬೀ ಎಂಗೇಜ್ಡ್: ಜೇನು ನೊಣಗಳ ವೈವಿಧ್ಯತೆ ಮತ್ತು ಜೇನು ಸಾಕಣೆ ವ್ಯವಸ್ಥೆಯ ಸಂಭ್ರಮ' ಇದು ವಿಶ್ವ ಜೇನು ಹುಳುಗಳ ದಿನ 2022ರ ಥೀಮ್ ಆಗಿದೆ.
* ವಿಶ್ವ ಜೇನುನೊಣ ದಿನಾಚರಣೆ 2023 ರ ಥೀಮ್ "ಪರಾಗಸ್ಪರ್ಶಕ-ಸ್ನೇಹಿ ಕೃಷಿ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುವುದು." ಥೀಮ್ ಆಗಿದೆ.

## 2,000 ಸಾವಿರ ನೋಟು ಹಿಂಪಡೆದ ಭಾರತೀಯ ರಿಸರ್ವ್ ಬ್ಯಾಂಕ್ (RBI)



* ₹2 ಸಾವಿರ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಇಂದು ಘೋಷಿಸಲಾಗಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ₹ 2 ಸಾವಿರದ ನೋಟು ವಿತರಣೆ ನಿಲ್ಲಿಸಲು ಬ್ಯಾಂಕ್‌ಗಳಿಗೆ ಈಗಾಗಲೇ ಸೂಚನೆ ನೀಡಿದೆ.
* ಸದ್ಯ ಚಲಾವಣೆಯಲ್ಲಿ ಇರುವ ನೋಟುಗಳನ್ನು ಸೆಪ್ಟೆಂಬರ್ 30ರ ಒಳಗಾಗಿ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವಂತೆ ಅಥವಾ ಬೇರೆ ಮುಖಬೆಲೆಯ ನೋಟುಗಳೊಂದಿಗೆ ವಿನಿಮಯ ಮಾಡಿಕೊಳ್ಳುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಸೂಚನೆ ನೀಡಿದೆ.
* ಮೇ 23ರಿಂದ ನೋಟುಗಳನ್ನು ಬದಲಿಸಿಕೊಳ್ಳಬಹುದಾಗಿದೆ, ₹2 ಸಾವಿರ ಮುಖಬೆಲೆಯ ನೋಟುಗಳನ್ನು ರಿಸರ್ವ್ ಬ್ಯಾಂಕ್ (ಆರ್‌ಬಿಐ) 2016ರ ನವೆಂಬರ್‌ನಲ್ಲಿ ಚಲಾವಣೆಗೆ ತಂದಿತ್ತು.

## ಅಂತಾರಾಷ್ಟ್ರೀಯ ಮ್ಯೂಸಿಯಂ ಎಕ್ಸ್‌ಪೋ ಅನ್ನು ಪ್ರಧಾನಿ ಮೋದಿಯವರಿಂದ ಉದ್ಘಾಟನೆ




* ಪ್ರಗತಿ ಮೈದಾನದಲ್ಲಿ ಅಂತಾರಾಷ್ಟ್ರೀಯ ಮ್ಯೂಸಿಯಂ ಎಕ್ಸ್‌ಪೋ 2023 ಉದ್ಘಾಟನೆಯ ಸಂದರ್ಭದಲ್ಲಿ ಪ್ರಧಾನಮಂತ್ರಿಯವರದ ನರೇಂದ್ರ ಮೋದಿಯವರು ಅಂತಾರಾಷ್ಟ್ರೀಯ ಮ್ಯೂಸಿಯಂ ಎಕ್ಸ್ ಪೋ 2023 ಅನ್ನು ಉದ್ಘಾಟಿಸಿದರು.

* ಅಂತಾರಾಷ್ಟ್ರೀಯ ಮ್ಯೂಸಿಯಂ ಎಕ್ಸ್‌ಪೋವು 'ಆಜಾದಿ ಕಾ ಅಮೃತ್ ಮಹೋತ್ಸವ'ದ ಭಾಗವಾಗಿದ್ದು, ಮತ್ತು 47 ನೇ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನವನ್ನು (IMD) ಆಚರಿಸಲು ಆಯೋಜಿಸಲಾಗಿದೆ.

* ಅಂತಾರಾಷ್ಟ್ರೀಯ ಮ್ಯೂಸಿಯಂ ಎಕ್ಸ್‌ಪೋ 2023 ರ ಥೀಮ್ "ವಸ್ತುಸಂಗ್ರಹಾಲಯಗಳು, ಸುಸ್ಥಿರತೆ ಮತ್ತು ಯೋಗಕ್ಷೇಮ" ಆಗಿದೆ. ಪ್ರದರ್ಶನವು ಭಾರತದ ಸಾಂಸ್ಕೃತಿಕ ರಾಜತಾಂತ್ರಿಕತೆಗೆ ಹೆಚ್ಚಿನ ಕೊಡುಗೆ ನೀಡುವ ಸಾಂಸ್ಕೃತಿಕ ಕೇಂದ್ರಗಳಾಗಿ ಅಭಿವೃದ್ಧಿ ಹೊಂದಲು ಸಹಾಯ ಮಾಡುವ ವೃತ್ತಿಪರರೊಂದಿಗೆ ವಸ್ತುಸಂಗ್ರಹಾಲಯಗಳ ಕುರಿತು ಸಮಗ್ರ ಸಂವಾದವನ್ನು ಪ್ರಾರಂಭಿಸುವ ಗುರಿಯನ್ನು ಹೊಂದಿದೆ.

## ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಚಂದ್ರಯಾನ -3 ಉಡಾವಣೆ



* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಯೋಜನೆಯ ಪ್ರಕಾರ ತಂತ್ರಜ್ಞಾನವನ್ನು ಬಳಸಿ ಚಂದ್ರನ ದಕ್ಷಿಣ ದ್ರುವದ ಮೇಲೆ ಚಂದ್ರಯಾನ - 3 ಬಾಹ್ಯಾಕಾಶ ನೌಕೆಯನ್ನು ಜುಲೈನಲ್ಲಿ ಎರಡನೇ ವಾರ ಉಡಾವಣೆ ನಡೆಯಲಿದೆ.

* ಬಾಹ್ಯಾಕಾಶ ನೌಕೆಯನ್ನು ಚಂದ್ರನ ಮೇಲೆ ಆವರಿಸಿರುವ ಶಿಲಾ ಪದರದ ಮೇಲಿನ ಘನಪದಾರ್ಥ ಅಧ್ಯಯನ ನಡೆಸುವ ಲೂನಾರ್ ರಿಗೊಲಿತ್ ರವರು ಮತ್ತು ಭೂಕಂಪನ ಅಧ್ಯಯನ ಮಾಡುವ ಲೂನಾರ್ ಸೆಸಿಮಿಸಿಟಿ ರವರು ಹೊರ ಆವರಣದಲ್ಲಿನ ಪ್ಲಾಸ್ಮಾ ಮತ್ತು ಬಾಹ್ಯಾಕಾಶ ನೌಕೆ ಇಳಿದ ಪ್ರದೇಶದಲ್ಲಿನ ಧಾತುರೂಪದ ಸಂಯೋಜನೆಯ ಮೇಲೆ ಅಧ್ಯಯನ ನಡೆಸಲಾಗುತ್ತದೆ.

## ಸಲ್ಮಾನ್ ರಶ್ದಿಗೆ ರವರಿಗೆ 'ಪೆನ್ ಸೆಂಟೆನರಿ ಕರೇಜ್' ಪ್ರಶಸ್ತಿಯ ಗೌರವ



* ಖ್ಯಾತ ಲೇಖಕರಾದ 75 ವರ್ಷದ ಸಲ್ಮಾನ್ ರಶ್ದಿಗೆ ರವರಿಗೆ ಮೇ 18 ರಂದು (ಗುರುವಾರ) ನಡೆದ ನ್ಯೂಯಾರ್ಕ್‌ನ ಮ್ಯಾನ್ ಹಾಟ್ಸ್ ನಲ್ಲಿರುವ 'ಅಮೇರಿಕನ್ ಮ್ಯೂಸಿಯಂ ಅಫ್ ನ್ಯಾಚುರಲ್ ಹಿಸ್ಟರಿ'ಯಲ್ಲಿ ನಡೆದ 2023 ರ ಲಿಟರರಿ ಗಾಲಾ ಸಮಾರಂಭದಲ್ಲಿ 'ಪೆನ್ ಸೆಂಟೆನರಿ ಕರೇಜ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

* ಅಮೇರಿಕಾದ ಅಧ್ಯಕ್ಷ, ನಾಟಕಕಾರ, ಮತ್ತು ಕಾದಂಬರಿಕಾರರಾದ ಆಯಾದ ಅಖ್ತರ್ ರವರು ಸಲ್ಮಾನ್ ರಶ್ದಿ ರವರು ನಿರಂತರವಾಗಿ ತೆಗೆದುಕೊಂಡ ನಿಲುವುಗಳಿಗೆ 'ಪೆನ್ ಸೆಂಟೆನರಿ ಕರೇಜ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು ಎಂದು ತಿಳಿಸಲಾಯಿತು.

## ಆಂಧ್ರಪ್ರದೇಶ ಸರ್ಕಾರದ ವೈಎಸ್‌ಆರ್ ಮತ್ಸ್ಯಕರ ಭರೋಸಾ ಯೋಜನೆ




* ಆಂಧ್ರಪ್ರದೇಶ ಸರ್ಕಾರವು ಮೀನುಗಾರರನ್ನು ಬೆಂಬಲಿಸಲು ಮತ್ತು ಮೀನುಗಾರಿಕೆ ಉದ್ಯಮದಲ್ಲಿ ಉದ್ಯೋಗವನ್ನು ಉತ್ತೇಜಿಸಲು ₹ 3,767 ಕೋಟಿ ವೆಚ್ಚದ ಜಾಗತಿಕ ಗುಣಮಟ್ಟದ 10 ಮೀನುಗಾರಿಕೆ ಬಂದರುಗಳು ಮತ್ತು ಆರು ಫಿಶ್ ಲ್ಯಾಂಡಿಂಗ್ ಕೇಂದ್ರಗಳ ನಿರ್ಮಾಣವು ಮೀನುಗಾರಿಕೆ ಉದ್ಯಮದ ಬೆಳವಣಿಗೆಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುತ್ತದೆ.

* ವೈಎಸ್‌ಆರ್ ಮತ್ಸ್ಯಕರ ಭರೋಸಾ ಯೋಜನೆಯು ಸಮುದ್ರ ಮೀನುಗಾರಿಕೆಯ ವಾರ್ಷಿಕ ನಿಷೇಧದ ಅವಧಿಯಲ್ಲಿ ಮೀನುಗಾರ ಕುಟುಂಬಗಳಿಗೆ ₹10,000 ಹಣಕಾಸಿನ ನೆರವು ನೀಡುವುದರ ಮೇಲೆ ಕೇಂದ್ರೀಕರಿಸುತ್ತದೆ.

## ಭಾರತವು ಮ್ಯಾನ್ಮಾರ್ ಜುಂಟಾಗೆ ₹422 ಕೋಟಿ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಪೂರೈಸಿದೆ ಎಂದು ಯುಎನ್ ವರದಿ




* ವಿಶ್ವಸಂಸ್ಥೆಯ (ಯುಎನ್) ಇತ್ತೀಚಿನ ವರದಿಯ ಪ್ರಕಾರ, ಭಾರತೀಯ ಸರ್ಕಾರಿ ಸ್ವಾಮ್ಯದ ಕಂಪನಿಗಳು ಮತ್ತು ದೇಶದಲ್ಲಿನ ಖಾಸಗಿ ಸಂಸ್ಥೆಗಳು ₹ 422 ಕೋಟಿ (ಅಂದಾಜು $ 51 ಮಿಲಿಯನ್)

ಮೌಲ್ಯದ ಶಸ್ತ್ರಾಸ್ತ್ರಗಳು, ಎರಡು ಬಳಕೆಯ ವಸ್ತುಗಳು ಮತ್ತು ಕಚ್ಚಾ ವಸ್ತುಗಳನ್ನು ಮ್ಯಾನ್ಮಾರ್‌ನ ಮಿಲಿಟರಿ ಜುಂಟಾಗೆ ಪೂರೈಸಿವೆ ಎಂದು ವಿಶ್ವಸಂಸ್ಥೆಯ (ಯುಎನ್)ವರದಿಯು ತಿಳಿಸಿದೆ.

* ಭಾರತವು ಮ್ಯಾನ್ಮಾರ್ ಜುಂಟಾಗೆ ಕಣ್ಗಾವಲು, ಫಿರಂಗಿ ಮತ್ತು ಕ್ಷಿಪಣಿಗಳಲ್ಲಿ ಬಳಸಲಾಗುವ ಸರಬರಾಜು ವಸ್ತುಗಳು ಸಾಂಪ್ರದಾಯಿಕ ಅಂತರರಾಷ್ಟ್ರೀಯ ಕಾನೂನು ಮತ್ತು ಅಂತರರಾಷ್ಟ್ರೀಯ ಮಾನವೀಯ ಕಾನೂನನ್ನು ಸಂಭಾವ್ಯವಾಗಿ ಉಲ್ಲಂಘಿಸಬಹುದು ಎಂದು ವರದಿ ಸೂಚಿಸುತ್ತದೆ.

## ಮೇ 21 ಅಂತರರಾಷ್ಟ್ರೀಯ ಚಹಾ ದಿನ 2023



* ಪ್ರಪಂಚದಾದ್ಯಂತ ಮೇ 21 ರಂದು ಅಂತರರಾಷ್ಟ್ರೀಯ ಚಹಾ ದಿನವನ್ನು ಚಹಾದ ಸುದೀರ್ಘ ಇತಿಹಾಸ ಮತ್ತು ಸಾಂಸ್ಕೃತಿಕ ಮಹತ್ವವನ್ನು ಆಚರಿಸಲು ವಾರ್ಷಿಕವಾಗಿ ಆಚರಿಸಲಾಗಿದ್ದು, ಹಸಿವು ಮತ್ತು ಬಡತನದ ವಿರುದ್ಧ ಹೋರಾಡುವಲ್ಲಿ ಚಹಾದ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿಸಲು ಈ ದಿನವು ಆಚರಿಸಲಾಗುತ್ತದೆ.

* ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯು 2019 ರಲ್ಲಿ ಮೇ 21 ಅನ್ನು ಅಂತರರಾಷ್ಟ್ರೀಯ ಚಹಾ ದಿನವೆಂದು ಘೋಷಿಸಲಾಯಿತ್ತು. ಜನಪ್ರಿಯ ದಂತಕಥೆಯ ಪ್ರಕಾರ, 2737 BCE ನಲ್ಲಿ, ಚಕ್ರವರ್ತಿ ಶೆನ್ ನಾಂಗ್ ನೀರನ್ನು ಕುದಿಸುತ್ತಿದ್ದಾಗ ಹತ್ತಿರದ ಕ್ಯಾಮೆಲಿಯಾ ಸೈನೆನ್ಸಿಸ್ ಮರದ ಎಲೆಗಳು ಅವನ ಮಡಕೆಗೆ ಬಿದ್ದವು ಎಂಬ ಕುತೂಹಲ ಕೆರಳಿಸಿದೆ

* ಅಂತರರಾಷ್ಟ್ರೀಯ ಚಹಾ ದಿನ 2022 ರ ಥೀಮ್"ಚಹಾ ಮತ್ತು ನ್ಯಾಯೋಚಿತ ವ್ಯಾಪಾರ" ಥೀಮ್ ಆಗಿದೆ.




# 22 May 2023

## ಮೇ 22 ಜೈವಿಕ ವೈವಿಧ್ಯತೆಯ ಅಂತರರಾಷ್ಟ್ರೀಯ ದಿನ 2023



* ಪ್ರತಿ ವರ್ಷ ಮೇ 22 ರಂದು, ಪ್ರಪಂಚವು ತಿಳುವಳಿಕೆಯನ್ನು ಹೆಚ್ಚಿಸಲು ಮತ್ತು ಭೂಮಿಯ ವೈವಿಧ್ಯಮಯ ಪರಿಸರ ವ್ಯವಸ್ಥೆಗಳ ಸಂರಕ್ಷಣೆಯನ್ನು ಉತ್ತೇಜಿಸಲು ಜೈವಿಕ ವೈವಿಧ್ಯತೆಯ ಅಂತರರಾಷ್ಟ್ರೀಯ ದಿನವನ್ನು ಆಚರಿಸಲಾಗುತ್ತದೆ.

* ಜೈವಿಕ ವೈವಿಧ್ಯತೆಯ ಅಂತರರಾಷ್ಟ್ರೀಯ ದಿನ 2023 ರ ಥೀಮ್ "ಒಪ್ಪಂದದಿಂದ ಕ್ರಿಯೆಗೆ: ಜೀವವೈವಿಧ್ಯತೆಯನ್ನು ಮರಳಿ ನಿರ್ಮಿಸಿ." ಈ ಥೀಮ್ ತಿಳಿಸಿದೆ.

* ಜೈವಿಕ ವೈವಿಧ್ಯತೆಯ ಅಂತರರಾಷ್ಟ್ರೀಯ ದಿನದ ಮಹತ್ವವನ್ನು ಜೀವವೈವಿಧ್ಯವು ವಹಿಸುವ ನಿರ್ಣಾಯಕ ಪಾತ್ರದ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಅದನ್ನು ರಕ್ಷಿಸಲು ಮತ್ತು ಪುನರುಜ್ಜೀವನಗೊಳಿಸುವ ತುರ್ತು ಅಗತ್ಯವನ್ನು ಒತ್ತಿಹೇಳುತ್ತದೆ.

## ಕರ್ನಾಟಕ ಡಿಜಿ ಐಜಿಪಿ ಆಗಿ ಅಲೋಕ್ ಮೋಹನ್ ನೇಮಕ

* ಕರ್ನಾಟಕದ ಪೊಲೀಸ್ ಮಹಾನಿರ್ದೇಶಕರಾಗಿ ಅಲೋಕ್ ಮೋಹನ್ ಅವರು ನೇಮಕಗೊಂಡಿದ್ದಾರೆ.

* ಕರ್ನಾಟಕ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ 1986ನೇ ಬ್ಯಾಚ್ ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿ ಪ್ರವೀಣ್ ಸೂದ್ ಇದ್ದರು. ಸದ್ಯ ಇವರನ್ನು ಸಿಬಿಐನ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

## ಕದಂಬ ನೌಕಾನೆಲೆಯಲ್ಲಿ ಐ.ಎನ್.ಎಸ್. ವಿಕ್ರಾಂತ್ ಯುದ್ಧನೌಕೆಗೆ ನಿಲುಗಡೆ



* ಕಾರವಾರ ನೌಕಾನೆಲೆಗೆ ಭಾರತದ ಮೊದಲ ಸ್ವದೇಶಿ ನಿರ್ಮಿತ ವಿಮಾನ ವಾಹಕ 65 ಮೀ. ಅಗಲ ಮತ್ತು 59 ಮೀ ಎತ್ತರದ ಐ.ಎನ್.ಎಸ್. ವಿಕ್ರಾಂತ್ ಯುದ್ಧ ನೌಕೆಯನ್ನು (2022) ಸೆಪ್ಟೆಂಬರ್ ನಲ್ಲಿ ಕೊಚ್ಚಿನ್ ನೌಕಾನೆಲೆಯಲ್ಲಿ ಲೋಕಾರ್ಪಣೆಗೊಳಿಸಿ ಭಾರತೀಯ ಕದಂಬ ನೌಕಾದಳಕ್ಕೆ ಹಸ್ತಾಂತರಿಸಲಾಗಿತ್ತು.

* 'ನೌಕಾನೆಲೆಯ ಎರಡನೇ ಹಂತದ ವಿಸ್ತರಣೆ ಕಾಮಗಾರಿಯಲ್ಲಿ (ಪ್ರಾಜೆಕ್ಟ್ ಸೀಬರ್ಡ್) ಐ.ಎನ್.ಎಸ್. ವಿಕ್ರಾಂತ್ ವಿಮಾನ ವಾಹಕ ಯುದ್ಧನೌಕೆ ನಿಲುಗಡೆಯ ಹಡಗುಕಟ್ಟೆ ನಿರ್ಮಿಸಲಾಗಿದ್ದು, ಈ ಹಡಗು ಕಟ್ಟೆಯಲ್ಲಿ ಐ.ಎನ್.ಎಸ್. ವಿಕ್ರಾಂತ್ ಯುದ್ಧನೌಕೆ ಮೊದಲ ಬಾರಿಗೆ ನಿಲುಗಡೆಯಾಗಿದ್ದು, ನೌಕಾನೆಲೆಯಲ್ಲಿ ಹೆಚ್ಚಿನ ಹಡಗು ನಿಲುಗಡೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ನೌಕಾನೆಲೆಯ ಅಧಿಕಾರಿಗಳು ತಿಳಿಸಿದ್ದಾರೆ.

## ರಾಜ್ಯದ 25 ನೇ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಪ್ರತಿಜ್ಞಾವಿಧಿ ಸ್ವೀಕಾರ



* ಕರ್ನಾಟಕದ ರಾಜ್ಯದ ನೂತನ 25 ನೇ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ ರವರು ಮೇ 20 (ಶನಿವಾರ) ರಂದು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಕಾಂಗ್ರೆಸ್ ನಾಯಕರು ಪ್ರಮಾಣ ವಚನ ಸ್ವೀಕರಿಸಿದ್ದಾರೆ.
* ಈ ಸಮಾರಂಭದಲ್ಲಿ ಸಚಿವರು ಮತ್ತು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ರವರ ಸಮ್ಮುಖದಲ್ಲಿ ಕಾಂಗ್ರೆಸ್ ನಾಯಕರಿಗೆ ಪ್ರತಿಜ್ಞಾವಿಧಿ ಭೋದಿಸಲಾಗಿದ್ದು, ಇವರ ಜೊತೆಗೆ 8 ಶಾಸಕರು ಮಾತ್ರಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

## ಕಮಲ್ ಹಾಸನ್‌ಗೆ IIFA ಗೌರವ



* ಬಹುಭಾಷಾ ನಟ ಕಮಲ್ ಹಾಸನ್ ರವರಿಗೆ ಅಬುಧಾಬಿಯ ಯಾಸ್ ದ್ವೀಪದಲ್ಲಿ ಮೇ 26, 27ರಂದು ನಡೆಯಲಿರುವ ಐಫಾ ಅವಾರ್ಡ್ ಕಾರ್ಯಕ್ರಮದಲ್ಲಿ "ಭಾರತೀಯ ಸಿನಿಮಾ ಕ್ಷೇತ್ರದ ಅತ್ಯುತ್ತಮ ಸಾಧಕ" IIFA ಗೌರವ ನೀಡಿ ಸನ್ಮಾನಿಸಲಾಗುತ್ತದೆ.
* ಐಫಾ ಅವಾರ್ಡ್ ಕಾರ್ಯಕ್ರಮದ ಸಂದರ್ಭದಲ್ಲಿ ಫ್ಯಾಷನ್ ಡಿಸೈನರ್ ಮನೀಷ್ ಮಲ್ಹೋತ್ರಾ, ತಾರಾ ದಂಪತಿಗಳಾದ ರಿತೇಶ್ ದೇಶ್‌ಮುಖ್, ಜೆನಿಲಿಯಾ ಡಿ' ಸೋಜ ಅವರನ್ನು ಗೌರವಿಸಲಾಗುತ್ತದೆ.

## ಕೇಂದ್ರದ ಹೊಸ ಯೋಜನೆ: ನೆರೆರಾಷ್ಟ್ರಗಳೊಂದಿಗೆ StartUp ವಿನಿಮಯ ಯೋಜನೆಗೆ ಸಿದ್ಧತೆ




* ನೆರೆದೇಶಗಳೊಂದಿಗೆ ಉದ್ಯಮದಲ್ಲಿ ಪರಸ್ಪರ ಸಹಕಾರವನ್ನು ವೃದ್ಧಿಸುವ ಉದ್ದೇಶದೊಂದಿಗೆ ಭಾರತವು ತನ್ನ ನೆರೆರಾಷ್ಟ್ರಗಳೊಂದಿಗೆ "ನವೋದ್ಯಮ ವಿನಿಮಯ ಕಾರ್ಯಕ್ರಮ" ಆಯೋಜಿಸಲು ಬಾಂಗ್ಲಾದೇಶದೊಂದಿಗೆ ವಿನಿಯಮ ಯೋಜನೆಗೆ ಚೌಕಟ್ಟು ಸಿದ್ಧಪಡಿಸಲಾಗಿದ್ದು, ಸದ್ಯದಲ್ಲೇ ಭೂತಾನ್ ಮತ್ತು ನೇಪಾಳದೊಂದಿಗೂ ಈ ಯೋಜನೆ ಸಾಕಾರಗೊಳ್ಳಲಿದೆ.
* ನವೋದ್ಯಮಿಗಳಿಗೆ ಪ್ರೋತ್ಸಾಹಿಸುವ, ದೇಶದಲ್ಲಿ ಸ್ಟಾರ್ಟಪ್ ವ್ಯವಸ್ಥೆಯನ್ನು ರೂಪಿಸುವ ಮತ್ತು ಉದ್ಯೋಗಾಕಾಂಕ್ಷಿಗಳ ಬದಲಾಗಿ ಉದ್ಯೋಗ ಸೃಷ್ಟಿಸುವವರ ಭಾರತವನ್ನು ಬದಲಾಯಿಸುವ ನಿಟ್ಟಿನಲ್ಲಿ 2016ರಲ್ಲಿ ಕೇಂದ್ರ ಸರ್ಕಾರವು ಸ್ಟಾರ್ಟಪ್ ಇಂಡಿಯಾ ಯೋಜನೆ ಆರಂಭಿಸಿತ್ತು.

## ಸರ್ಕಾರಿ ಶಾಲೆಗಳ ಮೇಲ್ವಿಚಾರಣೆಗೆ 'ವಿದ್ಯಾ ಸಮೀಕ್ಷಾ ಕೇಂದ್ರ' ಸ್ಥಾಪನೆ



* ವಿವಿಧ ಸರ್ಕಾರಿ ಯೋಜನೆಗಳಿಂದ ಡೇಟಾವನ್ನು ಸಂಗ್ರಹಿಸಲು ಮತ್ತು ಶಾಲಾ-ಮೇಲ್ವಿಚಾರಣಾ ನಿಯಂತ್ರಣ ಕೊಠಡಿ - ವಿದ್ಯಾ ಸಮೀಕ್ಷಾ ಕೇಂದ್ರ (VSK) ಅನ್ನು ಪ್ರಾರಂಭಿಸಲಾಗಿದ್ದು, ಎರಡು ವರ್ಷಗಳ ನಂತರ 14 ಇತರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ (UT) ಇದೇ ರೀತಿಯ ಘಟಕಗಳನ್ನು ಸ್ಥಾಪಿಸಲು ಪ್ರಯತ್ನಗಳನ್ನು ಪ್ರಾರಂಭಿಸಿದೆ ಎಂದು ವರದಿ ತಿಳಿಸಿದೆ.
* ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ), ಶಾಲಾ ಶಿಕ್ಷಣ ಸಂಶೋಧನೆಯ ಮೇಲಿನ ಕೇಂದ್ರ ಸರ್ಕಾರದ ಉನ್ನತ ಸಂಸ್ಥೆಯಾಗಿದ್ದು, ಶಿಕ್ಷಣದ ಕುರಿತು ರಾಜ್ಯದ ಡೇಟಾವನ್ನು ಮೇಲ್ವಿಚಾರಣೆ ಮಾಡಲು ಕೇಂದ್ರೀಕೃತ VSKಯನ್ನು ಸ್ಥಾಪಿಸಲಾಗಿದೆ.

## ಮೇ 21 ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನವನ್ನು




* ಭಾರತವು ಪ್ರತಿ ವರ್ಷ ಮೇ 21 ರಂದು ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನವನ್ನು 1991 ರಲ್ಲಿ ಈ ದಿನದಂದು ಹತ್ಯೆಗೀಡಾದ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಮರಣದ ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗಿದ್ದು, ಭಯೋತ್ಪಾದನೆಯ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಭಯೋತ್ಪಾದನೆಯನ್ನು ಎದುರಿಸಲು ಭಾರತದ ಬದ್ಧತೆಯನ್ನು ಪುನರುಚ್ಚರಿಸಲು ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನವನ್ನು ಆಚರಿಸಲಾಗುತ್ತದೆ.
* ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನದಂದು, ಭಯೋತ್ಪಾದನೆಯ ವಿನಾಶಕಾರಿ ಪರಿಣಾಮದ ಬಗ್ಗೆ ಜನರಿಗೆ ಶಿಕ್ಷಣ ನೀಡಲು ಮತ್ತು ಶಾಂತಿ, ಸಾಮರಸ್ಯ ಮತ್ತು ರಾಷ್ಟ್ರೀಯ ಭದ್ರತೆಯ ಮಹತ್ವವನ್ನು ಒತ್ತಿಹೇಳಲು ದೇಶಾದ್ಯಂತ ವಿವಿಧ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಆಯೋಜಿಸಲಾಗಿದೆ.

# 23 May 2023

## ಪ್ರಧಾನಿ ಮೋದಿಯವರಿಗೆ ಪಪುವಾ'ಗ್ರಾಂಡ್ ಚಾಂಪಿಯನ್ ಆಫ್ ದಿ ಆರ್ಡರ್ ಆಫ್ ಲೊಗೊಹು' ಪ್ರಶಸ್ತಿ ಪ್ರದಾನ



KPSC Vaani

* ಭಾರತದ ಪ್ರಧಾನಿ ನರೇಂದ್ರ ಮೋದಿಯವರಿಗೆ ಪಪುವಾ ನ್ಯೂಗಿನಿ ಮತ್ತು ಫಿಜಿ ದ್ವೀಪ ರಾಷ್ಟ್ರಗಳ ಸಮಾರಂಭದಲ್ಲಿ ಪಪುವಾ ನ್ಯೂಗಿನಿ ಗವರ್ನರ್ ಜನರಲ್ ಸರ್ ಬಾಬ್ ದಾಡೆ ಅವರು ನರೇಂದ್ರ ಮೋದಿಯವರಿಗೆ 'ಗ್ರಾಂಡ್ ಚಾಂಪಿಯನ್ ಆಫ್ ದಿ ಆರ್ಡರ್ ಆಫ್ ಲೊಗೊಹು' ಎಂಬ ಅತ್ಯುನ್ನತ ನಾಗರಿಕ ಪುರಸ್ಕಾರವನ್ನು ಮೇ 22 ರಂದು ನೀಡಿ ಗೌರವಿಸಲಾಯಿತ್ತು.
* 'ಗ್ರಾಂಡ್ ಚಾಂಪಿಯನ್ ಆಫ್ ದಿ ಆರ್ಡರ್ ಆಫ್ ಲೊಗೊಹು' ಎಂಬ ಪುರಸ್ಕಾರ ಪಡೆದವರನ್ನು ಚಿಫ್ ಎಂದು ಕರೆಯಲಾಗಿದ್ದು, ಮತ್ತು ದ್ವೀಪ ರಾಷ್ಟ್ರಗಳ ಏಕತೆಗಾಗಿ ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

## ಕರ್ನಾಟಕ ರಾಜ್ಯದ ನೂತನ ಅಡ್ವೋಕೇಟ್ ಜನರಲ್ ಆಗಿ ನ್ಯಾಯಾಧೀಶ " ಶಶಿಕಿರನ್ ಶೆಟ್ಟಿ " ನೇಮಕ.




* ಕರ್ನಾಟಕ ರಾಜ್ಯದ ನೂತನ ಅಡ್ವೋಕೇಟ್ ಜನರಲ್ ಆಗಿ ನ್ಯಾಯಾಧೀಶ " ಶಶಿಕಿರನ್ ಶೆಟ್ಟಿ ಅವರು ನೇಮಕಗೊಂಡಿದ್ದಾರೆ.
* ನಿರ್ಗಮಿತ ಅಡ್ವೋಕೇಟ್ ಜನರಲ್ - ಪ್ರಭುಲಿಂಗ ಕೆ ನಾವಾಡಗಿ ಅವರ ನಿರ್ಗಮನದ ನಂತರ ಶಶಿಕಿರಣ್ ಅವರನ್ನು ನೇಮಕಮಾಡಲಾಗಿದೆ.
* ಸಂವಿಧಾನದ 165 ನೇ ವಿಧಿಯ ಅನುಸಾರವಾಗಿ ರಾಜ್ಯದ ರಾಜ್ಯಪಾಲರು ಅಡ್ವೋಕೇಟ್ ಜನರಲ್ ಅವರನ್ನು ನೇಮಕ ಮಾಡುತ್ತಾರೆ. ಅಡ್ವೋಕೇಟ್ ಜನರಲ್ ಅವರು ರಾಜ್ಯದ ಪ್ರಥಮ ಕಾನೂನು ಅಧಿಕಾರಿ ಆಗಿರುತ್ತಾರೆ. ಕೇಂದ್ರದಲ್ಲಿ ಅಟಾರ್ನಿ ಜನರಲ್ ಇರುವಂತೆ ರಾಜ್ಯದಲ್ಲಿ ಅಡ್ವೋಕೇಟ್ ಜನರಲ್ ಇರುತ್ತಾರೆ.

## ಸುದರ್ಶನ್ ಮತ್ತು ಶೋಭಾ ರವರು ಕನ್ನಡ ಸಾಹಿತ್ಯ ದತ್ತಿ ಪ್ರಶಸ್ತಿಗೆ ಆಯ್ಕೆ



* ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2023 ನೇ ಸಾಲಿನ ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ ಪ್ರಶಸ್ತಿಗೆ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಾದ ಸುದರ್ಶನ್ ಚನ್ನಂಗಿಹಳ್ಳಿ ರವರು ಆಯ್ಕೆಯಾಗಿದ್ದು, ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ಲೇಖಕಿ ಶೋಭಾ ಎಚ್.ಜಿ. ಆಯ್ಕೆಮಾಡಲಾಗಿದೆ.
* ಕನ್ನಡ ಸಾಹಿತ್ಯ ಪರಿಷತ್ತು ಪ್ರಶಸ್ತಿಯು ₹ 10 ಸಾವಿರ ನಗದು ಮತ್ತು ಫಲಕ ಒಳಗೊಂಡಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಹರ್ಷ ಜೋಶಿ ಯವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ದತ್ತಿ ಪ್ರಶಸ್ತಿಗೆ ಆಯ್ಕೆಯ ಸಮಿತಿಯಾಗಿದೆ.

## ಜಾವೆಲಿನ್ ಎಸೆತದಲ್ಲಿ ವಿಶ್ವದ ನಂ.1 ಪಟ್ಟಕ್ಕೇರಿದ ನೀರಜ್ ಚೋಪ್ರಾ



* ವಿಶ್ವ ಅಥ್ಲೆಟಿಕ್ಸ್ ಚಾಂಪಿಯನಶೀಪ್ ನಲ್ಲಿ ಭಾರತದ ನೀರಜ್ ಚೋಪ್ರಾ ರವರು ಪುರುಷರ ಜಾವಲಿನ್ ನ ವಿಶ್ವ ರ್ಯಾಂಕಿಂಗ್ ನಲ್ಲಿ ಭಾರತದ ಅಥ್ಲೀಟ್ ಗ್ರೆನೇಡಾದ ಅಂಡರ್ಸನ್ ಪೀಟರ್ಸ್ ಅವರನ್ನು ಹಿಂದಿಕ್ಕಿ ಜಾವಲಿನ್ ನ ವಿಶ್ವ ರ್ಯಾಂಕಿಂಗ್ ನಲ್ಲಿ ನೀರಜ್ ಚೋಪ್ರಾ ರವರು ಅಗ್ರಸ್ಥಾನಕ್ಕೇರುವ ಮೂಲಕ ಸಾಧನೆ ಮಾಡಿದ್ದಾರೆ.
* ಜಾವಲಿನ್ ಅಂತರರಾಷ್ಟ್ರೀಯ ಫೆಡರೇಷನ್ ಬ್ಯಾಂಕಿಂಗ್ ಪಟ್ಟಿಯಲ್ಲಿ ನೀರಜ 1,455 ಅಂಕಗಳನ್ನೂ ಹೊಂದಿದ್ದು, ಅಂಡರ್ಸನ್ ಪೀಟರ್ಸ್ ಬಳಿ 1,433 ಪಾಯಿಂಟ್ಸ್‌ಗಳಿದ್ದು, ವಿಶ್ವ ಅಥ್ಲೆಟಿಕ್ ಚಾಂಪಿಯನ್ ಷಿಪ್ ಮತ್ತು ಡೈಮಂಡ್ ಲೀಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದರಿಂದ ನಂ.1 ಸ್ಥಾನ ಕ್ಕೇರಿದರು.

## ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಮನೋಜ್ ಸೋನಿ ರವರ ಅಧಿಕಾರ ಸ್ವೀಕಾರ



* ಕೇಂದ್ರ ಲೋಕಸೇವಾ ಆಯೋಗದ (UPSC) ನೂತನ ಅಧ್ಯಕ್ಷರಾಗಿ ಖ್ಯಾತ ತಜ್ಞರಾದ ಮನೋಜ್ ಸೋನಿ ಅವರು ನೇಮಕಗೊಂಡಿದ್ದಾರೆ . ಇವರು 2017 ರ ಜೂನ್ 28 ರಂದು ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಾಗಿ ನೇಮಕಗೊಂಡಿದರು.
* ಯುಪಿಎಸ್ ಸಿ ಯ ಆಯೋಗದ ಹಿರಿಯ ಸದಸ್ಯ ಸ್ಮಿತಾ ನಾಗರಾಜ್ ರವರು ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದ್ದರು ಎಂದು ಸಿಬ್ಬಂದಿ ಸಚಿವಾಲಯವು ತಿಳಿಸಿದೆ.

## ವಿಧಾನಸಭೆಯ ಹಂಗಾಮಿ ಸಭಾಧ್ಯಕ್ಷರಾಗಿ ಆರ್.ವಿ.ದೇಶಪಾಂಡೆ ನೇಮಕ



* 16ನೇ ವಿಧಾನಸಭೆಯ ಮೊದಲ ಅಧಿವೇಶನ ಸೋಮವಾರದಿಂದ (ಮೇ 22) ರಂದು ವಿಧಾನಸೌಧದಲ್ಲಿರುವ ವಿಧಾನಸಭೆ ಸಭಾಂಗಣದಲ್ಲಿ ಕಾಂಗ್ರೆಸ್‌ನ ಹಿರಿಯ ಶಾಸಕ ಆರ್. ವಿ. ದೇಶಪಾಂಡೆ ಅವರನ್ನು ವಿಧಾನಸಭೆಯ ಹಂಗಾಮಿ ಸಭಾಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಹಂಗಾಮಿ ಸ್ಪೀಕರ್ ಆಗಿ ಕಾಂಗ್ರೆಸ್‌ನ ಆರ್.ವಿ ದೇಶಪಾಂಡೆ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.
* ವಿಧಾನಸಭೆಯ ಸದನದಿಂದ ಸಭಾಧ್ಯಕ್ಷರು ಆಯ್ಕೆಯಾಗುವರೆಗೆ ವಿದಾನಸಭಾಧ್ಯಕ್ಷರ ಕರ್ತವ್ಯವನ್ನು ನಿರ್ವಹಿಸಲು ಆರ್.ವಿ.ದೇಶಪಾಂಡೆ ರವರನ್ನು ಮೇ 22ರಿಂದ ಜಾರಿಗೆ ಬರುವಂತೆ

KPSC Vaani

ರಾಜ್ಯಪಾಲರು ನೇಮಕ ಮಾಡಿದ್ದಾರೆ ಎಂದು ವಿಧಾನ ಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ರವರು ತಿಳಿಸಿದ್ದಾರೆ.

## ರಜನೀಶ್ ಗೋಯಲ್ ರವರು ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಯಾಗಿ ನೇಮಕ



* 1986 ನೇ ಬ್ಯಾಚನ ಐಎಎಸ್ ಅಧಿಕಾರಿಗಳಾದ ರಜನೀಶ್ ಗೋಯಲ್ ರವರಿಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನವರ ಹೆಚ್ಚುವರಿ ಮುಖ್ಯಕಾರ್ಯದರ್ಶಿಯಾಗಿ ನೇಮಕವಾಗಿದ್ದು, ರಜನೀಶ್ ಗೋಯಲ್ ರವರು ಗೃಹ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಯಾಗಿ ಮುಂದುವರೆಯಲಿದ್ದಾರೆ.

* ಮುಖ್ಯಮಂತ್ರಿಯವರು ಕೆಎಎಸ್ ಅಧಿಕಾರಿಯಾಗಿರುವ ಬಿ.ಶಿವಸ್ವಾಮಿ ಅವರನ್ನು ಮುಖ್ಯಮಂತ್ರಿಯವರು ಜಂಟಿ ಕಾರ್ಯದರ್ಶಿ ಹುದ್ದೆಗೆ ಮತ್ತು ಕರ್ನಾಟಕ ಪೌರಾಡಳಿತ ಸೇವೆಯ ಡಾ.ಕೆ.ವೈಷ್ಣವಿ ಹಾಗು ಬೆಂಗಳೂರಿನ ಗಂಗಾ ನಗರದ ಉಪ ನೊಂದಣಾಧಿಕಾರಿ ಆರ್.ಮಹಾದೇವ ಅವರನ್ನು ವಿಶೇಷ ಕರ್ತವ್ಯಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

# 24 May 2023

## ಮೇ 24 ಭಾರತೀಯ ಕಾಮನ್‌ವೆಲ್ತ್ ದಿನ 2023




* ಪ್ರಪಂಚದಾದ್ಯಂತ ಪ್ರತಿ ವರ್ಷ ಮೇ 24 ರಂದು ಕಾಮನ್‌ವೆಲ್ತ್ ದಿನವನ್ನು ಆಚರಿಸಲಾಗುತ್ತದೆ.

* ರಾಣಿ ವಿಕ್ಟೋರಿಯಾ ಅವರ ಜನ್ಮ ವಾರ್ಷಿಕೋತ್ಸವವನ್ನು ನೆನಪಿಸಲು ಕಾಮನ್‌ವೆಲ್ತ್ ದಿನವನ್ನು ಆಚರಿಸಲಾಗುತ್ತದೆ.

* ಭಾರತೀಯ ಕಾಮನ್‌ವೆಲ್ತ್ ದಿನ 2023 ರ ಥೀಮ್ "ಸುಸ್ಥಿರ ಮತ್ತು ಶಾಂತಿಯುತ ಸಾಮಾನ್ಯ ಭವಿಷ್ಯವನ್ನು ರೂಪಿಸುವುದು"ಹವಾಮಾನ ಬದಲಾವಣೆ ಮತ್ತು ಲಿಂಗ ಸಮಾನತೆಯನ್ನು ಉತ್ತೇಜಿಸುವ ಪ್ರಯತ್ನಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ 54 ಕಾಮನ್‌ವೆಲ್ತ್ ರಾಷ್ಟ್ರಗಳ ಸಾಧನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅಂಗೀಕರಿಸಲು ಕಾಮನ್‌ವೆಲ್ತ್ ದಿನವು ಅವಕಾಶವನ್ನು ಒದಗಿಸುತ್ತದೆ.

## ಅಂತಾರಾಷ್ಟ್ರೀಯ ಬಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷರಾಗಿ ಗೋವಿಂದರಾಜ್ ಆಯ್ಕೆ



* ಅಂತಾರಾಷ್ಟ್ರೀಯ ಬಾಸ್ಕೆಟ್‌ಬಾಲ್ ಫೆಡರೇಷನ್ ಏಷ್ಯಾ ಘಟಕದ ಅಧ್ಯಕ್ಷರಾಗಿ ಕನ್ನಡಿಗ ಗೋವಿಂದರಾಜ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

* ಮಲೇಷಿಯಾದ ಕೌಲಾಲಂಪುರದಲ್ಲಿ ನಡೆದ ಫಿಬಾ 2023 ಏಷ್ಯಾ ಸಾಮಾನ್ಯ ಸಭೆಯಲ್ಲಿ ಗೋವಿಂದರಾಜ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

* ಗೋವಿಂದರಾಜ್ ಅವರು 2023 ರಿಂದ 2027ರವರೆಗೆ ಅಧಿಕಾರದಲ್ಲಿರಲಿದ್ದಾರೆ.

## ಖೇಲೋ ಇಂಡಿಯಾ ಗೇಮ್ಸ್‌ನ ಮೂರನೇ ಆವೃತ್ತಿ ಉತ್ತರ ಪ್ರದೇಶದಲ್ಲಿ ಆರಂಭ

KHELO INDIA

* ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ (KIUG) ನ ಮೂರನೇ ಆವೃತ್ತಿಯು ಉತ್ತರ ಪ್ರದೇಶದಲ್ಲಿ ಪ್ರಾರಂಭವಾಗಿದ್ದು, ದೇಶದಾದ್ಯಂತ 207 ವಿಶ್ವವಿದ್ಯಾನಿಲಯಗಳ 4,000 ಕ್ಕೂ ಹೆಚ್ಚು ಕ್ರೀಡಾಪಟುಗಳು ಮತ್ತು ಅಧಿಕಾರಿಗಳು 21 ವಿಭಾಗಗಳಲ್ಲಿ ಭಾಗವಹಿಸುವ ಮೂಲಕ 12 ಕ್ರಿಯಾಶೀಲ-ಪ್ಯಾಕ್ಡ್ ದಿನಗಳವರೆಗೆ ಇರುತ್ತದೆ.

* ಕಬಡ್ಡಿ ಪಂದ್ಯಗಳು ಮತ್ತು ಉದ್ಘಾಟನಾ ಸಮಾರಂಭ ಗೌತಮ್ ಬುದ್ಧ ನಗರದಲ್ಲಿರುವ SVSP ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಒಳಾಂಗಣ ಸಭಾಂಗಣದಲ್ಲಿ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ KIUG ನ ಆರಂಭಿಕ ಕಾರ್ಯಕ್ರಮಗಳಿಗೆ ವೇದಿಕೆಯನ್ನು ಹೊಂದಿದೆ.

## ಸೌರವ್ ಗಂಗೂಲಿ ತ್ರಿಪುರ ಪ್ರವಾಸೋದ್ಯಮದ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕ



* ತ್ರಿಪುರ ಪ್ರವಾಸೋದ್ಯಮದ ಸಚಿವರಾದ ಸುಶಾಂತ ಚೌಧರಿ ರವರು ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ ಮತ್ತು ಮಾಜಿ ಬಿಸಿಸಿಐ ಮುಖ್ಯಸ್ಥರಾದ ಸೌರವ್ ಗಂಗೂಲಿ ಅವರನ್ನು ತ್ರಿಪುರ ಪ್ರವಾಸೋದ್ಯಮದ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಲಾಗಿದೆ.

* ರಾಜ್ಯದ ಪ್ರವಾಸೋದ್ಯಮ ಸಚಿವ ಸುಶಾಂತ ಚೌಧರಿ ಅವರನ್ನು ಕೋಲ್ಕತ್ತಾದ ಅವರ ನಿವಾಸದಲ್ಲಿ ಭೇಟಿಯಾದ ನಂತರ ಗಂಗೂಲಿ ಅವರು ತ್ರಿಪುರಾ ಪ್ರವಾಸೋದ್ಯಮದ ಬ್ರ್ಯಾಂಡ್ ಅಂಬಾಸಿಡರ್ ಆಗಲು ಇಚ್ಛೆಯನ್ನು ವ್ಯಕ್ತಪಡಿಸಿದರು.

* ಕ್ರಿಕೆಟ್ ತಂಡದ ಮಾಜಿ ಕ್ರಿಕೆಟಿಗರೊಂದಿಗೆ ಮಾತನಾಡಿದ್ದ ತ್ರಿಪುರ ಮುಖ್ಯಮಂತ್ರಿಗಳಾದ ಮಾಣಿಕ್ ಸಹಾ ರವರು ಗಂಗೂಲಿ ಅವರ ಪ್ರವಾಸೋದ್ಯಮದಲ್ಲಿ ಪಾಲ್ಗೊಳ್ಳುವಿಕೆಯಿಂದ ಪ್ರವಾಸೋದ್ಯಮ

KPSC Vaani

ಕ್ಷೇತ್ರಕ್ಕೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ವಿಧಾನಸಭೆ ನೂತನ ಸ್ಪೀಕರ್ ಆಗಿ ಯುಟಿ ಖಾದರ್ ನೇಮಕ



* ಇಂದು ಅಧಿಕೃತವಾಗಿ ಸ್ಪೀಕರ್ ಆಗಿ ಅಧಿಕಾರ ಸ್ವೀಕಾರವನ್ನು ಹಂಗಾಮಿ ಸ್ಪೀಕರ್ ಆರ್.ವಿ ದೇಶಪಾಂಡೆ ಅವರಿಂದ ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದ್ದಾರೆ.
* ವಿಧಾನಸಭಾ ಸ್ಪೀಕರ್ ಹುದ್ದೆ ನೇಮಕಾತಿ ಹಿನ್ನೆಲೆಯಲ್ಲಿ ಮಾಜಿ ಸಚಿವ ಯು.ಟಿ ಖಾದರ್ ರವರು ನಾಮಪತ್ರ ಸಲ್ಲಿಕೆ ಮಾಡಲಾಗಿದ್ದು, ಮೇ 23 ರಂದು (ಮಂಗಳವಾರ) ವಿಧಾನಸಭೆ ಕಾರ್ಯದರ್ಶಿ ತೆರಳಿ ನಾಮಪತ್ರ ಸಲ್ಲಿಸಿದರು.
* ವಿಧಾನಸಭಾಧ್ಯಕ್ಷರಾಗಿ ಮಂಗಳೂರು ಕ್ಷೇತ್ರದಿಂದ ಐದನೇ ಬಾರಿಗೆ ಚುನಾಯಿತರಾಗಿರುವ ಕಾಂಗ್ರೆಸ್ಸಿನ ಹಿರಿಯ ಶಾಸಕರಾದ ಯು.ಟಿ.ಖಾದರ ರವರನ್ನು ವಿದಾನಸಭಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.
* ಯು.ಟಿ.ಖಾದರ ರವರ ವಿರುದ್ಧ ಹಂಗಾಮಿ ಸಭಾಧ್ಯಕ್ಷರಾದ ಆರ್.ವಿ.ದೇಶಪಾಂಡೆ ಅವರು ಯು.ಟಿ.ಖಾದರ ರವರ ಅವಿರೋಧವಾಗಿ ಆಯ್ಕೆಯನ್ನು ಘೋಷಿಸಲಿದ್ದಾರೆ.

## ಮೇ 23 ವಿಶ್ವ ಆಮೆ ದಿನ 2023



* ಪ್ರತಿ ವರ್ಷ ವಿಶ್ವ ಆಮೆ ದಿನವು ಮೇ 23 ರಂದು ನಡೆಯುವ ವಾರ್ಷಿಕ ಆಚರಣೆಯಾಗಿದ್ದು, ಇದನ್ನು 2000 ರಲ್ಲಿ ಅಮೇರಿಕನ್ ಆಮೆ ಪಾರುಗಾಣಿಕಾ ಪ್ರಾಯೋಜಿಸಿ ವಿಶ್ವ ಆಮೆ ದಿನವು ಪ್ರಾರಂಭವಾಯಿತು.
* ವಿಶ್ವ ಆಮೆ ದಿನದ 2023 ರ ಥೀಮ್ 'ನಾನು ಆಮೆಗಳನ್ನು ಪ್ರೀತಿಸುತ್ತೇನೆ.' ವಿಶ್ವ ಆಮೆ ದಿನದ ಥೀಮ್ ಆಗಿದೆ.
* ಆಮೆ ಬದುಕಲು ಮತ್ತು ಅಭಿವೃದ್ಧಿ ಹೊಂದಲು ಸಹಾಯ ಮಾಡಲು ಮಾನವ ಕ್ರಿಯೆಯನ್ನು ಉತ್ತೇಜಿಸಲಾಗಿದ್ದು, ವಿಶ್ವ ಆಮೆ ದಿನವನ್ನು ಮೊದಲು 2000 ರಲ್ಲಿ ಆಚರಿಸಲಾಯಿತು, 2023 ಅನ್ನು ಆಚರಣೆಯ 24 ನೇ ವಾರ್ಷಿಕೋತ್ಸವವನ್ನಾಗಿ ಆಚರಿಸಲಾಯಿತ್ತು.

## ವಿದ್ಯುತ ಚಾಲಿತ ವಾಹನಗಳ ಸಹಾಯಧನ ಕಡಿತಕ್ಕೆ ಆಕ್ಷೇಪ



* ವಿದ್ಯುತ ಚಾಲಿತ ವಾಹನಗಳ ತಯಾರಿಕೆ, ಖರೀದಿ ಮತ್ತು ಬಳಕೆಯನ್ನು ಉತ್ತೇಜಿಸಲು ಕೇಂದ್ರ ಬೃಹತ್ ಕೈಗಾರಿಕೆ ಸಚಿವಾಲಯವು ಫೇಮ್ -2 ಯೋಜನೆ ಅಡಿಯಲ್ಲಿ ಇವಿ ಸಹಾಯಧನವನ್ನು ನೀಡುತ್ತಿತ್ತು.
* ಫೇಮ್ -2 ಯೋಜನೆ ಅಡಿಯಲ್ಲಿ ಇವಿ ಮತ್ತು ದ್ವಿಚಕ್ರ ವಾಹನಗಳಿಗೆ ನೀಡುತ್ತಿದ್ದ ಶೇ 40 ರಷ್ಟು ಸಹಾಯಧನವನ್ನು ಜೂನ್ 1 ರಿಂದ ಅನ್ವಯವಾಗುವಂತೆ ಶೇ 15 ಕ್ಕೆ ಇಳಿಸಿದ ಕೇಂದ್ರ ಸರ್ಕಾರದ ಕ್ರಮವು ಉದ್ಯಮವನ್ನು ಬಾಧಿಸಲಿದೆ ಎಂದು ವಿದ್ಯುತ ಚಾಲಿತ ವಾಹನಗಳ ತಯಾರಕರ ಸೊಸೈಟಿ (ಎಸ್ಎಂಇವಿ) ತಿಳಿಸಿದೆ.

## ಕೆಮ್ಮಿನ ಸಿರಪ್ ರಫ್ತು ನೀತಿ ಪರಿಷ್ಕರಣೆ



* ಭಾರತದ ಕಲಬೆರಕೆಯ ಕೆಮ್ಮಿನ ಔಷಧಿಗಳು ತಯಾರಿಕೆಯ ಕುರಿತು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್ಒ) ಮೂರೂ ಬಾರಿ ಎಚ್ಚರಿಕೆ ನೀಡಿದ್ದು, ಕಲಬೆರಕೆಯ ಕೆಮ್ಮಿನ ಔಷಧಿಗಳನ್ನು ವಿದೇಶಗಳಿಗೆ ರಫ್ತು ಮಾಡುವ ಮುನ್ನ ಸರ್ಕಾರೀ ಮಾನ್ಯತೆಯ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಬೇಕೆಂದು ಔಷದ ತಯಾರಕರಿಗೆ ಸೂಚನೆ ನೀಡಿದೆ.
* ವೇದೇಶಿ ವ್ಯಾಪಾರ ಮಹಾನಿರ್ದೇಶನಾಲಯವು ರಫ್ತು ನೀತಿಗಳನ್ನು ಪರಿಷ್ಕರಿಸಿದೆ, ಕೆಮ್ಮಿನ ಸಿರಪ್ಗಳನ್ನೂ ರಫ್ತು ಮಾಡುವ ಮುನ್ನ ಸರ್ಕಾರ ಗುರುತಿಸಿರುವ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಬೇಕಿದೆ ಎಂದು ಜೂನ್ 1 ರಿಂದ ಹೊಸ ನೀತಿ ಜಾರಿಗೆ ಬರಲಿದೆ.

# 25 May 2023

## ನೂತನ ಸಂಸತ್ ಭವನದಲ್ಲಿ ಐತಿಹಾಸಿಕ ಚಿನ್ನದ ರಾಜದಂಡ 'ಸೆಂಗೋಲ್' ಸ್ಥಾಪನೆ



* ಈ ಭಾನುವಾರ (ಮೇ 28)ನೂತನ ಸಂಸತ್ ಭವನದ ಉದ್ಘಾಟನೆ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸ್ಪೀಕರ್ ಸ್ಥಾನದ ಬಳಿ ಐತಿಹಾಸಿಕ ಚಿನ್ನದ ರಾಜದಂಡವನ್ನು ಸ್ಥಾಪಿಸಲಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.
* ಈ ರಾಜದಂಡವನ್ನು “ಸೆಂಗೋಲ್” ಎಂದು ಕರೆಯಲಾಗುತ್ತದೆ – ಇದು ತಮಿಳು ಪದ “ಸೆಮ್ಮೈ” ನಿಂದ ಬಂದಿದೆ, ಅಂದರೆ “ಸದಾಚಾರ” ಎಂದು ಗೃಹ ಸಚಿವರು ಹೇಳಿದ್ದಾರೆ.
* 'ಜವಾಹರಲಾಲ್ ನೆಹರು ಅವರು ಆಗಸ್ಟ 14, 1947ರಂದು ಅನುಭವಿಸಿದ ಅದೇ ಭಾವನೆಯನ್ನು ಸೆಂಗೋಲ್ ಪ್ರತಿನಿಧಿಸುತ್ತದೆ' ಎಂದು ತಿಳಿಸಿದರು.
* ಲೋಕಸಭೆ ಸ್ಪೀಕರ್ ಸಂಸತ್ತಿನ ಉಸ್ತುವಾರಿ ಮತ್ತು ಕಟ್ಟಡವನ್ನು ಉದ್ಘಾಟಿಸಲು ಪ್ರಧಾನಿಯವರಿಗೆ ಆಹ್ವಾನ ನೀಡಿದ್ದಾರೆಂದು ಪ್ರಹ್ಲಾದ ಜೋಶಿ ತಿಳಿಸಿದ್ದಾರೆ.

## ಗುರು ಅಧ್ಯಯನಕ್ಕೆ 'ಜ್ಯೂಸ್ ಮಿಷನ್' ಪ್ರಾರಂಭ

KPSC Vaani



* ಗುರು ಗ್ರಹವು ಸೌರಮಂಡಲದ ಅತಿ ದೊಡ್ಡ ಗ್ರಹವಾಗಿದ್ದು, ಗುರು ಗ್ರಹದ ಉಪಗ್ರಹಗಳ ಕುರಿತು ಹೆಚ್ಚಿನ ಸಂಶೋಧನೆಗಾಗಿ ಯುರೋಪಿಯನ್ ಬಾಹ್ಯಾಕಾಶ ಏಜೆನ್ಸಿ 'ಜ್ಯೂಸ್ ಮಿಷನ್' ಅನ್ನು ಗುರುವಿನ ಕಕ್ಷೆಗೆ ಕಳುಹಿಸಲಾಗಿದೆ.
* ಜ್ಯೂಸ್ ಮಿಷನ್ ಎಂದರೆ ಜ್ಯುಪಿಟರ್ ಐಸಿ ಮೂನ್ಸ್ ಎಕ್ಸ್ ಪ್ಲೋರರ್ ಎಂದಾಗಿದ್ದು,ಗುರು ಗ್ರಹ ಮತ್ತು ಚಂದ್ರ ನ (ಉಪಗ್ರಹಗಳ) ಮೇಲ್ಮೈ ನಲ್ಲಿರುವ ಜೀವಿಗಳ ಕುರುಹ ಪತ್ತೆಗಾಗಿ ಯುರೋಪಿಯನ್ ಸ್ಪೇಸ್ ಏಜೆನ್ಸಿ ಏರಿಯನ್ - 5 ರಾಕೆಟ್ ಮೂಲಕ ಜ್ಯೂಸ್ ನೌಕೆಯನ್ನು ಆಕಾಶಕ್ಕೆ ಹಾರಿಸಲಾಯಿತ್ತು.
* ಗುರು ಅಧ್ಯಯನಕ್ಕೆ 'ಜ್ಯೂಸ್ ಮಿಷನ್' ಒಟ್ಟು 114,270 ಕೋಟಿ ವೆಚ್ಚದ ಕಾರ್ಯಾಚರಣೆ ಯಾಗಿದ್ದು, 5,963 ಕೆಜಿ ತೂಕದ ನೌಕೆಯು 8 ವರ್ಷ ಬಾಹ್ಯಾಕಾಶದಲ್ಲಿ ಪ್ರಯಾಣಿಸಿ 2031ರ ಜುಲೈನಲ್ಲಿ ಗುರು ಗ್ರಹದ ಕಕ್ಷೆಯನ್ನು ಸೇರಲಿದೆ.

## ಭಾರತ ಮತ್ತು ಆಸ್ಟ್ರೇಲಿಯಾ ವಲಸೆ ಮತ್ತು ಹಸಿರು ಹೈಡ್ರೋಜನ್ ಕಾರ್ಯಪಡೆಯ ಒಪ್ಪಂದಕ್ಕೆ ಸಹಿ



* ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಬಾಂಧವ್ಯವನ್ನು ಬಲಪಡಿಸುವುದನ್ನು ಎತ್ತಿ ತೋರಿಸುವ ಮಹತ್ವದ ಬೆಳವಣಿಗೆಯಲ್ಲಿ, ಎರಡು ರಾಷ್ಟ್ರಗಳು ವಲಸೆ ಮತ್ತು ಚಲನಶೀಲ ಪಾಲುದಾರಿಕೆ ಮತ್ತು ಗ್ರೀನ್ ಹೈಡ್ರೋಜನ್ ಕಾರ್ಯಪಡೆಯ ಸ್ಥಾಪನೆಯ ಕುರಿತು ನಿರ್ಣಾಯಕ ಒಪ್ಪಂದಗಳಿಗೆ ಸಹಿ ಹಾಕಿದರು.
* ಸಿಡ್ನಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ರವರು ಮತ್ತು ಆಸ್ಟ್ರೇಲಿಯನ್ ಕೌಂಟರ್ ಆಂಥೋನಿ ಅಲ್ಬನೀಸ್ ನಡುವಿನ ದ್ವಿಪಕ್ಷೀಯ ಸಭೆಯ ನಂತರ ತಿಳುವಳಿಕೆ ಪತ್ರ (ಎಂಒಯು) ವಿನಿಮಯ ಮಾಡಿಕೊಳ್ಳಲಾಯಿತು.

## ಮಹಾರಾಷ್ಟ್ರ ಸರ್ಕಾರದ 'ಶಾಸನ್ ಆಪ್ಲ್ಯಾ ದಾರಿ' ಉಪಕ್ರಮ ಪ್ರಾರಂಭ



* ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಏಕನಾಥ್ ಶಿಂಧೆ ಅವರ ನೇತೃತ್ವದಲ್ಲಿ ಮಹಾರಾಷ್ಟ್ರ ಸರ್ಕಾರವು 'ಶಾಸನ್ ಆಪ್ಲ್ಯಾ ದಾರಿ' (ನಿಮ್ಮ ಮನೆ ಬಾಗಿಲಿಗೆ ಸರ್ಕಾರ) ಎಂಬ ಹೊಸ ಉಪಕ್ರಮವನ್ನು ಪ್ರಾರಂಭಿಸಲಾಗಿದ್ದು, ಈ ಉಪಕ್ರಮದ ಪ್ರಕಾರ ಪ್ರಾಥಮಿಕ ಉದ್ದೇಶವು ನಾಗರಿಕರಿಗೆ ಸರ್ಕಾರದ ಯೋಜನೆಗಳು ಮತ್ತು ದಾಖಲೆಗಳನ್ನು ಒಂದೇ ಸ್ಥಳದಲ್ಲಿ ಸುಲಭವಾಗಿ ಪ್ರವೇಶಿಸುವುದು.
* 'ಶಾಸನ್ ಆಪ್ಲ್ಯಾ ದಾರಿ' ಉಪಕ್ರಮದ ಪ್ರಕಾರ ಸರ್ಕಾರಿ ಸೇವೆಗಳು ಮತ್ತು ಪ್ರಯೋಜನಗಳನ್ನು ಪಡೆದುಕೊಳ್ಳುವಾಗ ನಾಗರಿಕರು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸುವ ಗುರಿಯನ್ನು ಹೊಂದಿದ್ದು, ಈ ಅಭಿಯಾನದ ಉದ್ಘಾಟನಾ ಕಾರ್ಯಕ್ರಮವು ಮುಖ್ಯಮಂತ್ರಿಗಳ ತವರು ಜಿಲ್ಲೆ ಸತಾರಾ ಜಿಲ್ಲೆಯಲ್ಲಿ ನಡೆಯಲಿದೆ.

## ದೇಶದಲ್ಲಿ ಇಂಧನ ಕ್ಷೇತ್ರಗಳಲ್ಲಿ ಹೂಡಿಕೆಗೆ ಅಹ್ವಾನ



* ಭಾರತ ಎನರ್ಜಿ ವೀಕ್ 2023 ರ ಉದ್ಘಾಟನಾ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ರವರು ಪ್ರಸ್ತುತ ಇಂಧನ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಭಾರತವು ಅತ್ಯಂತ ಸೂಕ್ತ ಸ್ಥಳವಾಗಿದೆ ಎಂದು ತಿಳಿಸಲಾಗುದ್ದು, ಭಾರತದಲ್ಲಿ ತಂತ್ರಜ್ಞಾನ, ಕೌಶಲ ಹಾಗೂ ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಯವರು ಆಸ್ಟ್ರೇಲಿಯಾ ಉದ್ಯಮಿಗಳಿಗೆ ಆಹ್ವಾನ ನೀಡಿದ್ದಾರೆ.
* ಹ್ಯಾಂಕಾಕ್ ಪ್ರಾಸ್ಪೆಕ್ಟಿಂಗ್‌ನ ಮುಖ್ಯಸ್ಥೆ ಗಿನಾ ರೈನ್ ಹರ್ಟ್, ಫಾರ್ಟೆಸ್ಕ್ಯೂ ಫ್ಯೂಚರ್ ಇಂಡಸ್ಟ್ರಿ ಹಾಗೂ ಆಸ್ಟ್ರೇಲಿಯಾ ಸೂಪರ್‌ನ ಸಿಇಒ ಪಾಲ್ ಶಾಡ ಜತೆಗೆ ನರೇಂದ್ರ ಮೋದಿ ಅವರು ಭಾರತದಲ್ಲಿ ಹೂಡಿಕೆ ಕುರಿತು ಚರ್ಚೆ ಮಾಡಲಾಯಿತ್ತು.






## ಮೇ 25 ವಿಶ್ವ ಥೈರಾಯ್ಡ್ ಜಾಗೃತಿ ದಿನ 2023




* ಪ್ರತಿ ವರ್ಷ ವಿಶ್ವ ಥೈರಾಯ್ಡ್ ಜಾಗೃತಿ ದಿನವನ್ನು ಮೇ 25 ರಂದು ಥೈರಾಯ್ಡ್-ಸಂಬಂಧಿತ ಅಸ್ವಸ್ಥತೆಗಳು, ಅವುಗಳ ಲಕ್ಷಣಗಳು, ರೋಗನಿರ್ಣಯ ಮತ್ತು ರೋಗಲಕ್ಷಣಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವ ಥೈರಾಯ್ಡ್ ಜಾಗೃತಿ ದಿನವನ್ನು ಆಚರಿಸಲಾಗುತ್ತದೆ.
* ವಿಶ್ವ ಥೈರಾಯ್ಡ್ ಜಾಗೃತಿ ದಿನದಂದು, ಎಲ್ಲಾ ಪಾಲುದಾರರು ಆರೋಗ್ಯಕರ ಥೈರಾಯ್ಡ್ ಗ್ರಂಥಿಯನ್ನು ಕಾಪಾಡಿಕೊಳ್ಳುವ ಪ್ರಾಮುಖ್ಯತೆ ಮತ್ತು ಥೈರಾಯ್ಡ್ ಸಮಸ್ಯೆಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಒಟ್ಟಾರೆ ಯೋಗಕ್ಷೇಮದ ಮೇಲೆ ಥೈರಾಯ್ಡ್ ಅಸ್ವಸ್ಥತೆಗಳ ಪ್ರಭಾವದ ಬಗ್ಗೆ ಜನರಿಗೆ ಶಿಕ್ಷಣ ನೀಡುವ ಗುರಿಯನ್ನು ಹೊಂದಿದ್ದಾರೆ.
* ವಿಶ್ವ ಥೈರಾಯ್ಡ್ ಜಾಗೃತಿ ದಿನ 2022 ರ ಥೀಮ್ "ಥೈರಾಯ್ಡ್ ಮತ್ತು ಸಂವಹನ" ಥೀಮ್ ಆಗಿದೆ.

## GRSE ಕೋಲ್ಕತ್ತಾದಲ್ಲಿ 'ಗೇನ್ಸ್ 2023' ಸ್ಟಾರ್ಟ್‌ಅಪ್ ಚಾಲೆಂಜ್ ಪ್ರಾರಂಭ



* ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಮತ್ತು ಇಂಜಿನಿಯರ್ಸ್ (GRSE) ಲಿಮಿಟೆಡ್ ಭಾರತದ ಪ್ರಮುಖ ರಕ್ಷಣಾ ಹಡಗುಕಟ್ಟೆಯಾಗಿದ್ದು, ಆಕ್ಸಿಲರೇಟೆಡ್ ಇನ್ನೋವೇಶನ್ ನರ್ಚರಿಂಗ್ ಸ್ಕೀಮ್ - 2023 (GAINS 2023) ಎಂಬ ಕಾರ್ಯಕ್ರಮವನ್ನು ಕೋಲ್ಕತ್ತಾದಲ್ಲಿ GRSE ಪ್ರಾರಂಭಿಸಲಾಗಿದೆ.
* 'ಗೇನ್ಸ್ 2023' ಸ್ಟಾರ್ಟ್‌ಅಪ್ ಚಾಲೆಂಜ್ ಬಿಡುಗಡೆ ಸಮಾರಂಭದಲ್ಲಿ ಜಿಆರ್‌ಎಸ್‌ಇಯ ಕಿರಿಯ ಅಧಿಕಾರಿಯಾದ ಸಹಾಯಕ ವ್ಯವಸ್ಥಾಪಕ (ಹಣಕಾಸು) ಶ್ರೀ ಜಿ ಸೂರ್ಯ ಪ್ರಕಾಶ್ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆಯ ರಾಜ್ಯ ಸಚಿವ ಶ್ರೀ ರಾಜೀವ್ ಚಂದ್ರಶೇಖರ್ ಉಪಸ್ಥಿತರಿದ್ದರು.
* ಬಾಹ್ಯ ಮೂಲಗಳಿಂದ ಕಲ್ಪನೆಗಳನ್ನು ಉತ್ಪಾದಿಸುವಲ್ಲಿ ಮುಕ್ತ ನಾವೀನ್ಯತೆಯ ಮೌಲ್ಯವನ್ನು ಗುರುತಿಸಿ, GRSE ಹಡಗುಕಟ್ಟೆಯಲ್ಲಿ ನಾವೀನ್ಯತೆಯನ್ನು ವೇಗಗೊಳಿಸಲು ಮತ್ತು ಭವಿಷ್ಯಕ್ಕೆ ಸಿದ್ಧವಾಗಲು ಗುರಿಯನ್ನು ಹೊಂದಿದ್ದು, ಇದನ್ನು ಸಾಧಿಸಲು GAINS 2023 ಯೋಜನೆಯ ಭಾಗವಾಗಿ "ಓಪನ್ ಇನ್ನೋವೇಶನ್ ಚಾಲೆಂಜ್" ಅನ್ನು ಪರಿಚಯಿಸಿದ್ದಾರೆ.

**26 May 2023**

## ವಿಶ್ವದಲ್ಲೇ 75ನೇ ಸ್ಥಾನ ಪಡೆದುಕೊಂಡ ಭಾರತದ ಸೂಪರ್ ಕಂಪ್ಯೂಟರ್ 'ಐರಾವತ್'



* ಜರ್ಮನಿಯಲ್ಲಿ ನಡೆದ ಅಂತಾರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಸಮ್ಮೇಳನದಲ್ಲಿ (ISC 2023) ಭಾರತದ ಕೃತಕ ಬುದ್ಧಿಮತ್ತೆ ಸೂಪರ್ ಕಂಪ್ಯೂಟರ್ ಐರಾವತ್ (AIRAWAT Super Computer) ಜಗತ್ತಿನಲ್ಲೇ 75ನೇ ಸ್ಥಾನದಲ್ಲಿದೆ.
* ಮಹಾರಾಷ್ಟ್ರದ ಪುಣೆಯ ಸಿ-ಡಾಕ್‌ನಲ್ಲಿ ಈ ಐರಾವತ್ ಸೂಪರ್ ಕಂಪ್ಯೂಟರ್ ಸ್ಥಾಪಿಸಲಾಗಿದೆ. ಇತ್ತೀಚೆಗೆ ಬಿಡುಗಡೆಯಾದ ಟಾಪ್ 500 ಗ್ಲೋಬಲ್ ಸೂಪರ್ ಕಂಪ್ಯೂಟಿಂಗ್ ಪಟ್ಟಿಯ 61ನೇ ಆವೃತ್ತಿಯಲ್ಲಿ ಭಾರತದ ಸೂಪರ್‌ಕಂಪ್ಯೂಟರ್ ಸ್ಥಾನವನ್ನು ಪಡೆದುಕೊಂಡಿದೆ.
* ಐರಾವತ್ ಪಿಎಸ್‌ಎಐ, 3,170 ಟೆರಾಫ್ಲಾಪ್‌ಗಳ ಗಮನಾರ್ಹ ವೇಗದೊಂದಿಗೆ ಭಾರತದ ಅತಿದೊಡ್ಡ ಮತ್ತು ವೇಗವಾದ ಕೃತಕ ಬುದ್ಧಿಮತ್ತೆಯಾಧರಿತ ಸೂಪರ್‌ಕಂಪ್ಯೂಟಿಂಗ್ ವ್ಯವಸ್ಥೆಯಾಗಿದೆ.

## ಬಲ್ಗೇರಿಯಾದ "ಟೈಮ್ ಶೆಲ್ಟರ್" ಕಾದಂಬರಿಗೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ



* ಬಲ್ಗೇರಿಯಾದ ಬರಹಗಾರ ಜಾರ್ಜಿ ಗೊಸ್ಪೊಡಿನೋವ್ ಮತ್ತು ಅನುವಾದಕಿ ಏಂಜೆಲಾ ರೊಡೆಲ್ ರವರು ರಚಿಸಿರುವ "ಟೈಮ್ ಶೆಲ್ಟರ್" ಕಾದಂಬರಿಯು ಮೇ 23 ರಂದು ಲಂಡನ್‌ನ ಸ್ಕೈ ಗಾರ್ಡನ್ ನಲ್ಲಿ ನಡೆಯುವ ಫ್ರೆಂಚ್-ಮೊರೊಕನ್ ಕಾದಂಬರಿಕಾರ ಲೀಲಾ ಸ್ಲಿಮಾನಿ ಅವರ ಅಧ್ಯಕ್ಷತೆಯಲ್ಲಿ 2023 ರ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯನ್ನು ಪಡೆದುಕೊಂಡಿದೆ.
* "ಟೈಮ್ ಶೆಲ್ಟರ್" ಕಾದಂಬರಿಯು 50,000 (62,000) ರೂ ಬಹುಮಾನವನ್ನು ಹೊಂದಿದ್ದು, ಈ ಬಹುಮಾನವನ್ನು ಬರಹಗಾರ ಜಾರ್ಜಿ ಗೊಸ್ಪೊಡಿನೋವ್ ಮತ್ತು ಅನುವಾದಕಿ ಏಂಜೆಲಾ ರೊಡೆಲ್ ರವರಿಗೆ ಸಮಾನವಾಗಿ ಹಂಚಲಾಯಿತು.

## ಇಸ್ರೋದ 'ಎನ್ ವಿಎಸ್' - 01 ಉಪಗ್ರಹ ಉಡಾವಣೆ



* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಎನ್ ವಿಎಸ್–01 ನ್ಯಾವಿಗೇಷನ್ (ಪಥ ದರ್ಶಕ) ಉಪಗ್ರಹವನ್ನು ಶ್ರೀಹರಿಕೋಟಾದಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡಾವಣಾ ನೆಲೆಯಿಂದ ಮೇ 29 ರಂದು ಉಡಾವಣೆ ಮಾಡಲಾಗುವುದು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ತಿಳಿಸಿದೆ.

KPSC vaani

* 'ನಾವಿಕ (ನ್ಯಾವಿಗೇಷನ್ ವಿತ್ ಇಂಡಿಯನ್ ಕಣ್ ಸ್ಟೆಲೇಷನ್) ಸೇವೆಗಳಿಗಾಗಿ ತಯಾರಿಸಲಾದ ಎರಡನೆಯ ಉಪಗ್ರಹಗಳಲ್ಲಿ ಎನ್ ವಿಎಸ್ - 01 ಮೊದಲನೆಯದಾಗಿದ್ದು, 2,232 ಕೆ.ಜಿ.ತೂಕದ ಎನ್ ವಿಎಸ್ - 01 ಉಪಗ್ರಹವನ್ನು ಹೊತ್ತ ರಾಕೆಟ್ 'ಜಿಎಸ್ಎಲ್ ವಿ - ಎಫ್ ೧೨' ಮೇ 29 ರಂದು ಆಕಾಶಕ್ಕೆ ಹಾರಲಿದೆ ಎಂದು ಇಸ್ರೋ ಹೇಳಿಕೆಯಲ್ಲಿ ತಿಳಿಸಿದೆ.

## ಅರಣ್ಯ ಇಲಾಖೆಗೆ ಹೊಸ ಲಾಂಛನ ಬಿಡುಗಡೆ

* ಕರ್ನಾಟಕದಲ್ಲಿ ಹೊಸ ಸರ್ಕಾರ ರಚನೆಯಾಗುವುದರೊಂದಿಗೆ ಕರ್ನಾಟಕ ಅರಣ್ಯ ಇಲಾಖೆಯ ಹೊಸ ಲಾಂಛನವನ್ನು (ಲೋಗೋ) ಸರ್ಕಾರ ಅನುಮೋದಿಸಿದೆ ಕರ್ನಾಟಕದ ನಕ್ಷೆಯ ಆಕಾರದ ಆಧಾರದ ಮೇಲೆ ಹೊಸ ಲಾಂಛನವನ್ನು ಬಿಡುಗಡೆ ಮಾಡಿದೆ.
* ಈ ಲಾಂಛನದಲ್ಲಿ ರಾಜ್ಯದ ಅರಣ್ಯ ಮತ್ತು ವನ್ಯಜೀವಿ ಸಂಪತ್ತು ಬಿಂಬಿಸುವ ಪ್ರತೀಕವಾದ ರಾಜ್ಯ ಪಕ್ಷಿ, ನೀಲಕಂಠ, ಆನೆ, ರಾಷ್ಟ್ರೀಯ ವನ್ಯಪ್ರಾಣಿ ಹುಲಿ, ಚಿಟ್ಟೆ ಹಾಗೂ ಶ್ರೀಗಂಧದ ಮರವನ್ನು ಒಳಗೊಂಡಿದ್ದು, ಇವುಗಳಿಗೆಲ್ಲ ಮೂಲ ಆಧಾರವಾಗಿರುವ ನೀಲಿ ಬಣ್ಣದಲ್ಲಿರುವ ಅಂಶವು ನದಿಗಳು ಮತ್ತು ಸಮುದ್ರವನ್ನು ಒಳಗೊಂಡಿದೆ.

## ಇಂಧನ ಇಲಾಖೆಗೆ ಗೌರವ ಗುಪ್ತ ರವರ ನೇಮಕ



* ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಎಸಿ ಎಸ್ ಆಗಿರುವ ಗೌರವ ಗುಪ್ತ ರವರನ್ನು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಗೌರವ ಗುಪ್ತ ರವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.
* ಇಂಧನ ಇಲಾಖೆಗೆ ಮೊದಲು ಕಪಿಲ್ ಮೋಹನ್ ರವರ ವರ್ಗಾವಣೆಯಿಂದ ಈ ಹುದ್ದೆಗೆ ಗೌರವ ಗುಪ್ತ ರವರನ್ನು ನೇಮಕ ಮಾಡಲಾಗಿದೆ.

## Dream11 ಸಂಸ್ಥಾಪಕ ಹರ್ಷ್ ಜೈನ್ IAMAI ನ ಅಧ್ಯಕ್ಷರಾಗಿ ಆಯ್ಕೆ




* ಡ್ರೀಮ್ 11 ನ ಸಂಸ್ಥಾಪಕ ಹರ್ಷ್ ಜೈನ್ ಅವರನ್ನು ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (IAMAI) ತನ್ನ ಹೊಸ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದ್ದು, ಮೇಕ್‌ಮೈಟ್ರಿಪ್‌ನ ರಾಜೇಶ್ ಮಾಗೊ ರವರನ್ನು ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದು, ಟೈಮ್ಸ್ ಇಂಟರ್‌ನೆಟ್‌ನ ಸತ್ಯನ್ ಗಜ್ವಾನಿ ಖಜಾಂಚಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.
* ಹೊಸದಾಗಿ ರಚಿಸಲಾದ 24-ಸದಸ್ಯರ ಆಡಳಿತ ಮಂಡಳಿಯ ಯಾವುದೇ ಬಿಗ್ ಟೆಕ್ ಪ್ರಾತಿನಿಧ್ಯವಿಲ್ಲದೆ ಬೆಳವಣಿಗೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸಲು ಉದ್ಯಮ-ಕೇಂದ್ರಿತ ವಿಧಾನಕ್ಕೆ ದಾರಿ ಮಾಡಿಕೊಡುವ ಗುರಿಯನ್ನು ಹೊಂದಿದೆ.

## 27 May 2023

## ಕರ್ನಾಟಕ ಬ್ಯಾಂಕ್ CEO ಆಗಿ ಶ್ರೀಕೃಷ್ಣನ್ ನೇಮಕ



* ಕರ್ನಾಟಕ ಬ್ಯಾಂಕ್ ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ಶ್ರೀಕೃಷ್ಣನ್ ಹರಿಹರ ಶರ್ಮ ನೇಮಕಗೊಂಡಿದ್ದಾರೆ.
* ಶ್ರೀಕೃಷ್ಣನ್ ಅವರು ಬ್ಯಾಂಕಿಂಗ್ ವಿವಿಧ ಕ್ಷೇತ್ರದಲ್ಲಿ ಹಾಗೂ ತಂತ್ರಜ್ಞಾನ ಪಾವತಿ ಕ್ಷೇತ್ರದಲ್ಲಿ 40 ವರ್ಷಗಳ ಅನುಭವವನ್ನು ಹೊಂದಿದ್ದಾರೆ.
* ಕರ್ನಾಟಕ ಬ್ಯಾಂಕ್ ಶ್ರೀಕೃಷ್ಣನ್ ಹರಿಹರ ಶರ್ಮ ಅವರನ್ನು ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅಧಿಕಾರಾವಧಿಗೆ ನೇಮಕ ಮಾಡಿದೆ.



## 75 ರ ಹೊಸ ನಾಣ್ಯ ಬಿಡುಗಡೆ ಮಾಡಲಿರುವ ಕೇಂದ್ರ ಸರ್ಕಾರ



* ನೂತನ ಸಂಸತ್ ಭವನದ ಉದ್ಘಾಟನೆಯ ಸ್ಮರಣಾರ್ಥವಾಗಿ ಕೇಂದ್ರ ಸರ್ಕಾರ ₹ 75ರ ವಿಶೇಷ ನಾಣ್ಯವನ್ನು ಬಿಡುಗಡೆ ಮಾಡಲಾಗುವುದು ಎಂದು ಹಣಕಾಸು ಸಚಿವಾಲಯ ಮೇ 25 ರಂದು (ಗುರುವಾರ) ತಿಳಿಸಲಾಗಿದ್ದು, ಸಂಸತ್ತಿನ ನೂತನ ಭವನವನ್ನು ಪ್ರಧಾನಿ ನರೇಂದ್ರ ಮೋದಿಯವರು ಮೇ 28 ರಂದುಉದ್ಘಾಟನೆ ಮಾಡಲಿದ್ದಾರೆ.

* ನಾಣ್ಯದ ಒಂದು ಬದಿಯು ಅಶೋಕ ಸ್ತಂಭದ ಸಿಂಹದ ಲಾಂಛನ, ಅದರ ಕೆಳಗೆ "ಸತ್ಯಮೇವ ಜಯತೆ" ಎಂಬ ಪದಗಳಿದ್ದು, ಎಡಭಾಗದಲ್ಲಿ "ಭಾರತ" ಎಂಬ ಪದವನ್ನು ದೇವನಾಗರಿ ಲಿಪಿಯಲ್ಲಿ ಮತ್ತು ಬಲಭಾಗದಲ್ಲಿ "ಇಂಡಿಯಾ" ಎಂಬ ಪದವನ್ನು ಇಂಗ್ಲಿಷ್ ನಲ್ಲಿ ಬರೆಯಲಾಗುತ್ತದೆ.

* ಕೇಂದ್ರ ಆರ್ಥಿಕ ವ್ಯವಹಾರಗಳ ಇಲಾಖೆ ಹೊರಡಿಸಿರುವ ಅಧಿಸೂಚನೆಯ ಪ್ರಕಾರ ನಾಣ್ಯವು 44 ಮಿಲಿಮೀಟರ್ ವ್ಯಾಸವನ್ನು ಹೊಂದಿರುವ ವೃತ್ತಾಕಾರದಲಿದ್ದು, 50% ಬೆಳ್ಳಿ, 40% ತಾಮ್ರ, 5% ನಿಕಲ್ ಮತ್ತು 5% ಸತುವನ್ನು ಒಳಗೊಂಡಿರುವ ನಾಲ್ಕು ಭಾಗಗಳ ಮಿಶ್ರಲೋಹದಿಂದ 35-ಗ್ರಾಂನ ನಾಣ್ಯವನ್ನು ತಯಾರಿಸಲಾಗುತ್ತದೆ.

## ಕನ್ನಡ ವಿಮರ್ಶಕರಾದ ಪ್ರೊ.ಜಿ.ಎಚ್ ನಾಯಕರವರ ನಿಧನ



* ಮೈಸೂರು: ಕನ್ನಡ ಸಾಹಿತ್ಯ ಲೋಕದ ಹಿರಿಯ ವಿಮರ್ಶಕರಾದ 88 ವರ್ಷ ವಯಸ್ಸಿನ ಪ್ರೊ. ಗೋವಿಂದರಾಯ ಹಮ್ಮಣ್ಣ ನಾಯಕ (ಜಿ.ಎಚ್.ನಾಯಕ) ಅವರು ವಯೋಸಹಜ ಆರೋಗ್ಯ ಸಮಸ್ಯೆಯಲ್ಲಿದ್ದ ನಾಯಕರವರು ಹೃದಯಾಘಾತದಿಂದ ಶುಕ್ರವಾರ ಮೈಸೂರಿನಲ್ಲಿ ನಿಧನರಾಗಿದ್ದಾರೆ.

* ಡಿ ಉಮಾಪತಿ, ಹೊಸದಿಲ್ಲಿಜಿ ಎಚ್ ನಾಯಕ ಎಂದೇ ಪ್ರಸಿದ್ಧರಾಗಿರುವ ಕನ್ನಡದ ಹಿರಿಯ ವಿಮರ್ಶಕ ಪ್ರೊ. ಗೋವಿಂದರಾಯ ಹಮ್ಮಣ್ಣ ನಾಯಕ ರವರಿಗೆ 2014 ರಲ್ಲಿ ಪ್ರಬಂಧ ಸಂಕಲನ 'ಉತ್ತರಾರ್ಧ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ.

## ಭಾರತದ ಚೀತಾ ಯೋಜನೆಗೆ ಪರಿಶೀಲನಾ ಸಮಿತಿ



* ಭಾರತದಲ್ಲಿ ಚೀತಾವನ್ನು ಮರುಪರಿಚಯಿಸುವ ಯೋಜನೆಯ ಪ್ರಗತಿ ಪರಿಶೀಲನೆಗೆ ಪರಿಸರ ಪ್ರವಾಸೋದ್ಯಮ ಭಾಗವಾಗಿ ಚೀತಾ ವಸತಿ ವಲಯವನ್ನು ಮುಕ್ತಗೊಳಿಸುವ ಮೇಲ್ವಿಚಾರಣೆಗಾಗಿ 11 ಸದಸ್ಯರ ಉನ್ನತಾಧಿಕಾರ ಸಮಿತಿಯನ್ನು ಕೇಂದ್ರ ಸರ್ಕಾರ ಮೇ 26 ರಂದು ಪರಿಶೀಲನಾ ಸಮಿತಿಯನ್ನು ರಚಿಸಿದೆ.

* ರಾಜಸ್ಥಾನ ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಆರ್.ಎನ್.ಮೆಹರೋತ್ರಾ, ಭಾರತದ ವನ್ಯಜೀವಿ ಸಂಸ್ಥೆಯ (ಡಬ್ಲ್ಯುಐಐ) ಮಾಜಿ ನಿರ್ದೇಶಕರಾದ ಪಿ.ಆರ್.ಸಿನ್ಹಾ, ಮತ್ತು ಆಂಧ್ರಪ್ರದೇಶದ ಮಾಜಿ ಸಿಸಿಎಫ್ ಎಚ್.ಎಸ್.ನೇಗಿ, ಡಬ್ಲ್ಯುಐಐನ ಪ್ರಾಧ್ಯಾಪಕರಾಗಿದ್ದ ಪಿ.ಕೆ.ಮಲ್ಲಿಕ್, ಡಬ್ಲ್ಯುಐಐನ ಮಾಜಿ ಡೀನ್ ಜಿ.ಎಸ್.ರಾವತ್, ಅಹಮದಾಬಾದ್ ಮೂಲದ ಸಮಾಜ ಸೇವಕ ಮಿಟ್ಟಲ್ ಪಟೇಲ್, ಡಬ್ಲ್ಯುಐಐ ವಿಜ್ಞಾನಿ ಮತ್ತು ಎನ್‌ಟಿಸಿಎ ಇನ್ಸ್ಪೆಕ್ಟರ್ ಜನರಲ್ ಖಮರ್ ಖುರೇಶಿ ರವರು ಉನ್ನತಾಧಿಕಾರಿಗಳು ಪರಿಶೀಲನಾ ಸಮಿತಿಯಲ್ಲಿದಾರೆ.

## ಹಂಪಿ : ಜುಲೈನಲ್ಲಿ ಜಿ- 20 ಶೃಂಗಸಭೆ



* ವಿಶ್ವ ವಿಖ್ಯಾತ ಹಂಪಿಯಲ್ಲಿ ಜುಲೈ ತಿಂಗಳಲ್ಲಿ ನಡೆಯಲಿರುವ ಜಿ.20 ಶೃಂಗಸಭೆಯ ಹಿನ್ನಲೆಯಲ್ಲಿ ಪೂರ್ವ ಸಿದ್ಧತೆ ಕುರಿತು ನಗರದಲ್ಲಿ ಜಿಲ್ಲಾಧಿಕಾರಿಗಳಾದ ಟಿ.ವೆಂಕಟೇಶ ರವರ ಅಧ್ಯಕ್ಷೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಸಂಸ್ಕೃತಿ ಸಚಿವಾಲಯದ ಅಧಿಕಾರಿಗಳ ಜೊತೆ ಮೇ 26 ರಂದು ಸಭೆ ನಡೆಸಲಾಯಿತ್ತು.

* ವಿಜಯನಗರ ಹಂಪಿಯಲ್ಲಿ ಜುಲೈನಲ್ಲಿ ನಡೆಯಲಿರುವ ಶೆರ್ಪಾ ಸಭೆಯ ಹಾಗು ಸಂಸ್ಕೃತಿಕ ಕಾರ್ಯಕ್ರಮ ಕೈಗೊಳ್ಳುವ ಕುರಿತು ಸಚಿವಾಲಯದ ತಂಡದೊಂದಿಗೆ ಸಭೆ ನಡೆಸಲಾಗಿಟ್ಟಿದ್ದು, 200 ಕ್ಕೂ ಹೆಚ್ಚು ಪ್ರತಿನಿಧಿಗಳು ಭೇಟಿ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.

## ಪ್ಯಾರಿಸ್ 2024 ರ ಒಲಂಪಿಕ್ಸ ಕ್ರೀಡಾಕೂಟದಲ್ಲಿ ಪ್ಲಾಸ್ಟಿಕ ನಿಷೇಧ

PARiS 2024

* ಪ್ಯಾರಿಸ್ ಜಾಗತಿಕ ಪ್ಲಾಸ್ಟಿಕ್ ಮಾಲಿನ್ಯದ ಬಿಕ್ಕಟ್ಟನ್ನು ನಿಭಾಯಿಸುವ ಪ್ರಯತ್ನಗಳ ಭಾಗವಾಗಿ 2024ರ ಒಲಿಂಪಿಕ್ಸ್ ಕ್ರೀಡಾಕೂಟವನ್ನು ನಡೆಸುವಾಗ ನಗರವು ಏಕ-ಬಳಕೆಯ ಪ್ಲಾಸ್ಟಿಕ್ ಅನ್ನು ನಿಷೇಧಿಸಲು ಪ್ಯಾರಿಸ್ ನಿರ್ಧರಿಸಿದೆ ಎಂದು ಪ್ಯಾರಿಸ್ ಮೇಯರ್ ಅನ್ನೆ ಹಿಡಾಲ್ಗೊ ಶುಕ್ರವಾರ ತಿಳಿಸಿದ್ದಾರೆ.

* ಪ್ರತೀ ವರ್ಷ 14,000 ಸಸ್ತನಿಗಳು ಹಾಗೂ 1.4 ಮಿಲಿಯನ್ ಸಮುದ್ರ ಪಕ್ಷಿಗಳು ಪ್ಲಾಸ್ಟಿಕ್ ತ್ಯಾಜ್ಯವನ್ನು ಸೇವಿಸುವುದರಿಂದ ಸಾಯುತ್ತವೆ ಎಂದು ಹಿಡಾಲ್ಗೊ ಕಚೇರಿಯು ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧವನ್ನು ಘೋಷಿಸುವ ಹೇಳಿಕೆಯಲ್ಲಿ ತಿಳಿಸಿದೆ.

KPSC Vaani

## ಸುಮನ್ ಶರ್ಮಾ UPSC ಸದಸ್ಯರಾಗಿ ಪ್ರಮಾಣ ವಚನ ಸ್ವೀಕರ



* ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಾಗಿ ಶ್ರೀಮತಿ ಸುಮನ್ ಶರ್ಮಾ ರವರು ಕಚೇರಿ ಮತ್ತು ಗೌಪ್ಯತೆಯ ಪ್ರಮಾಣ ವಚನ ಸ್ವೀಕರಿಸಲಾಗಿದ್ದು, ಮತ್ತು UPSC ಅಧ್ಯಕ್ಷರಾದ ಡಾ. ಮನೋಜ್ ಸೋನಿ ಅವರು ಅದ್ಯಕ್ಷತೆಯಲ್ಲಿ ಪ್ರಮಾಣ ವಚನ ಬೋಧಿಸಿದರು.
* ಶ್ರೀಮತಿ ಶರ್ಮಾ ಅವರಿಗೆ ಆದಾಯ ತೆರಿಗೆ ಇಲಾಖೆಯ ತನಿಖಾ ವಿಭಾಗದಲ್ಲಿ ಕೆಲಸ ಮಾಡುವಾಗ "ಅತ್ಯುತ್ತಮ ಹುಡುಕಾಟಕ್ಕಾಗಿ ಪ್ರಶಸ್ತಿ" ನೀಡಲಾಯಿತು.

# 29 May 2023

## ಪ್ರಧಾನಿ ಮೋದಿಯವರಿಂದ ನೂತನ ಸಂಸತ್ ಭವನ ಉದ್ಘಾಟನೆ



* ಪ್ರಧಾನಿ ನರೇಂದ್ರ ಮೋದಿಯವರು ಮೇ 28 ರಂದು ಸಂಸತ್ ಭವನವನ್ನು ಉದ್ಘಾಟಿಸಿದರು.
* ಪ್ರಧಾನಿ ನರೇಂದ್ರ ಮೋದಿಯವರಿಂದ ನೂತನ ಸಂಸತ್ ಭವನ ಉದ್ಘಾಟನೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸ್ವಾಗತಿಸಿದ್ದಾರೆ. ಇದು ಇಡೀ ದೇಶಕ್ಕೆ ಹೆಮ್ಮೆಯ ಮತ್ತು ಅತ್ಯಂತ ಸಂತಸದ ವಿಷಯ ಎಂದು ಅವರು ತಿಳಿದ್ದಾರೆ.
* ನೂತನ ಸಂಸತ್ ಭವನ ಉದ್ಘಾಟನೆಯ ಸವಿ ನೆನಪಿಗಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 75 ರೂ. ಮುಖ ಬೆಲೆಯ ನಾಣ್ಯ ಹಾಗೂ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದ್ದಾರೆ.
* ರಾಷ್ಟ್ರಪತಿಯವರೇ ನೂತನ ಸಂಸತ್ತಿನ ಮುಖ್ಯಸ್ಥರು. ಹಾಗಾಗಿ, ಅವರೇ ಸಂಸತ್ ಭವನವನ್ನು ಉದ್ಘಾಟಿಸಬೇಕು ಎಂದು ಒತ್ತಾಯಿಸಿದ್ದ ಹಲವು ವಿಪಕ್ಷಗಳು, ಉದ್ಘಾಟನಾ ಕಾರ್ಯಕ್ರಮವನ್ನು ಬಹಿಷ್ಕರಿಸಿದ್ದವು.

## ಮೇ 31 ರಿಂದ ನೇಪಾಳದ ಪ್ರಧಾನಿ 'ಪ್ರಚಂಡ' ಭಾರತ ಪ್ರವಾಸ



* ಪ್ರಧಾನಿ ನರೇಂದ್ರ ಮೋದಿಯವರ ಆಹ್ವಾನದ ಮೇರೆಗೆ ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಾಲ್ 'ಪ್ರಚಂಡ' ಅವರು ಮೇ 31 ರಿಂದ ನಾಲ್ಕು ದಿನಗಳ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಕಠ್ಮಂಡುವಿನಲ್ಲಿ ವಿದೇಶಾಂಗ ಸಚಿವಾಲಯದ ಮೂಲಕ ತಿಳಿದಿದೆ.
* ಕಳೆದ ವರ್ಷ ಡಿಸೆಂಬರ್‌ನಲ್ಲಿ ಮೂರನೇ ಬಾರಿಗೆ ನೇಪಾಳ ಪ್ರಧಾನಿ ಹುದ್ದೆ ಅಲಂಕರಿಸಿದ ನಂತರ ಪ್ರಚಂಡ ಅವರ ಮೊದಲ ವಿದೇಶಿ ಭೇಟಿ ಇದಾಗಿದೆ.
* ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ ಪ್ರಚಂಡ ಅವರ ಭಾರತ ಭೇಟಿಯ ಕುರಿತು ವಿದೇಶಾಂಗ ಸಚಿವಾಲಯ ಶನಿವಾರ ಅಧಿಕೃತ ಘೋಷಣೆ ಮಾಡಲಿದೆ.
* ಈ ಭೇಟಿಯು ಮೇ 31 ರಿಂದ ಜೂನ್ 3 ರವರೆಗೆ ನಡೆಯಲಿದೆ ಮತ್ತು ಅವರು ದ್ವಿಪಕ್ಷೀಯ ಸಂಬಂಧಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಉನ್ನತ ಮಟ್ಟದ ನಾಯಕರೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ ಎಂದು ವಿದೇಶಾಂಗ ಸಚಿವ ಎನ್‌ಪಿ ಸೌದ್ ಅವರ ಸಹಾಯಕ ಅಧಿಕಾರಿ ತಿಳಿಸಿದ್ದಾರೆ.

## ಮೇ 29 ಅಂತರರಾಷ್ಟ್ರೀಯ UN 'ಶಾಂತಿಪಾಲಕರ' ದಿನ 2023




*ಪ್ರತಿ ವರ್ಷ ವಾರ್ಷಿಕವಾಗಿ ಮೇ 29 ರಂದು ಯುಎನ್ ಶಾಂತಿಪಾಲಕರ ಅಂತರರಾಷ್ಟ್ರೀಯ ದಿನವನ್ನು ಪ್ರಪಂಚದಾದ್ಯಂತ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವಲ್ಲಿ ವಿಶ್ವಸಂಸ್ಥೆಯ (UN) ಶಾಂತಿಪಾಲಕರ ಕೊಡುಗೆಗಳು ಮತ್ತು ತ್ಯಾಗಗಳನ್ನು ಗೌರವಿಸಲು ಇದು ಮೀಸಲಾದ ದಿನವಾಗಿದ್ದು, ಈ ದಿನವನ್ನು UN ಶಾಂತಿಪಾಲಕರ ಅಂತರರಾಷ್ಟ್ರೀಯ ದಿನವೆಂದು ಆಚರಿಸಲಾಗಿತ್ತದೆ.
* ಯುಎನ್ ಶಾಂತಿಪಾಲಕರ ಅಂತರರಾಷ್ಟ್ರೀಯ ದಿನದ - ಥೀಮ್ 75 ನೇ ವಾರ್ಷಿಕೋತ್ಸವದ ಥೀಮ್ "ಶಾಂತಿ ನನ್ನಿಂದ ಪ್ರಾರಂಭವಾಗುತ್ತದೆ" ಯುಎನ್ ಧ್ವಜದ ಅಡಿಯಲ್ಲಿ ತಮ್ಮ ಪ್ರಾಣವನ್ನು ನೀಡಿದ 4200 ಕ್ಕೂ ಹೆಚ್ಚು ಸೇರಿದಂತೆ ಹಿಂದಿನ ಮತ್ತು ಪ್ರಸ್ತುತ ಶಾಂತಿಪಾಲಕರ ಸೇವೆ ಮತ್ತು ತ್ಯಾಗವನ್ನು ಗುರುತಿಸುತ್ತದೆ.

## ಬ್ಯಾಡ್ಮಿಂಟನ್ : ಭಾರತದ ಸ್ಟಾರ್ ಷಟ್ಲರ್ 'ಪ್ರಣಯ್' ಗೆ 2023 ರ ಮಲೇಷ್ಯಾ ಮಾಸ್ಟರ್ಸ್ ಪ್ರಶಸ್ತಿ'




*ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್'ನಲ್ಲಿ ಭಾರತದ ಸ್ಟಾರ್ ಷಟ್ಲರ್ ಎಚ್ ಎಸ್ ಪ್ರಣಯ್ ಅವರು ಅಬ್ಬರಿಸಿದ್ದು, 2023ರಲ್ಲಿ ಚೀನಾದ ಹಾಂಗ್ ಯಾಂಗ್ ವೆಂಗ್ ಅವರನ್ನು ಸೋಲಿಸಿಸುವ ಮೂಲಕ ಚಿನ್ನದ ಪದಕವನ್ನು ಪಡೆದು ಕೊಂಡಿದ್ದಾರೆ.
* 2017 ರ ಅಮೇರಿಕ ಓಪನ್ ಗ್ರ್ಯಾನ್ ಪ್ರಿಯಲ್ಲಿ ಚಿನ್ನದ ಪದಕ ಗಳಿಸಿದ್ದು, ಎಚ್.ಎಸ್. ಪ್ರಣಯ ರವರಿಗೆ ಬಿಡಬ್ಲ್ಯೂಎಫ್ ವಿಶ್ವ ಟೂರ್ ವಿಭಾಗದಲ್ಲಿ ಮೊದಲ ಕಿರೀಟವಾಗಿದೆ.

KPSC Vaani

## 'ಎನ್ ವಿಎಸ್ - 01' ನ್ಯಾವಿಗೇಷನ್ ಉಪಗ್ರಹ ಉಡಾವಣೆ



ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಸೋಮವಾರ ಬೆಳಗ್ಗೆ ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ GSLV-F12 ರಾಕೆಟ್ ನಲ್ಲಿ ನ್ಯಾವಿಗೇಷನ್ ಉಪಗ್ರಹ NVS-01 ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ. ಉಡಾವಣೆಗೊಂಡ ಸುಮಾರು 20 ನಿಮಿಷಗಳ ನಂತರ ರಾಕೆಟ್ ಸುಮಾರು 251 ಕಿಮೀ ಎತ್ತರದಲ್ಲಿ ಜಿಯೋಸಿಂಕ್ರೋನಸ್ ವರ್ಗಾವಣೆ ಕಕ್ಷೆಯಲ್ಲಿ (ಜಿಟಿಓ) ನ್ಯಾವಿಗೇಷನ್ ಉಪಗ್ರಹವನ್ನು ಯಶಸ್ವಿಯಾಗಿ ಸೇರಿಸಿದೆ ಎಂದು ಇಸ್ರೋ ಹೇಳಿದೆ.

ಇದನ್ನು NavIC ಸಿಗ್ನಲ್‌ಗಳನ್ನು ಬಳಕೆದಾರರ ಸ್ಥಾನವನ್ನು 20-ಮೀಟರ್‌ಗಳಿಗಿಂತ ಉತ್ತಮವಾಗಿ ಮತ್ತು 50 ನ್ಯಾನೊಸೆಕೆಂಡ್ ಗಳಿಗಿಂತ ಉತ್ತಮ ಸಮಯದ ನಿಖರತೆಯನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ.

## 138 ಗಂಟೆ ರಾಮಚರಿತ ಮಾನಸ ಗಾಯನ ವಿಶ್ವದಾಖಲೆ



* ರಾಮಚರಿತ ಮಾನಸವನ್ನು 16 ನೇ ಶತಮಾನದಲ್ಲಿ ತುಳಸಿದಾಸರು ರಚಿಸಲಾದ 'ರಾಮಚರಿತ ಮಾನಸ' ಪದ್ಯಗಳ ಸಂಕಲಗಳನ್ನು ಸತತವಾಗಿ 138 ಗಂಟೆಗಳಿಗೂ ಹೆಚ್ಚು ಕಾಲ ಹಾಡುವ ಮೂಲಕ ವಾರಣಾಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸಿಬ್ಬಂದಿ ಗಿನ್ನೆಸ್ ವಿಶ್ವದಾಖಾಲೆಗೆ ಭಾಜನವಾಗಿದೆ.
* ರಾಮಚರಿತ ಮಾನಸ ಗಾಯನವನ್ನು ಡಾ. ಜಗದೀಶ್ ಪಿಳ್ಳೈ ರವರು 138 ಗಂಟೆ, 41 ನಿಮಿಷ ಮತ್ತು 2 ಸೆಕೆಂಡ್ ವರೆಗೂ ರಾಮಚರಿತ ಮಾನಸ ಗಾಯನ ಹಾಡಿದ್ದು, ವಿಶ್ವದ ಸುದೀರ್ಘ ಗೀತೆ ಎಂದು ಎನಿಸಿದೆ.

## ಜನಗಣತಿಯಲ್ಲಿ ಆರು ಧರ್ಮಗಳಷ್ಟೇ ಆಧಾರ



* ಹಿಂದೂ, ಮುಸ್ಲಿಂ, ಕ್ರೈಸ್ತ , ಬೌದ್ಧ, ಮತ್ತು ಸಿಖ್, ಹಾಗೂ ಜೈನ ಧರ್ಮಗಳನ್ನು ಆದರಿಸಿ ಮುಂದಿನ ಜನಗಣತಿ ನಡೆಯಲಿದ್ದು, ಜನಗಣತಿಯಲ್ಲಿ ಪ್ರಮುಖವಾಗಿ ಆರು ಧರ್ಮಗಳನ್ನು ಪರಿಗಣಿಸಲು ತೀರ್ಮಾನಿಸಿದೆ.
* ಜನಗಣತಿಯ ಕಾಲಂ ನಲ್ಲಿ ಇತರೆ ಯಾವುದೇ ಧರ್ಮವನ್ನು ಉಲ್ಲೇಖಿಸಲು ಅವಕಾಶವಿದ್ದು, ಅದಕ್ಕಾಗಿ ಪ್ರತ್ಯೇಕವಾಗಿ ಕೋಡ್ ನಿಗದಿಪಡಿಸಿರುವುದಿಲ್ಲ ಎಂದು ಕೇಂದ್ರ ಸಚಿವರಾದ ಅಮಿತ್ ಶಾ ರವರು ಗಣತಿ ಭವನದಲ್ಲಿ ಬಿಡುಗಡೆ ಮಾಡಿರುವ 1981 ರಿಂದ ಭಾರತದಲ್ಲಿ ಜನಗಣತಿ ಕುರಿತು ಉಲ್ಲೇಖಿಸಲಾಗಿದೆ.

## ಸಂಸತ್ ಭವನದಲ್ಲಿ ಮಸ್ಕಿ ಮತ್ತು ಸನ್ನತಿ ಶಾಸನಗಳ ಪ್ರತಿಕೃತಿ



* ನವದೆಹಲಿಯಲ್ಲಿ ಉದ್ಘಾಟನೆಗೊಂಡ ನೂತನ ಸಂಸತ್ ಭವನದಲ್ಲಿ ಕಲ್ಯಾಣ ಕರ್ನಾಟಕದ ಪ್ರಮುಖ ಐತಿಹಾಸಿಕ ತಾಣಗಳಾದ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿರುವ ಅಶೋಕನ ಶಿಲಾಶಾಸನ, ಮತ್ತು ಕಲಬುರಗಿ ಜಿಲ್ಲೆಯ ಸನ್ನತಿಯಲ್ಲಿರುವ ಸಾಮ್ರಾಟ್ ಅಶೋಕನ ಕುಟುಂಬ ಸದಸ್ಯರಿರುವ ಶಿಲ್ಪದ ಪ್ರತಿಕೃತಿ ಹಾಗೂ ಭಾರತದ ನಕ್ಷೆಯಲ್ಲಿ ಕೊಪ್ಪಳದ ಹೆಸರನ್ನುಉಲ್ಲೇಖಿಸಲಾಗಿದೆ.
* ಸಾಮ್ರಾಟ್ ಅಶೋಕ್ ನ ಸ್ಮರಣೆಗಾಗಿ ಸಂಸತ್ತಿನ ಒಂದು ಭಾಗದಲ್ಲಿ ಬೃಹತ ಚಿತ್ರವನ್ನು ಅಳವಡಿಸಲಾಗಿದ್ದು, ಈ ಶಾಸನದಲ್ಲಿ 'ದೇವಾನಾಂಪ್ರಿಯ ಅಶೋಕ್ ಶಾಸನ' ಎಂದು ಉಲೇಖಿಸಲಾಗಿದೆ.

## ಗೋವಾದ ಸಾಹಿತಿ ದಾಮೋದರ್ ಮೌಜೊಗೆ ಜ್ಞಾನಪೀಠ ಪ್ರಶಸ್ತಿ ಪ್ರದಾನ



* ಗೋವಾದ ಖ್ಯಾತ ಸಾಹಿತಿಯಾದ 79 ವರ್ಷದ ವಯಸ್ಸಿನ ದಾಮೋದರ್ ಮೌಜೊ ಅವರಿಗೆ ಪಣಜಿಯಲ್ಲಿ ಮೇ 28 ರಂದು (ಭಾನುವಾರ) ಗೋವಾ ರಾಜ್ಯಪಾಲರಾದ ಪಿ. ಎಸ್ ಶ್ರೀಧರನ್ ಪಿಳ್ಳೈ ಯವರು ದಾಮೋದರ್ ಮೌಜೊ ರವರಿಗೆ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ನೀಡಿ ಗೌರವಿಸಲಾಯಿತು.
* ಜ್ಞಾನಪೀಠ ಪಡೆಯುತ್ತಿರುವ ಗೋವಾದ ಎರಡನೇ ಸಾಹಿತಿ ಇವರಾಗಿದ್ದು, ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಥಾ ಪ್ರಶಸ್ತಿ, ವಿವಿ ಪೈ ಸಾಹಿತ್ಯ ಪುರಸ್ಕಾರ ಸೇರಿದಂತೆ ಹಲವಾರು ಸಾಹಿತ್ಯ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

# 30 May 2023

## ಟರ್ಕಿ ಅಧ್ಯಕ್ಷರಾಗಿ ರೆಸೆಪ್ ತಯ್ಯಿಪ್ ಎರ್ಡೋಗನ್ ರವರ ಪುನರಾಯ್ಕೆ



* ಟರ್ಕಿಯ ಅಧ್ಯಕ್ಷರಾಗಿ ರೆಸೆಪ್ ತಯ್ಯಿಪ್ ಎರ್ಡೋಗನ್ ರವರ ಅಧ್ಯಕ್ಷೀಯ ಚುನಾವಣೆಯಲ್ಲಿ ಮತಎಣಿಕೆ ಪ್ರಕ್ರಿಯೆಯು ಶೇ 99

KPSC Vaani

ರಷ್ಟು ಮೂಡಿದ್ದು, ಅನಧಿಕೃತ ಮಾಹಿತಿ ಪ್ರಕಾರ ಎರ್ಡೋಗನ್ ರವರ ಪರವಾಗಿ 52 ರಷ್ಟು ಮತಗಳನ್ನು ಪಡೆದು ಮೂರನೇ ಭಾರಿ ಟರ್ಕಿ ಅಧ್ಯಕ್ಷರಾಗಿ ಪುನರಾಯ್ಕೆ ಮಾಡಲಾಯಿತ್ತು.

* ಭೀಕರ ಭೂಕಂಪ, ಹೆಚ್ಚಿದ ಹಣ ದುಬ್ಬರದ ಮಧ್ಯೆಯೂ ಎರ್ಡೋಗನ್ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, 2017ರಲ್ಲಿ ಏಪ್ರಿಲ್‌ನಲ್ಲಿ ಜನಮತ ಸಂಗ್ರಹದ ಮೂಲಕ ಅಂಗೀಕರಿಸಲಾದ ನೂತನ ಸಂವಿಧಾನದ ಪ್ರಕಾರ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ.

## ಕೇಂದ್ರ ಜಾಗೃತ ಆಯೋಗದ (ಸಿವಿಸಿ) ನೂತನ ಆಯುಕ್ತರಾಗಿ ಪ್ರವೀಣ್ ಕುಮಾರ್



* ಕೇಂದ್ರ ಜಾಗೃತ ಆಯೋಗದ (ಸಿವಿಸಿ) ನೂತನ ಆಯುಕ್ತರಾಗಿ ಪ್ರವೀಣ್ ಕುಮಾರ್ ಶ್ರೀ ವಾಸ್ತವ ರವರು ಮೇ 29 ರಂದು ಅಧಿಕಾರ ವಹಿಸಿದ್ದರು.

* ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮ ರವರ ಸಮ್ಮುಖದಲ್ಲಿ ನೂತನ ಆಯುಕ್ತರಾದ ಪ್ರವೀಣ್ ಕುಮಾರ್ ಶ್ರೀ ವಾಸ್ತವ ರವರಿಗೆ ಪ್ರಮಾಣ ವಚನ ಭೋದಿಸಿದ್ದರು.

## ಮೇ 30 ವಿಶ್ವ ವೇಪ್ ಡೇ 2023




* ಪ್ರತಿ ವರ್ಷ ಮೇ 30 ರಂದು ವರ್ಲ್ಡ್ ವೇಪ್ ಡೇ ಎಂಬುದು ಧೂಮಪಾನಿಗಳಿಗೆ ಹಾನಿಯನ್ನು ಕಡಿಮೆ ಮಾಡುವ ಸಾಧನವಾಗಿ ವ್ಯಾಪಿಂಗ್‌ನ ಸಂಭಾವ್ಯ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ವೇಪ್ ದಿನವನ್ನು ಆಚರಿಸಲಾಗುತ್ತದೆ.

* ವಿಶ್ವ ವ್ಯಾಪರ್ಸ್ ಅಲೈಯನ್ಸ್ (WVA) ವಿಶ್ವ ವೇಪ್ ದಿನವನ್ನು ಪ್ರಾರಂಭಿಸಿದ ಸಂಸ್ಥೆಯಾಗಿದ್ದು, ವ್ಯಾಪಿಂಗ್ ಎನ್ನುವುದು ನಿಕೋಟಿನ್ ಹೊಂದಿರುವ ದ್ರವವನ್ನು ಬಿಸಿ ಮಾಡುವ ಮೂಲಕ ಉತ್ಪತ್ತಿಯಾಗುವ ಏರೋಸಾಲ್ ಅನ್ನು ಉಸಿರಾಡುವ ಕ್ರಿಯೆಯಾಗಿದೆ.

## ಚಂಡೀಗಢಕ್ಕೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಿಂದ ಸ್ಕೋಚ್ ಸಿಲ್ವರ್ ಪ್ರಶಸ್ತಿ




* ಚಂಡೀಗಢವು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಿಂದ ಚಂಡೀಗಢವು ಇಲಾಖೆಗಳಿಂದ ಚಿಕಿತ್ಸೆ ಪಡೆಯುತ್ತಿರುವ ಜಾನುವಾರುಗಳ ವೈದ್ಯಕೀಯ ದಾಖಲೆಗಳ ಗಣಕೀಕರಣಕ್ಕಾಗಿ ಇ-ಆಡಳಿತಕ್ಕಾಗಿ ಸ್ಕೋಚ್ ಸಿಲ್ವರ್ 2023 ರ ಪ್ರಶಸ್ತಿಯನ್ನು ಪಡೆದುಕೊಂಡಿದೆ.

* ಪಶುಸಂಗೋಪನೆ ಮತ್ತು ಮೀನುಗಾರಿಕೆ ಕಾರ್ಯದರ್ಶಿಗಳಾದ ವಿನೋದ್ ಪಿ ಕಾವ್ಲೆ ರವರು ಈ ವೆಬ್ ಆಧಾರಿತ ಅಪ್ಲಿಕೇಶನ್ ಸಾಫ್ಟ್ ವೇರ್ ಐದು ಸರ್ಕಾರಿ ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು ಚಂಡೀಗಢದ ಪಶುಸಂಗೋಪನಾ ಇಲಾಖೆಯ ಒಂಬತ್ತು ಪಶುವೈದ್ಯಕೀಯ ಉಪ ಕೇಂದ್ರಗಳನ್ನು ಪೂರೈಸುತ್ತದೆ ಎಂದು ತಿಳಿಸಿದ್ದಾರೆ.

* Skoch SILVER ಪ್ರಶಸ್ತಿಯು ಭಾರತದ ಪ್ರಮುಖ ಥಿಂಕ್ ಟ್ಯಾಂಕ್ ಗಳು ಮತ್ತು ಆಡಳಿತ, ಹಣಕಾಸು ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಲಹಾ ಸಂಸ್ಥೆಗಳಲ್ಲಿ ಒಂದಾದ ಸ್ಕೋಚ್ ಗ್ರೂಪ್ ಪ್ರಸ್ತುತಪಡಿಸಿದ ಪ್ರತಿಷ್ಠಿತ ಮನ್ನಣೆಯಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಯೋಜನೆಗಳು, ಉಪಕ್ರಮಗಳು ಮತ್ತು ಸಂಸ್ಥೆಗಳನ್ನು ಗುರುತಿಸಲು ಮತ್ತು ಅಂಗೀಕರಿಸಲು ಸ್ಕೋಚ್ ಸಿಲ್ವರ್ ಪ್ರಶಸ್ತಿಯು ಗುರಿಯನ್ನು ಹೊಂದಿದೆ.

## ವಾಣಿಜ್ಯ ವಿವಾದಗಳ ಪರಿಹಾರಕ್ಕೆ ವಿವಾದ್ ಸೆ ವಿಶ್ವಾಸ್ - 2 ಯೋಜನೆ ಪ್ರಾರಂಭ



* ಸರ್ಕಾರದ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ "ವಿವಾದ್ ಸೆ ವಿಶ್ವಾಸ್-2' ಯೋಜನೆಯು ಜುಲೈ 15 ರಿಂದ ಪ್ರಾರಂಭವಾಗಲಿದ್ದು, ಗುತ್ತಿಗೆದಾರರಿಗೆ ಅಕ್ಟೋಬರ್ 31ರವರೆಗೆ ಕಾಲಾವಕಾಶ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಮೇ 29 ತಿಳಿಸಿದೆ.

* 2023-24ನೇ ಸಾಲಿನ ಬಜೆಟ್‌ನಲ್ಲಿ ವಿವಾದ್ ಸೆ ವಿಶ್ವಾಸ್ - 2 ಯೋಜನೆಯನ್ನು ಘೋಷಿಸಲಾಗಿದ್ದು, ಕೇಂದ್ರ ಸರ್ಕಾರವು 50ರಷ್ಟು ಷೇರುಪಾಲು ಹೊಂದಿರುವ ಸ್ವಾಯತ್ತ ಸಂಸ್ಥೆಗಳು, ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಮತ್ತು ಉದ್ಯಮಗಳು ಹಾಗೂ ಎಲ್ಲಾ ಸಂಸ್ಥೆಗಳಿಗೂ ಈ ಯೋಜನೆ ಅನ್ವ- ಯಿಸುತ್ತದೆ ಎಂದು ಸಚಿವಾಲಯವು ತಿಳಿಸಿದೆ.

## ಬಾಹ್ಯಾಕಾಶಕ್ಕೆ ಸಾಮಾನ್ಯ ಪ್ರಜೆ : ಚೀನಾ ಸಿದ್ಧತೆ



* ಮಾನವಸಹಿತ ಚಂದ್ರಯಾನ ಗುರಿ ಸಾಧಿಸುವ ಯೋಜನೆ ಹೊಂದಿರುವ ಚೀನಾ ಟಿಯಾನ್‌ಗೊಂಗ್ ಬಾಹ್ಯಾಕಾಶ ಕೇಂದ್ರಕ್ಕೆ ಸಾಮಾನ್ಯ ಪ್ರಜೆಯನ್ನು ಗಗನಯಾತ್ರಿಯಾಗಿ ಕಳುಹಿಸಲು ಚೀನಾ ಸಿದ್ಧತೆ ನಡೆಸಿದೆ.

* 'ಬೀಜಿಂಗ್‌ನ ಬೀಹ್ಯಾಂಗ್ ಯೂನಿವರ್ಸಿಟಿಯ ಪ್ರೊಫೆಸರ್ ಗೂ ಹೈಚಾವೊ ಅವರು ಯೋಜನೆಯ ಅವಧಿಯಲ್ಲಿ ಬಾಹ್ಯಾಕಾಶದಲ್ಲಿ

KPSC Vaani

ವೈಜ್ಞಾನಿಕ ಸಂಶೋಧನೆ ನಡೆಸುವರು' ಎಂದು ಚೀನಾ ಬಾಹ್ಯಾಕಾಶ ಸಂಸ್ಥೆ (ಸಿಎಂಎಸ್‌ಎ) ವಕ್ತಾರರು ಮೇ 29 ರಂದು (ಸೋಮವಾರ) ತಿಳಿಸಿದ್ದಾರೆ.

## ಭಾರತದಿಂದ ಜಲವಿದ್ಯುತ್ ಸ್ಥಾವರ ಅಭಿವೃದ್ಧಿ: ನೇಪಾಳದಿಂದ ಅನುಮೋದನೆ



* ಭಾರತ ಸರ್ಕಾರ ಸ್ವಾಮ್ಯದ ಸಟ್ಲುಜ್ ಜಲ್ ವಿದ್ಯುತ್ ನಿಗಮ್ (SJVN) ಸಂಸ್ಥೆಯು ನೇಪಾಳದಲ್ಲಿ ತನ್ನ ಎರಡನೇ ಜಲವಿದ್ಯುತ್ ಸ್ಥಾವರ ಅಭಿವೃದ್ಧಿಪಡಿಸಲು ಅನುಮೋದನೆ ನೀಡಲು ನೇಪಾಳ ಸರ್ಕಾರ ನಿರ್ಧರಿಸಿದೆ.
* '669- ಮೆಗಾವ್ಯಾಟ್ ಸಾಮರ್ಥ್ಯದ ಅರುಣ್ ಜಲವಿದ್ಯುತ್ ಕೆಳದಂಡೆ ಯೋಜನೆ' ಕರಡು ಒಪ್ಪಂದಕ್ಕೆ ನೇಪಾಳ ಪ್ರಧಾನಿ ಪುಷ್ಪ ಕಮಲ್ ದ ಹಾಲ್ ಪ್ರಚಂಡ ರವರ ನೇತೃತ್ವದ ನೇಪಾಳ ಬಂಡವಾಳ ಹೂಡಿಕೆ ಮಂಡಳಿಯು ಅನುಮೋದನೆಯನ್ನು ನೀಡಿತು.
* ಸಟ್ಲುಜ್ ಜಲ್ ವಿದ್ಯುತ್ ನಿಗಮ್ (SJVN)ಸಂಸ್ಥೆಯು ಪೂರ್ವ ನೇಪಾಳದಲ್ಲಿ ಅರುಣ್ ನದಿ ತೀರದಲ್ಲಿ 900 ಮೆಗಾ ವ್ಯಾಟ್‌ನ ಅರುಣ್-3 ಜಲವಿದ್ಯುತ್ ಯೋಜನೆಯನ್ನು ಅಭಿವೃದ್ಧಿಪಡಿಸುತ್ತಿದೆ.

# 31 May 2023

## ಮೇ 31 ವಿಶ್ವ ತಂಬಾಕು ರಹಿತ ದಿನ




* ಪ್ರತಿ ವರ್ಷ ಮೇ 31 ರಂದು ವಿಶ್ವ ಆರೋಗ್ಯ ಸಂಸ್ಥೆಯು ತಂಬಾಕು ಮತ್ತು ಅದರ ಉತ್ಪನ್ನದ ಸೇವನೆಯಿಂದ ಉಂಟಾಗುವ ಅಪಾಯ ಮತ್ತು ಕುಟುಂಬ, ಸಮಾಜ ಮತ್ತು ಪರಿಸರದ ಮೇಲೆ ಅದರ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲಾಗುತ್ತದೆ.
* ವಿಶ್ವ ತಂಬಾಕು ರಹಿತ ದಿನ 2023 ರ ಥೀಮ್ " ನಮಗೆ ಆಹಾರ ಬೇಕು, ತಂಬಾಕು ಅಲ್ಲ " ಈ ವರ್ಷದ ಥೀಮ್ ಆಗಿದೆ.
* ತಂಬಾಕು ಸೇವನೆಯಿಂದ ಮತ್ತು ಅದರ ಸೇವನೆಯು ಶ್ವಾಸಕೋಶಗಳು, ಧ್ವನಿಪೆಟ್ಟಿಗೆಯ ಬಾಯಿ, ಅನ್ನನಾಳ, ಗಂಟಲು, ಮೂತ್ರಕೋಶ, ಮೂತ್ರಪಿಂಡಗಳು, ಯಕೃತ್ತು, ಹೊಟ್ಟೆ, ಮೇದೋಜ್ಜೀರಕ ಗ್ರಂಥಿ, ಕೊಲೊನ್ ಮತ್ತು ಗರ್ಭಕಂಠದಂತಹ ಹಲವಾರು ರೀತಿಯ ಕ್ಯಾನ್ಸರ್‌ಗೆ ಪ್ರಮುಖ ಕಾರಣವಾಗಿದೆ.

## ಐಪಿಎಲ್ ಚಾಂಪಿಯನ್; ಚೆನ್ನೈ ಸೂಪರ್ ಕಿಂಗ್ಸ್ 5ನೇ ಬಾರಿಗೆ ಟ್ರೋಫಿ ಗೆದ್ದ ಧೋನಿ ಪಡೆ



* ಟಾಟ ಐಪಿಎಲ್ 16 ನೇ ಅವೃತ್ತಿಯನ್ನು ಚನ್ನೈ ಸೂಪರ್ ಕಿಂಗ್ಸ ತಂಡವು ಗುಜರಾತ್ ತಂಡವನ್ನು ಸೋಲಿಸುವುದರ ಮೂಲಕ 2023ನೇ ಸಾಲಿನ 16ನೇ ಅವೃತ್ತಿಯ ಐಪಿಎಲ್ ಟೂರ್ನಿಯನ್ನು ಗೆದ್ದಿದೆ.
* ಐಪಿಎಲ್ ಪಂಡಗಳು 2008 ರಲ್ಲಿ ಪ್ರಾರಂಭವಾಗಿದೆ. ಮೊದಲನೇ ಅವೃತ್ತಿಯ ವಿಜೇತರು ರಾಜಸ್ಥಾನ್
* ಐಪಿಎಲ್ 2023ನೇ ಸಾಲಿನ 16 ನೇ ಅವೃತ್ತಿಯ ಪ್ರಶಸ್ತಿಗಳು :
- ಚೆನ್ನೈ ತಂಡ ನಾಯಕ:- ಮಹೇಂದ್ರ ಸಿಂಗ್ ಧೋನಿ
- ರನ್ನರ್ ಆಫ್ ತಂಡ :- ಗುಜರಾತ್
- ಆರೆಂಜ್ ಕ್ಯಾಪ್ ವಿನ್ನರ್ :- ಶುಭಂ ಗಿಲ್ (ಗುಜರಾತ್ )
- ಪರ್ಪಲ್ ಕ್ಯಾಪ್ :- MD ಶಮಿ (ಗುಜರಾತ್ ತಂಡ )
- ಫೈನಲ್ ಪಂದ್ಯ ಪುರುಷೋತ್ತಮ:- ಡಿವೋನ್ ಕ್ಯಾನವೆ

## ಬೆಂಗಳೂರಿನ ನೂತನ ಕಮಿಷನರ್ ಆಗಿ ಬಿ. ದಯಾನಂದ್ ರವರ ವರ್ಗಾವಣೆ



* ಪ್ರಸ್ತುತ ಕಮಿಷನರ್ ಆಗಿದ್ದ ಪ್ರತಾಪ್ ರೆಡ್ಡಿ ಅವರನ್ನು ಆಂತರಿಕ ಭದ್ರತಾ ವಿಭಾಗಕ್ಕೆ (ಐಎಸ್‌ಡಿ) ಬೆಂಗಳೂರಿನ ನೂತನ ಕಮಿಷನರ್ ಆಗಿ ಬಿ. ದಯಾನಂದ್ ರವರನ್ನು ವರ್ಗಾವಣೆ ಮಾಡಲಾಗಿದೆ.
* ಬೆಂಗಳೂರಿನ 38 ನೇ ಕಮಿಷನರ್ ಆಗಿ ಬಿ. ದಯಾನಂದ್ ರವರು ಮೇ 31 ರಂದು ಅಧಿಕಾರ ವಹಿಸಿಕೊಳ್ಳಲಾಗಿದ್ದು, ವಿಶೇಷ ಕಮಿಷರ್ (ಸಂಚಾರ) ಆಗಿದ್ದ ಎಂ.ಎ. ಸಲೀಂ ಅವರನ್ನು ಸಿಐಡಿ ಡಿಜಿಪಿ ಆಗಿ ಬಡ್ತಿ ನೀಡಿ ವರ್ಗಾವಣೆ ಮಾಡಲಾಗಿದೆ.

## ಮಹಾರಾಷ್ಟ್ರ ಸರ್ಕಾರದ 'ಸ್ಮೈಲ್ ಅಂಬಾಸಿಡರ್' ಆಗಿ ಸಚಿನ್ ತೆಂಡೂಲ್ಕರ್



*ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ-ಭಾರತೀಯ ಜನತಾ ಪಾರ್ಟಿ ಸರ್ಕಾರವು ರಾಜ್ಯದಾದ್ಯಂತ ಬಾಯಿಯ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯದ 'ಸ್ವಚ್ಛ ಮುಖ್ ಅಭಿಯಾನ' ಅಡಿಯಲ್ಲಿ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ರವರನ್ನು ಮಹಾರಾಷ್ಟ್ರದ 'ಸ್ಮೈಲ್ ಅಂಬಾಸಿಡರ್' ಎಂದು ಗುರುತಿಸಲಾಗಿದೆ.
* 'ಸ್ವಚ್ಛ ಮುಖ್ ಅಭಿಯಾನ' ಅಡಿಯಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ್ ಶಿಂಧೆ ಮತ್ತು ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರು ಸಚಿನ್ ತೆಂಡೂಲ್ಕರ್ ಅವರೊಂದಿಗೆ ಮುಂದಿನ ಐದು ವರ್ಷಗಳ ಕಾಲ ಪ್ರಚಾರದ ಬ್ರಾಂಡ್ ಅಂಬಾಸಿಡರ್ ಆಗಿ ಒಪ್ಪಂದಕ್ಕೆ ಸಹಿ ಹಾಕಿದರು.

KPSC Vaani

## ನೈಜೀರಿಯಾದ ಅಧ್ಯಕ್ಷರಾಗಿ ಬೋಲಾ ಟಿನುಬು ಪ್ರಮಾಣ ವಚನ ಸ್ವೀಕಾರ



* ನೈಜೀರಿಯಾದ ರಾಜಧಾನಿ ಅಬುಜಾದ ಈಗಲ್ಸ್ ಸ್ಕ್ವೇರ್‌ನಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಬೋಲಾ ಟಿನುಬು ಅವರು ಮೇ 29 ರಂದು ನೈಜೀರಿಯಾದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು.
* ದೇಶದ ನಿರಂತರ ಆರ್ಥಿಕ ಮತ್ತು ಭದ್ರತಾ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚುತ್ತಿರುವ ಒತ್ತಡದ ಮಧ್ಯೆ ಫೆಬ್ರವರಿ ಚುನಾವಣೆಯಲ್ಲಿ ಟಿನುಬು ರವರ ವಿಜಯವನ್ನು ಸಾಧಿಸಿದ್ದು, ಹೊಸ ನಾಯಕನಾಗಿ ಟಿನುಬು ರವರು ದೇಶದ ಆರ್ಥಿಕ ಸಂಕಷ್ಟ, ಭದ್ರತಾ ಕಾಳಜಿ ಮತ್ತು ರಾಜಕೀಯ ಸ್ಥಿರತೆಯ ಅಗತ್ಯವನ್ನು ಎದುರಿಸಬೇಕು.

## ಹಿಮಾಚಲ ಪ್ರದೇಶ ಹೈಕೋರ್ಟ್ ಸಿಜೆ ಆಗಿ ನ್ಯಾಯಮೂರ್ತಿ ರಾವ್ ಪ್ರಮಾಣ ವಚನ ಸ್ವೀಕಾರ



* ಹಿಮಾಚಲ ಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಮಾಮಿದಣ್ಣ ಸತ್ಯ ರತ್ನ ಶ್ರೀ ರಾಮಚಂದ್ರ ರಾವ್ ರವರನ್ನು 28ನೇ ಮುಖ್ಯ ನ್ಯಾಯಮೂರ್ತಿಯಾಗಿ ಮೇ 30 ರಂದು ಅಧಿಕಾರ ಸ್ವೀಕರಿಸಿದ್ದಾರೆ.
* ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲರಾದ ಶಿವ ಪ್ರತಾಪ್ ಶುಕ್ಲಾ ರವರ ಸಮ್ಮುಖದಲ್ಲಿ ನ್ಯಾಯಮೂರ್ತಿ ಶ್ರೀ ರಾಮಚಂದ್ರ ರಾವ್ ರವರಿಗೆ ಪ್ರಮಾಣ ವಚನವನ್ನು ಬೋಧಿಸಿದರು.

## ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯಲ್ಲಿ ಸಹಯೋಗವನ್ನು ಬಲಪಡಿಸಲು ಭಾರತ, ಸಿಂಗಾಪುರ ಪಾಲುದಾರಿಕೆ



* "ಭಾರತ-ಸಿಂಗಾಪೂರ್ ಜ್ಞಾನ ಸಹಭಾಗಿತ್ವವನ್ನು ಬಲಪಡಿಸುವ ಮತ್ತು ಕೌಶಲ್ಯಾಭಿವೃದ್ಧಿ ಮತ್ತು ಶಿಕ್ಷಣದಲ್ಲಿ ನಮ್ಮ ಬಹುಮುಖಿ ದ್ವಿಪಕ್ಷೀಯ ಸಹಕಾರವನ್ನು ಸಿಂಗಾಪುರದ ವಿದೇಶಾಂಗ ವ್ಯವಹಾರಗಳ ಸಚಿವ ಮತ್ತು ಆತ್ಮೀಯ ಸ್ನೇಹಿತ ವಿವಿಯನ್ ಬಾಲಕೃಷ್ಣನ್ ಅವರೊಂದಿಗೆ ಹೆಚ್ಚಿನ ಎತ್ತರಕ್ಕೆ ಕೊಂಡೊಯ್ಯುವ ಕುರಿತು ಫಲಪ್ರದ ಮಾತುಕತೆಗಳು" ಎಂದು ಕೇಂದ್ರ ಸಚಿವರು ಟ್ವೀಟ್ ಮಾಡಿದ್ದಾರೆ.
* ಕೌಶಲ್ಯ ಅಭಿವೃದ್ಧಿಯ ಮಾರ್ಗಸೂಚಿಯನ್ನು ಕ್ರಾಂತಿಗೊಳಿಸುವ ಗುರಿಯೊಂದಿಗೆ ಮುಂದುವರಿಯುತ್ತಿರುವ ಕೇಂದ್ರ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ರವರು ಮೇ 30 ರಂದು ಸಿಂಗಾಪುರದ ವಿದೇಶಾಂಗ ಸಚಿವರಾದ ವಿವಿಯನ್ ಬಾಲಕೃಷ್ಣನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

## ರಾಮಚಂದ್ರ ಮೂರ್ತಿ ಕೊಂಡುಭಟ್ಲ ಅವರ 'NTR: A Political Biography' ಎಂಬ ಪುಸ್ತಕ ರಚನೆ



* ಪತ್ರಕರ್ತ, ಸಂಪಾದಕ ಮತ್ತು ಬರಹಗಾರರಾದ ರಾಮಚಂದ್ರ ಮೂರ್ತಿ ಕೊಂಡುಭಟ್ಲ ರವರು ರಚಿಸಿದ ನಂದಮೂರಿ ತಾರಕ ರಾಮರಾವ್ (ಎನ್‌ಟಿಆರ್) ಅವರ ನೈಜ ಚಿತ್ರಣವನ್ನು ಒಳಗೊಂಡಿರುವ "ಎನ್‌ಟಿಆರ್-ಎ ಪೊಲಿಟಿಕಲ್ ಬಯೋಗ್ರಫಿ" ಎಂಬ ಹೊಸ ಪುಸ್ತಕವನ್ನು ಬರೆದಿದ್ದಾರೆ.
* ತೆಲುಗು ರಾಜ್ಯಗಳು (ಆಂಧ್ರ ಪ್ರದೇಶ ಮತ್ತು ತೆಲಂಗಾಣ) ಹಾರ್ಪರ್ ಕಾಲಿನ್ಸ್ ಇಂಡಿಯಾ ಪ್ರಕಟಿಸಿದ ಪುಸ್ತಕವು ಎನ್‌ಟಿಆರ್ ಅವರ ಶತಮಾನೋತ್ಸವದ ವರ್ಷವನ್ನು ನೆನಪಿಸಲಾಗಿದ್ದು, ಎನ್‌ಟಿಆರ್ ಅವರ ಜೀವನ ಮತ್ತು ರಾಜ್ಯ ಮತ್ತು ರಾಷ್ಟ್ರಮಟ್ಟದ ರಾಜಕೀಯದ ಮೇಲೆ ಅವರ ಪ್ರಭಾವದ ಹಲವು ಅಂಶಗಳನ್ನು ಪುಸ್ತಕವು ಒಳಗೊಂಡಿದೆ.





ಸ್ಪರ್ಧಾ ಯಶಸ್ಸು ವಾರ್ಷಿಕ ಪ್ರಚಲಿತ ಘಟನೆಗಳು 2023
16% OFF
ಸ್ಪರ್ಧಾ ಯಶಸ್ಸು
2023
COP27
• "ಸ್ಪರ್ಧಾ ಯಶಸ್ಸು ವಾರ್ಷಿಕ ಪ್ರಚಲಿತ ಘಟನೆಗಳು 2023" ಈ ಪುಸ್ತಕದಲ್ಲಿ ಜನವರಿ 2022 ರಿಂದ ಜನವರಿ 2023ರ ಸಂಪೂರ್ಣ ಪ್ರಚಲಿತ ಘಟನೆಗಳನ್ನು ವಿವರಿಸಲಾಗಿದ್ದು, ಮುಂದೆ ನಡೆಯಲಿರುವ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ದೃಷ್ಟಿಯಿಂದ ಓದಲೇಬೇಕಾದ ಪುಸ್ತಕ ಇದಾಗಿರುತ್ತದೆ.
• ಭರ್ಜರಿ 16% ರಿಯಾಯಿತಿ ದರದಲ್ಲಿ ಖರೀದಿಸಿ.
KPSC Vaani
ಭೇಟಿ ನೀಡಿ:
www.kpscvaani.com/books




"ಭಾರತದ ಇತಿಹಾಸ - ಹುಸೇನಪ್ಪ ನಾಯಕ"
20% off
2023ರ
ಭಾರತದ ಇತಿಹಾಸ
KAS/PDO/PSI/FDA/SDA/GPSTR/HSTR/TET/GROUP 'C' & POLICE
• ಖ್ಯಾತ ಸ್ಪರ್ಧಾತ್ಮಕ ಮಾರ್ಗದರ್ಶಕರಾದ ಹುಸೇನಪ್ಪ ನಾಯಕ ಅವರ "ಭಾರತದ ಇತಿಹಾಸ" ಪುಸ್ತಕವು PC ಮತ್ತು PSI ಆಕಾಂಕ್ಷಿಗಳು ಕಡ್ಡಾಯವಾಗಿ ಓದಲೇಬೇಕಾದ ಇತಿಹಾಸ ಪುಸ್ತಕವಾಗಿದ್ದು, ಪ್ರಸ್ತುತ 2023ನೇ ಸಾಲಿನ ಪರಿಷ್ಕೃತ ಆವೃತ್ತಿಯು ಇದೀಗ ಲಭ್ಯ.
• ಪುಸ್ತಕದಲ್ಲಿ 5 ರಿಂದ 12 ನೇ ತರಗತಿವರೆಗಿನ ಇತಿಹಾಸ ವಿಷಯದ ಪ್ರಮುಖ ಮುಖ್ಯಾಂಶಗಳನ್ನು ಅಳವಡಿಸಲಾಗಿದೆ.
• ಇತಿಹಾಸಕ್ಕೆ ಸಂಬಂಧಿಸಿದ ಪ್ರಾಚೀನ, ಮಧ್ಯಕಾಲೀನ, ಆಧುನಿಕ, ಸ್ವಾತಂತ್ರ್ಯ ಹೋರಾಟ ಹಾಗೂ ಕರ್ನಾಟಕ ಇತಿಹಾಸ ವಿಷಗಳನ್ನು ಒಳಗೊಂಡಿದೆ.
• ಪುಸ್ತಕವನ್ನು ಭರ್ಜರಿ ರಿಯಾಯಿತಿ ದರದಲ್ಲಿ ಖರೀದಿಸಲು ಕೂಡಲೇ ಭೇಟಿ ನೀಡಿ.
www.kpscvaani.com/books




SSC MTS/Havaldar ನೇಮಕಾತಿ ಪರೀಕ್ಷಾ ಮಾರ್ಗದರ್ಶಿ-2023 KM Mulla | 25% Discount
KPSC Vaani
SSC
Staff Selection Commission
MTS / Havaldar
1000+
ನೇಮಕಾತಿ ಪರೀಕ್ಷಾ ಮಾರ್ಗದರ್ಶಿ-2023
• SSC MTS/Havaldar ನೇಮಕಾತಿ ಪರೀಕ್ಷಾ ಮಾರ್ಗದರ್ಶಿ-2023 KM ಮುಲ್ಲಾ ಅವರಿಂದ ರಚಿಸಲ್ಪಟ್ಟಿದೆ.ಈ ಪುಸ್ತಕದಲ್ಲಿ ಗಣಿತ, ತಾರ್ಕಿಕ ಸಾಮರ್ಥ್ಯ, ಇಂಗ್ಲಿಷ್ ಹಾಗೂ ಸಾಮಾನ್ಯ ವಿಜ್ಞಾನ ವಿಷಯಗಳ ಪ್ರಶ್ನೋತ್ತರಗಳನ್ನು ಅಧ್ಯಾಯವಾರು ಒಳಪಡಿಸಲಾಗಿರುತ್ತದೆ.
• ಇದೇ ಮೊದಲ ಬಾರಿಗೆ ಈ ಪರೀಕ್ಷೆಯು ಕನ್ನಡದಲ್ಲಿ ನಡೆಸಲಾಗುತ್ತಿದ್ದು, ಈ ಪುಸ್ತಕವನ್ನು 2023ರ ನೂತನ ಪಠ್ಯಕ್ರಮ ಆಧಾರಿತವಾಗಿ ಕನ್ನಡದಲ್ಲಿ ರಚಿಸಲಾಗಿರುತ್ತದೆ.
• ಭರ್ಜರಿ 25% ರಿಯಾಯಿತಿಯೊಂದಿಗೆ ಕೂಡಲೇ ಖರೀದಿಸಿ.
www.kpscvaani.com/books




ಭೂಗೋಳಶಾಸ್ತ್ರ
ಭಾರತದ ಸಂವಿಧಾನ
ಅರ್ಥಶಾಸ್ತ್ರ
ಇತಿಹಾಸ
4 ಪುಸ್ತಕಗಳು ಕೇವಲ 199/- ರೂಪಾಯಿಗಳಿಗೆ
SUPER SALE
Dice ಪಬ್ಲಿಕೇಷನ್ ನ ಈ ಪುಸ್ತಕಗಳು ಆಯಾ ವಿಷಯಗಳ ಪ್ರಮುಖ ಅಂಶಗಳನ್ನು ಒಳಗೊಂಡಿದ್ದು, ಅಭ್ಯರ್ಥಿಗಳು ಓದಿದ ವಿಷವನ್ನು ಈ ಪುಸ್ತಕಗಳ ಮೂಲಕ ಪರೀಕ್ಷಾ ಸಮಯದಲ್ಲಿ ಅತಿ ಬೇಗನೆ ರಿವಿಶನ್ ಮಾಡಿಕೊಳ್ಳಬಹುದು.
ಖರೀದಿಸಲು ಕೂಡಲೇ ಭೇಟಿ ನೀಡಿ :
www.kpscvaani.com


KPSC Vaani
ಕೇವಲ ಒಂದು KPSC Vaani App
ನಿಮ್ಮ ಭವಿಷ್ಯ ಬದಲಿಸಬಲ್ಲುದು...
ಕೂಡಲೇ ಡೌನ್ಲೋಡ್ ಮಾಡಿಕೊಳ್ಳಿ
Scan QR Code
ಸೌಲಭ್ಯಗಳು :
• ಪ್ರತಿನಿತ್ಯದ ಉದ್ಯೋಗದ ಮಾಹಿತಿಗಳು (ಕೇಂದ್ರ/ರಾಜ್ಯ ಸರ್ಕಾರ)
• ದಿನನಿತ್ಯದ ಪ್ರಚಲಿತ ಘಟನೆಗಳು
• ಪ್ರಾಕ್ಟೀಸ್ ಗಾಗಿ PSI PC FDA SDA PDO ಸೇರಿದಂತೆ ಎಲ್ಲ ಹುದ್ದೆಗಳ ಹಳೆಯ ಪ್ರಶ್ನೆ ಪತ್ರಿಕೆಗಳು
• ಭರ್ಜರಿ ರಿಯಾಯಿತಿ ದರದಲ್ಲಿ ಪುಸ್ತಕಗಳು
• ಎಲ್ಲ ಹುದ್ದೆಗಳ ಹಳೆಯ ಪ್ರಶ್ನೆ ಪತ್ರಿಕೆಗಳ PDF ಫೈಲುಗಳು
• ಪ್ರತಿನಿತ್ಯ ಪ್ರಚಲಿತ ಘಟನೆಗಳ ಆಧಾರಿತ ಕ್ವಿಜ್ ಕಾರ್ಯಕ್ರಮ
• ರಾಜ್ಯದ ಸ್ಪರ್ಧಾತ್ಮಕ ತರಬೇತಿ ಕೇಂದ್ರಗಳ ಮಾಹಿತಿ
• ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವ ಅಧ್ಯಯನ ಸಾಮಗ್ರಿಗಳು
• ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಯನ್ನು ನಮ್ಮ ಜಾಲತಾಣದಲ್ಲಿ ಪ್ರತಿದಿನ ಅಪ್ಡೇಟ್ ಮಾಡಲಾಗುವುದು.
Google Play
Google Play Store ನಲ್ಲಿ KPSC Vaani ಅಂತಾ Search ಮಾಡಿ ನಮ್ಮ App ಡೌನ್ಲೋಡ್ ಮಾಡಿಕೊಳ್ಳಬಹುದು
ಕೂಡಲೇ ಭೇಟಿ ನೀಡಿ :
www.kpscvaani.com